ಸಂಪುಟ: 14 Volume | ಸಂಚಿಕೆ: 112 Issue | ಪುಟಗಳು 08 Pages | ಶುಕ್ರವಾರ 07 ಆಗಸ್ಟ್ 2026 | ₹4 | PRGINO.120927 (RNINO:KARKAN/2011/48371) | BDR/054/2026-2027 | www.mallammanudi.in | mallammanudi@gmail.com | 9448604450, 9845028349

ಬೆಂಗಳೂರು | ಹುಬ್ಬಳ್ಳಿ | ಬೀದರ ಆವೃತ್ತಿ: ಕಲ್ಬುರ್ಗಿ, ಯಾದಗಿರಿ, ರಾಯಚೂರು, ಕೊಪ್ಪಳ, ಬಳ್ಳಾರಿ, ಬಾಗಲಕೋಟೆ, ವಿಜಯನಗರ & ವಿಜಯಪುರ ಜಿಲ್ಲೆಗಳಲ್ಲಿ ಏಕಕಾಲಕ್ಕೆ ಪ್ರಕಟ

# ಮಲ್ಲಮ್ಮ ನುಡಿ

ಕನ್ನಡ ಕಿರಣ

Mallammanudi Regional News Paper

ಪ್ರಾದೇಶಿಕ ಕನ್ನಡ ದೈನಿಕ

ಸಂಪಾದಕರು: ರಮೇಶ ರೆಡ್ಡಿ

**ಬೆಳಗು**

ಕರುಣೆ ಹೃದಯದ ಅಂತರಾಳದಿಂದ ಬರಬೇಕು. ಅದೇ ನಿಜವಾದ ಕರುಣೆ.

–ಮಹಾತ್ಮಾ ಗಾಂಧಿ



ಬೆಂಗಳೂರು: ಇಂಟರ್ ನ್ಯಾಷನಲ್ ಸೆಂಟರ್‌ನಲ್ಲಿ ಸಯಂತನಿ ಸಹಾ ಅವರ ಹಿಂದಿ ಪುಸ್ತಕ ಅನಾವರಣ ಮಾಡಲಾಯಿತು.

## ತಾಲೂಕು ವರದಿಗಾರರಾಗಿ ದೀಪಕ ಜಮಾದಾರ ನೇಮಕ



**ಹುಮನಾಬಾದ್:** ಪ್ರಾದೇಶಿಕ ಕನ್ನಡ ದಿನಪತ್ರಿಕೆ ಮಲ್ಲಮ್ಮ ನುಡಿಯ ಹುಮನಾಬಾದ್ ತಾಲೂಕು ವರದಿಗಾರರಾಗಿ ದೀಪಕ ಜಮಾದಾರ ಅವರನ್ನು ನೇಮಕ ಮಾಡಲಾಗಿದೆ. ಪತ್ರಿಕೆಯ ಸಂಪಾದಕ ಹಾಗೂ ಆಡಳಿತ ಮಂಡಳಿ ಈ ನೇಮಕಾತಿ ಆದೇಶವನ್ನು ಪ್ರಕಟಿಸಿದ್ದು, ಪತ್ರಿಕೋದ್ಯಮದ ಮೂಲಕ ಜನರ ಸಮಸ್ಯೆಗಳಿಗೆ ಧ್ವನಿಯಾಗಿ, ನಿಷ್ಪಕ್ಷಪಾತ ಹಾಗೂ ಜವಾಬ್ದಾರಿಯುತ ಸುದ್ದಿಗಳನ್ನು ಜನರಿಗೆ ತಲುಪಿಸುವ ನಿಟ್ಟಿನಲ್ಲಿ ಕಾರ್ಯನಿರ್ವಹಿಸುವಂತೆ ದೀಪಕ ಜಮಾದಾರ ಅವರಿಗೆ ಸೂಚಿಸಲಾಗಿದೆ. ಈ ಸಂದರ್ಭದಲ್ಲಿ ಮಾತನಾಡಿದ ಪತ್ರಿಕೆ ಆಡಳಿತ ಮಂಡಳಿ, ಮಲ್ಲಮ್ಮ ನುಡಿ ಪತ್ರಿಕೆ ಜನಪರ ಹಾಗೂ ಸಮಾಜಮುಖಿ ಪತ್ರಿಕೋದ್ಯಮಕ್ಕೆ ಸದಾ ಬದ್ಧವಾಗಿದ್ದು, ಹುಮನಾಬಾದ್ ತಾಲೂಕಿನ ಅಭಿವೃದ್ಧಿ, ಜನಸಮಸ್ಯೆಗಳು ಹಾಗೂ ಸರ್ಕಾರದ ಯೋಜನೆಗಳ ಕುರಿತು ಸಮಗ್ರ ವರದಿಗಳನ್ನು ಪ್ರಕಟಿಸುವಲ್ಲಿ ದೀಪಕ ಜಮಾದಾರ ಅವರ ಸೇವೆ ಮಹತ್ವದ್ದಾಗಲಿದೆ ಎಂದು ವಿಶ್ವಾಸ ವ್ಯಕ್ತಪಡಿಸಿದೆ. ತಮ್ಮ ಮೇಲೆ ವಿಶ್ವಾಸವಿಟ್ಟು ಜವಾಬ್ದಾರಿ ನೀಡಿದ ಪತ್ರಿಕೆ ಆಡಳಿತ ಮಂಡಳಿಗೆ ದೀಪಕ ಜಮಾದಾರ ಅವರು ಕೃತಜ್ಞತೆ ಸಲ್ಲಿಸಿ, ನಿಷ್ಪಕ್ಷಪಾತ, ಪ್ರಾಮಾಣಿಕ ಹಾಗೂ ಜನಪರ ಪತ್ರಿಕೋದ್ಯಮ ನಡೆಸುವುದಾಗಿ ಭರವಸೆ ನೀಡಿದರು.



ಸಿಎಂ ಡಿ ಕೆ ಶಿವಕುಮಾರ್ ಅವರನ್ನು ಆಂಥ್ರೋಪಿಕ್ ಸಂಸ್ಥೆಯ ಅಂತಾರಾಷ್ಟ್ರೀಯ ನೀತಿ ಮುಖ್ಯಸ್ಥರಾದ ಮೈಕಲ್ ಸೆಲ್ಲಿಟ್ಟೋ ಅವರ ನೇತೃತ್ವದ ನಿಯೋಗವು ವಿಧಾನಸೌಧದಲ್ಲಿ ಗುರುವಾರ ಭೇಟಿ ಮಾಡಿ ಸಮಾಲೋಚನೆ ನಡೆಸಿತು.




## ಬೆಳ್ಳಿ ಮೂರ್ತಿ ಕಳವು ಪ್ರಕರಣ: ಬಂಧನ

• ಮಲ್ಲಮ್ಮ ನುಡಿ ವಾರ್ತೆ ವಿಜಯಪುರ



ಜಿಲ್ಲೆಯ ಮುದ್ದೇಬಿಹಾಳ ತಾಲೂಕಿನ ಬಸರಕೋಡ ಗ್ರಾಮದ ಪ್ರಸಿದ್ಧ ಪವಾಡ ಬಸವೇಶ್ವರ ದೇವಾಲಯದಲ್ಲಿ ನಡೆದಿದ್ದ ಭಾರಿ ಮೌಲ್ಯದ ಬೆಳ್ಳಿ ಮೂರ್ತಿ ಕಳ್ಳತನ ಪ್ರಕರಣವನ್ನು ಪೊಲೀಸರು ಯಶಸ್ವಿಯಾಗಿ ಭೇದಿಸಿದ್ದಾರೆ.

ಪ್ರಕರಣಕ್ಕೆ ಸಂಬಂಧಿಸಿದಂತೆ ಗುಜರಾತ್ ಮೂಲದ ಮೂವರು ಖದೀಮರನ್ನು ಬಂಧಿಸಲಾಗಿದ್ದು, ಅವರಿಂದ ಲಕ್ಷಾಂತರ ರೂಪಾಯಿ ಮೌಲ್ಯದ ಬೆಳ್ಳಿ ಹಾಗೂ ಸಾಮಗ್ರಿಗಳನ್ನು ವಶಪಡಿಸಿಕೊಳ್ಳಲಾಗಿದೆ. ಕಳೆದ 05.07.26 ರ ತಡರಾತ್ರಿ ಬಸರಕೋಡದ ಪವಾಡ ಬಸವೇಶ್ವರ ದೇಗುಲಕ್ಕೆ ನುಗ್ಗಿದ್ದ ಕಳ್ಳರು, ಸುಮಾರು 51 ಲಕ್ಷ ರೂಪಾಯಿ ಮೌಲ್ಯದ 32 ಕೆ.ಜಿ ತೂಕದ ಬೆಳ್ಳಿ ಮೂರ್ತಿಯನ್ನು ಕಳವು ಮಾಡಿಕೊಂಡು ಪರಾರಿಯಾಗಿದ್ದರು. ಈ ಕೃತ್ಯದ ಕುರಿತು ತನಿಖೆ ತೀವ್ರಗೊಳಿಸಿದ್ದ ಪೊಲೀಸರು, ಗುಜರಾತ್ ಮೂಲದ ಸುರೇಶಕುಮಾರ್ ಸೋನಿ (51), ಬ್ರಹ್ಮಾರ್ ನೇಟ್ (35) ಮತ್ತು ಇಂದ್ರಜೀತ್ ನೇಟ್ (33) ಎಂಬ ಮೂವರು ಆರೋಪಿಗಳನ್ನು ಬಂಧಿಸುವಲ್ಲಿ ಯಶಸ್ವಿಯಾಗಿದ್ದಾರೆ. ದೇಗುಲದಿಂದ ಕದ್ದ ಬೆಳ್ಳಿ ಮೂರ್ತಿಯನ್ನು ಆರೋಪಿಗಳು ಕರಗಿಸಿ ಗಟ್ಟಿಗಳಾಗಿ ಪರಿವರ್ತಿಸಿದ್ದರು. ಸದ್ಯ ಬಂಧಿತರಿಂದ 23 ಕೆ.ಜಿ ಕರಗಿಸಿದ ಬೆಳ್ಳಿ ಗಟ್ಟಿ, 4 ಕೆ.ಜಿ ಮೂರ್ತಿಯ ಕತ್ತರಿಸಿದ ತುಂಡುಗಳು, 67 ಸಾವಿರ ರೂಪಾಯಿ ನಗದು ಹಣ ಹಾಗೂ ಕೃತ್ಯಕ್ಕೆ ಬಳಸಿದ್ದ ಕಾರನ್ನು ಪೊಲೀಸರು ಜಪ್ತಿ ಮಾಡಿದ್ದಾರೆ. ವಶಪಡಿಸಿಕೊಂಡ ಬೆಳ್ಳಿ, ಕಾರು ಮತ್ತು ಇತರೆ ವಸ್ತುಗಳ ಒಟ್ಟು ಮೌಲ್ಯ ಸುಮಾರು 52.70 ಲಕ್ಷ ರೂಪಾಯಿ ಎಂದು ಅಂದಾಜಿಸಲಾಗಿದೆ.

## ಶೀಘ್ರದಲ್ಲೇ AI ಯೂನಿವರ್ಸಿಟಿ ಸ್ಥಾಪನೆ..!

• ಮಲ್ಲಮ್ಮ ನುಡಿ ವಾರ್ತೆ ಬೆಂಗಳೂರು

ರಾಜ್ಯ ಸರ್ಕಾರ ಶೀಘ್ರದಲ್ಲೆ ರಾಜಧಾನಿ ಬೆಂಗಳೂರಿನಲ್ಲಿ ಕೃತಕ ಬುದ್ಧಿಮತ್ತೆ ವಿಶ್ವವಿದ್ಯಾಲಯ ಸ್ಥಾಪಿಸುವ ನಿಟ್ಟಿನಲ್ಲಿ ಮಹತ್ವದ ಹೆಜ್ಜೆ ಇಡಲಿದೆ ಎಂದು ಗೃಹ ಮತ್ತು ಐಟಿ,ಬಿಟಿ, ಇ–ಆಡಳಿತ ಸಚಿವ ಪ್ರಿಯಾಂಕ್ ಖರ್ಗೆ ತಿಳಿಸಿದರು.

ಡಾ. ಮನಮೋಹನ್ ಸಿಂಗ್ ಬೆಂಗಳೂರು ನಗರ ವಿಶ್ವವಿದ್ಯಾಲಯದಲ್ಲಿರುವ ವೋಲ್ವರ್ ಹ್ಯಾಂಪ್ಟನ್–ಬೆಂಗಳೂರು ಸಂಶೋಧನೆ ಮತ್ತು ಅನ್ವೇಷಣೆ ಕೇಂದ್ರ, ಇಂಗ್ಲೆಂಡಿನ ವೋಲ್ವರ್ ಹ್ಯಾಂಪ್ಟನ್ ವಿಶ್ವವಿದ್ಯಾಲಯದ ಸಹಯೋಗದಲ್ಲಿ 'ಸುಸ್ಥಿರ ಅಭಿವೃದ್ಧಿ ಗುರಿಗಳನ್ನು ಮುನ್ನಡೆಸಲು ಕೃತಕ ಬುದ್ಧಿಮತ್ತೆಯ ಬಳಕೆ' ಎಂಬ ವಿಷಯ ಕುರಿತು ಸೆಂಟ್ರಲ್ ಕಾಲೇಜಿನ ಜ್ಞಾನಜ್ಯೋತಿ ಸಭಾಂಗಣದಲ್ಲಿ ಆಯೋಜಿಸಿರುವ ಅಂತಾರಾಷ್ಟ್ರೀಯ ಸಮ್ಮೇಳನ ಉದ್ಘಾಟಿಸಿ ಅವರು ಮಾತನಾಡಿದರು.



ಸರ್ಕಾರ 'ಸ್ಥಳೀಯ ಕೌಶಲಾಭಿವೃದ್ಧಿ ಮತ್ತು ಜಾಗತಿಕ ಉದ್ಯೋಗ ನಿರ್ವಹಣೆ' ಪರಿಕಲ್ಪನೆ ಆಧಾರಿತ 'ನಿಪುಣ ಕರ್ನಾಟಕ' ಯೋಜನೆಯ ಮೂಲಕ ವಿದ್ಯಾರ್ಥಿಗಳು ಮತ್ತು ಯುವಜನರಿಗೆ ಉತ್ತಮ ಭವಿಷ್ಯ ರೂಪಿಸುವ ನಿಟ್ಟಿನಲ್ಲಿ ಅಗತ್ಯ ಮೂಲಸೌಕರ್ಯ ಹಾಗೂ ಮಾರ್ಗದರ್ಶನ ಒದಗಿಸಲು 300 ಕೋಟಿ ರೂ.ಗಳನ್ನು ಮೀಸಲಿಟ್ಟಿದೆ ಎಂದು ಅವರು ತಿಳಿಸಿದರು.

# ಖಾತೆ ಹಂಚಿಕೆ ಮತ್ತೆ ಕ್ಯಾತೆ

### ಮುಖ್ಯಮಂತ್ರಿ ಡಿಕೆಶಿವಕುಮಾರ್ ಅವರ ನೇತೃತ್ವದ ಸರ್ಕಾರದಲ್ಲಿ ಎಲ್ಲವೂ ಗೊಂದಲಮಯ

• ಮಲ್ಲಮ್ಮ ನುಡಿ ವಾರ್ತೆ ಬೆಂಗಳೂರು

ಒಂದೆಡೆ ಸಚಿವ ಸ್ಥಾನ ವಂಚಿತರ ಆಕ್ರೋಶ, ಮತ್ತೊಂದು ಕಡೆ ಖಾತೆ ಹಂಚಿಕೆಯ ಕಗ್ಗಂಟು ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಸೇರಿ ಕಾಂಗ್ರೆಸ್‌ನ ಹಿರಿಯ ನಾಯಕರನ್ನು ಕಾಡತೊಡಗಿದೆ.

**ತಣ್ಣಗಾಗದ ಕೋಪ:** ಚಿಕ್ಕಬಳ್ಳಾಪುರದಲ್ಲಿ ಎಸ್.ಎನ್.ಸುಬ್ಬಾರೆಡ್ಡಿ, ರಾಯಚೂರಿನಲ್ಲಿ ಹಂಪನಗೌಡ ಬಾದರ್ಲಿ, ಬೆಳಗಾವಿಯಲ್ಲಿ ಲಕ್ಷ್ಮೀ ಹೆಬ್ಬಾಳ್ಕರ್, ಬಾಗಲಕೋಟೆಯಲ್ಲಿ ಆರ್.ಬಿ.ತಿಮಾಪೂರ್, ಸಚಿವ ಸ್ಥಾನ ಸಿಗದ ಕಾರಣಕ್ಕಾಗಿ ಬೆಂಗಳೂರಿನಲ್ಲಿ ಎಂ.ಕೃಷ್ಣಪ್ಪ, ಕೋಲಾರದಲ್ಲಿ ಎಸ್.ಎನ್.ನಾರಾಯಣ ಸ್ವಾಮಿ, ಕೆ.ವೈ.ನಂಜೇಗೌಡ ಸೇರಿದಂತೆ ಹಲವರ ಸಿಟ್ಟು ತಣ್ಣಗಾಗಿಲ್ಲ.

**ಗಣ್ಯರು ಅಖಾಡಕ್ಕೆ:** ಎಐಸಿಸಿ ಪ್ರಧಾನ ಕಾರ್ಯದರ್ಶಿ ರಣದೀಪ್ ಸಿಂಗ್ ಸುರ್ಜೇವಾಲ್ ಖುದ್ದು ಬೆಂಗಳೂರಿಗೆ ಆಗಮಿಸಿ ಅತೃಪ್ತ ಹಿರಿಯ ಶಾಸಕರ ಮನೆಗಳಿಗೆ ಭೇಟಿ ನೀಡಿ ಸಮಾಧಾನಿಸುವ ಯತ್ನ ಮಾಡಿದ್ದಾರೆ. ಮತ್ತೊಂದೆಡೆ ಕೆಪಿಸಿಸಿ ಅಧ್ಯಕ್ಷ ಬಿ.ಕೆ.ಹರಿಪ್ರಸಾದ್ ಕೂಡ ಅಖಾಡಕ್ಕಿಳಿದಿದ್ದಾರೆ. ಸಿದ್ದರಾಮಯ್ಯ ಮಾತ್ರ ಮೈಸೂರಿಗೆ ತೆರಳಿ ಮೌನವಾಗಿದ್ದಾರೆ.

### ಕ್ಷಮೆ ಕೇಳಿದ್ರೆ ಮುಖ್ಯಮಂತ್ರಿ?

ಏತನ್ಮಧ್ಯೆ ಮಧ್ಯೆ ರಾತ್ರಿಯವರೆಗೂ ಸಿಎಂ ಡಿ.ಕೆ.ಶಿವಕುಮಾರ್– ರಣದೀಪ್ ಸಿಂಗ್ ಸುರ್ಜೇವಾಲ ಕೆಲವು ಶಾಸಕರ ಜೊತೆ ಚರ್ಚೆ ನಡೆಸಿದ್ದಾರೆ.ಶಾಸಕ ಎಂ.ಕೃಷ್ಣಪ್ಪ, ಶಾಸಕ ಪ್ರಿಯಾಕೃಷ್ಣ ಅವರ ಮನೆಗಳಿಗೆ ಡಿ.ಕೆ.ಶಿವಕುಮಾರ್ ಮತ್ತು ರಣದೀಪ್ ಸಿಂಗ್ ಸುರ್ಜೇವಾಲ ಭೇಟಿ ನೀಡಿದ್ದು, ತಪ್ಪಾಗಿದೆ ಕ್ಷಮಿಸಿ ಎಂದಿದ್ದು, ಸೂಕ್ತ ವ್ಯವಸ್ಥೆ ಕಲ್ಪಿಸುವುದಾಗಿ ಭರವಸೆ ನೀಡಿದ್ದಾರೆ ಎಂದು ಕೃಷ್ಣಪ್ಪ ತಿಳಿಸಿದ್ದಾರೆ.



### ಹೈಕಮಾಂಡ್ ವರಿಷ್ಠರಿಗೆ ಬಿಸಿ ತುಪ್ಪ

ಎಸ್.ಎನ್.ನಾರಾಯಣಸ್ವಾಮಿ ಅವರ ಸಿಟ್ಟು ಇನ್ನೂ ತಣ್ಣಗಾಗಿಲ್ಲ, ಇವರು ಸೇರಿ ಮಾಜಿ ಸಚಿವ ಎಚ್.ಕೆ.ಪಾಟೀಲ್, ದಿನೇಶ್ ಗುಂಡೂರಾವ್ ಅವರ ಜೊತೆ–ಗೂ ಹರಿಪ್ರಸಾದ್ ಚರ್ಚೆ ನಡೆಸಿದ್ದಾರೆ. ಒಂದೆಡೆ ಅತೃಪ್ತರನ್ನು ಸಮಾಧಾನ ಪಡಿಸುವ ಪ್ರಕ್ರಿಯೆಗಳು ಬಿರುಸಿನಿಂದ ನಡೆಯುತ್ತಿದ್ದರೆ, ಮತ್ತೊಂದೆಡೆ ಖಾತೆ ಹಂಚಿಕೆ ಕುರಿತ ಕಗ್ಗಂಟು ಬಿಗಿಯಾಗುತ್ತಿದ್ದು, ವರಿಷ್ಠರಿಗೆ ಬಿಸಿ ತುಪ್ಪವಾಗಿದೆ.

### ಟಿಬಿ ಜಯಚಂದ್ರ ಆಕ್ರೋಶ

ಸಿಎಂ ಅವರು, ಯಶವಂತಗೌಡ ರಾಯಪಾಟೀಲ್ ಅವರ ಮನವೊಲಿಸಿದ್ದರಿಂದ ಅವರು ರಾಜೀನಾಮೆಯನ್ನು ಹಿಂಪಡೆದಿದ್ದಾರೆ. ಶಿರಾ ಕ್ಷೇತ್ರದ ಹಿರಿಯ ಶಾಸಕ ಟಿ.ಬಿ.ಜಯಚಂದ್ರ ಅವರ ಮನೆಗೆ ಬಿ.ಕೆ.ಹರಿಪ್ರಸಾದ್ ಭೇಟಿ ನೀಡಿದ್ದರು. ಅಲ್ಲಿ ರಾಮದುರ್ಗ ಶಾಸಕ ಪಿ.ಎಂ.ಅಶೋಕ್ ಕೂಡ ಹಾಜರಿದ್ದರು. ಮಾತುಕತೆ ಸಂದರ್ಭದಲ್ಲಿ ಜಯಚಂದ್ರ ತಮ್ಮ ಆಕ್ರೋಶ ಹೊರ ಹಾಕಿದ್ದಾರೆ.

### ಪ್ರಮುಖ ಖಾತೆಗೆ ಕಣ್ಣು

ಬಹಳಷ್ಟು ಮಂದಿ ಹಿರಿಯ ಶಾಸಕರು ತಮಗೆ ಪ್ರಮುಖ ಖಾತೆಗಳೇ ಬೇಕು ಎಂದು ಪಟ್ಟು ಹಿಡಿದಿದ್ದಾರೆ. ಮೊದಲ ಹಂತದಲ್ಲಿ ಸಂಪುಟ ಸೇರಿದವರಿಗೆ ಅದೃಷ್ಟ ಎಂಬಂತೆ ಪ್ರಮುಖ ಖಾತೆಗಳು ಹಂಚಿಕೆಯಾಗಿವೆ. ಬಾಕಿ ಉಳಿದಂತೆ ಸಮಾಜ ಕಲ್ಯಾಣ, ಕನ್ನಡ ಸಂಸ್ಕೃತಿ, ವಸತಿ, ಕೃಷಿ, ಅರಣ್ಯ, ಅಬಕಾರಿ, ಹಿಂದುಳಿದ ವರ್ಗಗಳ ಕಲ್ಯಾಣ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ, ಸೇರಿದಂತೆ ಹಲವು ಪ್ರಮುಖ ಖಾತೆಗಳ ಮೇಲೆ ನೂತನ ಸಚಿವರು ಕಣ್ಣಿಟ್ಟಿದ್ದಾರೆ.

## ಗಾಂಧಿ ಕನಸು ನನಸು ಮಾಡುವ ಖಾತೆ ಸಿಕ್ಕಿದೆ: ಖಂಡ್ರೆ

• ಮಲ್ಲಮ್ಮ ನುಡಿ ವಾರ್ತೆ ಬೆಂಗಳೂರು



ಮಹಾತ್ಮಾ ಗಾಂಧೀ ಅವರು ಹಳ್ಳಿಗಳೇ ಈ ದೇಶದ ಆತ್ಮ, ಗ್ರಾಮಾಭಿವೃದ್ಧಿ ಆಗದೆ ದೇಶದ ಅಭಿವೃದ್ಧಿ ಸಾಧ್ಯವಿಲ್ಲ ಎಂದು ಪ್ರತಿಪಾದಿಸಿದ್ದು, ಅವರ ಕನಸು ನನಸು ಮಾಡುವ ಖಾತೆ ಲಭಿಸಿದೆ ಎಂದು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವ ಈಶ್ವರ ಬಿ ಖಂಡ್ರೆ ಹೇಳಿದ್ದಾರೆ. ವಿಕಾಸಸೌಧದ ತಮ್ಮ ಕಚೇರಿಯಲ್ಲಿಂದು ಸುದ್ದಿಗಾರ ಪ್ರಶ್ನೆಗೆ ಉತ್ತರಿಸಿದ ಅವರು, ಗ್ರಾಮೀಣ ಪ್ರದೇಶದ ಅಭಿವೃದ್ಧಿ ಆಗಬೇಕು, ಗ್ರಾಮೀಣ ಜನರ ಜೀವನಮಟ್ಟ ಸುಧಾರಣೆ ಆಗಬೇಕು ಎಂಬ ಸಂಕಲ್ಪದೊಂದಿಗೆ ತಾವು ಕಾರ್ಯನಿರ್ವಹಿಸುತ್ತಿರುವುದಾಗಿ ತಿಳಿಸಿದರು. ತಮಗೆ ಲಭಿಸಿರುವ ಖಾತೆಯಲ್ಲಿ ಪ್ರಾಮಾಣಿಕ ಸೇವೆ ಮಾಡಲು ಹಗಲಿರುಳು ಶ್ರಮಿಸುತ್ತಿರುವುದಾಗಿ ಹೇಳಿದ ಖಂಡ್ರೆ, ತಮಗೆ ಸಚಿವಸ್ಥಾನ ನೀಡಿ, ಇಂತಹ ಉತ್ತಮ ಜವಾಬ್ದಾರಿ ನೀಡಿದ ಮುಖ್ಯಮಂತ್ರಿಗಳು, ಮಾಜಿ ಮುಖ್ಯಮಂತ್ರಿಗಳು ಹಾಗೂ ಪಕ್ಷದ ಎಲ್ಲ ವರಿಷ್ಠರಿಗೆ ಧನ್ಯವಾದ ಅರ್ಪಿಸುವುದಾಗಿ ತಿಳಿಸಿದರು.





## ಕೆಡಿಪಿ ನಾಮನಿರ್ದೇಶನ ಸದಸ್ಯರಿಗೆ ನೀತಿ ಪಾಠ

• ಮಲ್ಲಮ್ಮ ನುಡಿ ವಾರ್ತೆ ಹುಮನಾಬಾದ್

ಕೆಡಿಪಿ (ಜಿಲ್ಲಾ ಅಭಿವೃದ್ಧಿ ಸಮನ್ವಯ ಮತ್ತು ಮೇಲ್ವಿಚಾರಣಾ ಸಮಿತಿ) ನಾಮನಿರ್ದೇಶನ ಸದಸ್ಯರು ಜನರ ಸಮಸ್ಯೆಗಳ ಪರಿಹಾರಕ್ಕೆ ಆದ್ಯತೆ ನೀಡಬೇಕು ಎಂದು ಮಾಜಿ ಸಚಿವ ರಾಜಶೇಖರ ಬಿ. ಪಾಟೀಲ ಹೇಳಿದ್ದಾರೆ.

ನೂತನ ಕೆಡಿಪಿ ಸದಸ್ಯರು ಹಮ್ಮಿಕೊಂಡಿದ್ದ ಸನ್ಮಾನ ಸ್ವೀಕರಿಸಿ ಗುರುವಾರ ಮಾತನಾಡಿದ ಅವರು, ಹುದ್ದೆಯನ್ನು ವೈಯಕ್ತಿಕ ಪ್ರಚಾರ ಅಥವಾ ಪ್ರತಿಷ್ಠೆಗೆ ಬಳಸದೇ, ಜನಸೇವೆಯ ಮನೋಭಾವದಿಂದ ಕಾರ್ಯನಿರ್ವಹಿಸಬೇಕು.

ಸಾರ್ವಜನಿಕರ ವಿಶ್ವಾಸವನ್ನು ಉಳಿಸಿಕೊಳ್ಳುವುದು ಪ್ರತಿಯೊಬ್ಬ ಸದಸ್ಯರ ಜವಾಬ್ದಾರಿಯಾಗಿದೆ. ಸರ್ಕಾರದ ಅಭಿವೃದ್ಧಿ ಯೋಜನೆಗಳು ಅರ್ಹ ಫಲಾನುಭವಿಗಳಿಗೆ ತಲುಪುವಂತೆ ಅಧಿಕಾರಿಗಳೊಂದಿಗೆ ಸಮನ್ವಯ ಸಾಧಿಸಿ ಕೆಲಸ ಮಾಡಬೇಕು ಎಂದು ಅವರು ಸಲಹೆ ನೀಡಿದ್ದಾರೆ. ಡಿಸಿಸಿ ಬ್ಯಾಂಕ್ ಉಪಾಧ್ಯಕ್ಷ ಅಭಿಷೇಕ್ ಪಾಟೀಲ, ಅಫ್ಸರ್ ಮಿಯಾ ಸೇರಿದಂತೆ ಇತರರಿದ್ದರು.



ಕೆಡಿಪಿ ಸಭೆಗಳಲ್ಲಿ ಕುಡಿಯುವ ನೀರು, ರಸ್ತೆ, ಆರೋಗ್ಯ, ಶಿಕ್ಷಣ, ರೈತರ ಸಮಸ್ಯೆಗಳು ಸೇರಿದಂತೆ ಜನಸಾಮಾನ್ಯರ ಪ್ರಮುಖ ಸಮಸ್ಯೆಗಳನ್ನು ಪರಿಣಾಮಕಾರಿಯಾಗಿ ಪ್ರಸ್ತಾಪಿಸಿ ಅವುಗಳಿಗೆ ಶೀಘ್ರ ಪರಿಹಾರ ದೊರಕುವಂತೆ ಒತ್ತಾಯಿಸಬೇಕು.

–ರಾಜಶೇಖರ ಬಿ. ಪಾಟೀಲ, ಮಾಜಿ ಸಚಿವ

**ಹುದ್ದೆ: ಜನರ ಸೇವೆಗೆ ದೊರೆತ ಅವಕಾಶ**


ಹುದ್ದೆ ಎಂದರೆ ಅದು ಅಧಿಕಾರ ಪ್ರದರ್ಶನಕ್ಕೆ ಅಲ್ಲ, ಜನರ ಸೇವೆಗೆ ದೊರೆತ ಅವಕಾಶ. ಪಾರದರ್ಶಕತೆ, ಪ್ರಾಮಾಣಿಕತೆ ಮತ್ತು ಜವಾಬ್ದಾರಿಯುತ ಕಾರ್ಯವೈಖರಿಯಿಂದ ಸಾರ್ವಜನಿಕರ ವಿಶ್ವಾಸ ಗಳಿಸುವಂತೆ ನಾಮನಿರ್ದೇಶನ ಸದಸ್ಯರಿಗೆ ಪಾಟೀಲ್ ಅವರು ಕರೆ ನೀಡಿದ್ದಾರೆ.

## ಕೆಮಿಕಲ್ ಕಾರ್ಖಾನೆಗಳ ಸ್ಥಳಾಂತರಕ್ಕೆ ಆಗ್ರಹ

• ಮಲ್ಲಮ್ಮ ನುಡಿ ವಾರ್ತೆ ಹುಮನಾಬಾದ್

ಇಲ್ಲಿನ ಕೈಗಾರಿಕಾ ಪ್ರದೇಶದಲ್ಲಿರುವ ಕೆಮಿಕಲ್ ಕಾರ್ಖಾನೆಗಳಿಂದ ಪರಿಸರ ಮಾಲಿನ್ಯ ಉಂಟಾಗುತ್ತಿದ್ದು, ಸಾರ್ವಜನಿಕರ ಆರೋಗ್ಯ ಹಾಗೂ ಜಲಮೂಲಗಳ ಮೇಲೆ ದುಷ್ಪರಿಣಾಮ ಬೀರುತ್ತಿದೆ ಎಂಬ ಆರೋಪಗಳು ಕೇಳಿಬರುತ್ತಿವೆ. ಆದ್ದ–ರಿಂದ ಜನವಸತಿ ಪ್ರದೇಶಗಳಿಗೆ ಸಮೀಪದಲ್ಲಿರುವ ಇಂತಹ ಕೇಮಿಕಲ್ ಕಾರ್ಖಾನೆಗಳನ್ನು ಸೂಕ್ತ ಮತ್ತು ಸುರಕ್ಷಿತ ಸ್ಥಳಕ್ಕೆ ಸ್ಥಳಾಂತರಿಸಬೇಕು ಎಂದು ಮಾಣಿಕನಗರ, ಗಡವಂತಿ, ಮೊಳಕೆರಾ, ಹುಮನಾಬಾದ್ ಸೇರಿದಂತೆ ಇತರೆ ಸಾರ್ವಜನಿಕರು ಹಾಗೂ ವಿವಿಧ ಸಂಘಟನೆಗಳು ಸರ್ಕಾರವನ್ನು ಒತ್ತಾಯಿಸಿವೆ.

**ಕಾರ್ಖಾನೆಗಳ ವಿರುದ್ಧ ಕಾನೂನು ಕ್ರಮ?:** ಕೇಮಿಕಲ್ ತ್ಯಾಜ್ಯ ಮತ್ತು ಮಾಲಿನ್ಯ ನಿಯಂತ್ರಣಕ್ಕೆ ಸಂಬಂಧಿಸಿದ ನಿಯಮಗಳನ್ನು ಕಟ್ಟುನಿಟ್ಟಾಗಿ ಪಾಲನೆ ಮಾಡಿಸಬೇಕು. ಪರಿಸರ ಮಾಲಿನ್ಯ ನಿಯಂತ್ರಣ ಮಂಡಳಿ ಹಾಗೂ ಸಂಬಂಧಿತ ಅಧಿಕಾರಿಗಳು ನಿಯಮಿತವಾಗಿ ಪರಿಶೀಲನೆ ನಡೆಸಿ, ನಿಯಮ ಉಲ್ಲಂಘಿಸುವ ಕಾರ್ಖಾನೆಗಳ ವಿರುದ್ಧ ಕಾನೂನು ಕ್ರಮ ಕೈಗೊಳ್ಳಬೇಕು ಎಂದು ಆಗ್ರಹಿಸಲಾಗಿದೆ.



### ಕೈಗಾರಿಕಾ ವಲಯಕ್ಕೆ ಸ್ಥಳಾಂತರಿಸಿ

ಸಾರ್ವಜನಿಕರ ಆರೋಗ್ಯ, ಪರಿಸರ ಸಂರಕ್ಷಣೆ ಮತ್ತು ಭವಿಷ್ಯದ ಪೀಳಿಗೆಯ ಹಿತದೃಷ್ಟಿಯಿಂದ ಸರ್ಕಾರ ತ್ವರಿತವಾಗಿ ಸೂಕ್ತ ಕ್ರಮ ಕೈಗೊಂಡು, ಅಗತ್ಯವಿದ್ದಲ್ಲಿ ಕೇಮಿಕಲ್ ಕಾರ್ಖಾನೆಗಳನ್ನು ಸುರಕ್ಷಿತ ಕೈಗಾರಿಕಾ ವಲಯಗಳಿಗೆ ಸ್ಥಳಾಂತರಿಸಬೇಕು ಎಂದು ಮನವಿ ಮಾಡಲಾಗಿದೆ.

**ಕೋರ್ಟ್ ಕಲಾಪ ವರದಿಗೆ ಅವಕಾಶ, Audio-Video ಕ್ಲಿಪ್ ಹಂಚಿಕೆಗೆ ಬ್ರೇಕ್: ಮಾಧ್ಯಮಗಳಿಗೆ ಸುಪ್ರೀಂ ಕೋರ್ಟ್ ಮಹತ್ವದ ಸ್ಪಷ್ಟನೆ**

# ಇಲ್ಲಿನ ಕೆಲ ಕೇಮಿಕಲ್ ಕಾರ್ಖಾನೆಗಳ ಮಾಲೀಕರೊಂದಿಗೆ ಅಕ್ರಮ ಹೊಂದಾಣಿಕೆ ಆರೋಪ: ಸಮಗ್ರ ತನಿಖೆಗೆ ಆಗ್ರಹ

ಕೈಗಾರಿಕಾ ಪ್ರದೇಶದಲ್ಲಿರುವ ಕೆಲವು ಕೇಮಿಕಲ್ ಕಾರ್ಖಾನೆಗಳ ಮಾಲೀಕರೊಂದಿಗೆ ಕೆಲವರು ಅಕ್ರಮ ಹೊಂದಾಣಿಕೆ ಮಾಡಿಕೊಂಡು ವೈಯಕ್ತಿಕ ಲಾಭ ಪಡೆಯುತ್ತಿದ್ದಾರೆ ಎಂಬ ಆರೋಪಗಳು ಸಾರ್ವಜನಿಕ ವಲಯದಲ್ಲಿ ಕೇಳಿಬರುತ್ತಿವೆ. ಈ ಆರೋಪಗಳ ಸತ್ಯಾಸತ್ಯತೆ ಬಹಿರಂಗವಾಗಬೇಕಾದರೆ ಸ್ವತಂತ್ರ ಹಾಗೂ ನಿಷ್ಪಕ್ಷಪಾತ ತನಿಖೆ ನಡೆಸಬೇಕು ಎಂದು ಸಾರ್ವಜನಿಕರು ಒತ್ತಾಯಿಸಿದ್ದಾರೆ.

## ಸಂಪಾದಕೀಯ

**ಮಾಣಿಕರೆಡ್ಡಿ ಕೌಡಾಳೆ**
**ಪ್ರಧಾನ ಸಂಪಾದಕರು**
**ಮೊ: 9845028349**



ಪರಿಸರ ಮಾಲಿನ್ಯ, ತ್ಯಾಜ್ಯ ವಿಲೇವಾರಿ ಹಾಗೂ ಸಂಬಂಧಿತ ನಿಯಮಗಳ ಉಲ್ಲಂಘನೆ ನಡೆದಿದೆಯೇ ಎಂಬುದರ ಜೊತೆಗೆ, ಯಾರಾದರೂ ಅಕ್ರಮವಾಗಿ ಹಣ ಅಥವಾ ಇತರೆ ಲಾಭ ಪಡೆದಿರುವ ಕುರಿತು ಬಂದಿರುವ ಆರೋಪಗಳನ್ನೂ ಸಂಬಂಧಿತ ತನಿಖಾ ಸಂಸ್ಥೆಗಳು ಪರಿಶೀಲಿಸಬೇಕು ಎಂದು ಆಗ್ರಹಿಸಲಾಗಿದೆ.

ಆರೋಪಗಳು ಸಾಬೀತಾದರೆ ತಪ್ಪಿತಸ್ಥರ ವಿರುದ್ಧ ಕಾನೂನು ಕ್ರಮ ಕೈಗೊಳ್ಳಬೇಕು. ಆರೋಪಗಳು ಸುಳ್ಳಾಗಿದ್ದರೆ ಅದನ್ನೂ ಸಾರ್ವಜನಿಕರಿಗೆ ಸ್ಪಷ್ಟಪಡಿಸುವ ಮೂಲಕ ವದಂತಿಗಳಿಗೆ ತೆರೆ ಎಳೆಯಬೇಕು ಎಂದು ಸಾರ್ವಜನಿಕರು ಸರ್ಕಾರವನ್ನು ಒತ್ತಾಯಿಸಿದ್ದಾರೆ.

# ಅಧೀಶ್ ಆರ್. ವಾಲಿಗೆ ಅತ್ಯುತ್ತಮ ಅಧ್ಯಕ್ಷ ಪ್ರಶಸ್ತಿ ಗರಿಮೆ



**ಬೀದರ್:** ಗೋವಾದಲ್ಲಿ ಜರುಗಿದ ರೋಟರಿ ಇಂಟರ್ನ್ಯಾಷನಲ್ ಜಿಲ್ಲೆ 3160ರ (ಕರ್ನಾಟಕ ಮತ್ತು ಆಂಧ್ರಪ್ರದೇಶ) ಅಂತರ್-ರಾಜ್ಯ ಮಟ್ಟದ ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ ಬೀದರ್ ಸಿಲ್ವರ್‌ಸ್ಟಾರ್ ರೋಟರಿ ಕ್ಲಬ್ ಒಟ್ಟು 10 ಪ್ರತಿಷ್ಠಿತ ಪ್ರಶಸ್ತಿಗಳನ್ನು ಬಾಚಿಕೊಳ್ಳುವ ಮೂಲಕ ಇತಿಹಾಸ ನಿರ್ಮಿಸಿದೆ.

ಕ್ಲಬ್‌ನ ಅಧ್ಯಕ್ಷರಾದ ಅಧೀಶ್ ಆರ್. ವಾಲಿ ಮತ್ತು ಅವರ ತಂಡದ ಅನುಕರಣೀಯ ಸೇವಾ ಕಾರ್ಯಗಳನ್ನು ಗುರುತಿಸಿ ಈ ಗೌರವ ನೀಡಲಾಗಿದೆ. ಪ್ರಶಸ್ತಿಗಳಲ್ಲಿ ಅತ್ಯಂತ ಪ್ರತಿಷ್ಠಿತವಾದ 'ಅತ್ಯುತ್ತಮ ಅಧ್ಯಕ್ಷ ಪ್ರಶಸ್ತಿ'ಯೊಂದಿಗೆ, ಸಮುದಾಯ ಸೇವೆ, ವೃತ್ತಿಪರ ಸೇವೆ, ಶಾಶ್ವತ ಸೇವಾ ಯೋಜನೆ, ಜನಸಂಪರ್ಕ ಯೋಜನೆ, ಜನಸಂಪರ್ಕ ಮತ್ತು ನಿಧಿ ಸಂಗ್ರಹಣೆ,ಸೇರಿದಂತೆ ಇನ್ನು ಹಲವು ಕಾರ್ಯಗಳಿಗೆ ಅತ್ಯುತ್ತಮ ಕ್ಲಬ್ ಎಂಬ ಹೆಗ್ಗಳಿಗೆಗೆ ಪಾತ್ರವಾಗಿದೆ.

ಈ ವೈಭವೋಪೇತ ಸಮಾರಂಭದಲ್ಲಿ ಐಪಿಡಿಜಿ ಎಂ.ಕೆ. ರವೀಂದ್ರ, ಡಿಜಿ ಕೇಶವ ರೆಡ್ಡಿ, ಡಿಜಿ ಡಾ. ಲೆನ್ನಿ ದ ಕಸ್ಟ , ಪಿಡಿಜಿ ಮಧುಪ್ರಸಾದ್, ರಘು ಕೃಷ್ಣಮೂರ್ತಿ, ರವಿ ಮುಳ್ಗೆ, ಹವ್ಯೆಟ್ಟಿ ಪಾಟೀಲ್, ಡಾ. ರಜನೀಶ್ ವಾಲಿ, ಅಂಜನಾ ವಾಲಿ, ಮನೀಶ್ ಸಿಂಡೋಲ್, ನವೀನ್ ಗೋಯಲ್, ಭಾವೇಶ್ ಪಟೇಲ್, ಗಣೇಶ್ ಪಾಟೀಲ್ ಹಾಗೂ ಹರ್ಷದ್ ಪಟೇಲ್ ಉಪಸ್ಥಿತರಿದ್ದು ವಿಜೇತರನ್ನು ಅಭಿನಂದಿಸಿದರು.

# ಕೋಟಿ ಸಂಪತ್ತುಗಿಂತ ಆರೋಗ್ಯ ಸಂಪತ್ತು ಮುಖ್ಯ



• ಮಲ್ಲಮ್ಮ ನುಡಿ ವಾರ್ತೆ ಯಲಬುರ್ಗಾ

ಬೀಡಿ, ಸಿಗರೇಟ ಡ್ರಗ್ಸ ಇತರ ಮಾದಕ ವಸ್ತುಗಳ ದುಶ್ಚಟಗಳಿಗೆ ಯುವ ಸಮುದಾಯ, ಸೇವನೆಗೆ ಅಂಟಿಕೊಂಡು ದಾಸರಾಗಿ ತಮ್ಮ ಜೀವನವನ್ನು ಹಾಳು ಮಾಡಿಕೊಂಡಿದ್ದಾರೆ, ದುಶ್ಚಟಗಳಿಂದ ದೂರವಿದ್ದು ಉತ್ತಮ ಆರೋಗ್ಯ, ಭವಿಷ್ಯವನ್ನು ರೂಪಿಸಿಕೊಳ್ಳಿ,ಕೋಟಿ ಸಂಪತ್ತುಗಿಂತ ಆರೋಗ್ಯ ಸಂಪತ್ತು ಮುಖ್ಯವಾದದು ಎಂದು ಅಖಿಲ ಕರ್ನಾಟಕ ಕೊಪ್ಪಳ ಜಿಲ್ಲಾ ಜನಜಾಗೃತಿ ಸಮಿತಿ ಸದಸ್ಯ ಶರಣಬಸಪ್ಪ. ಕೆ.ದಾನಕೈ ಅವರು ಯಲಬುರ್ಗಾದ ಮೌಲಾನ ಆಜಾದ ಶಾಲೆಯಲ್ಲ ಸ್ವಾಸ್ಥ ಸಂಕಲ್ಪ ಕಾರ್ಯಕ್ರಮ ಅಂಗವಾಗಿ ದೀಪ ಬೆಳಗಿಸಿ ಚಾಲನೆ ನೀಡಿ ಮಾತನಾಡಿದರು. ಅಮುಲು ಬರುವಂತಹ ಮಾದಕ ಸೇವನೆ ಮಾಡುವದರಿಂದ ದೈಹಿಕವಾಗಿ, ಮಾನಸಿಕವಾಗಿ ಅನೇಕ ಕಾಯಿಲೆಗಳಿಗೆ ಒಳಗಾಗಿ ತಮ್ಮ ಜೀವನವನ್ನು ಕಳೆದುಕೊಳ್ಳುವದು ಬೇಡ ಉತ್ತಮರ ಸಂಘ ಮಾಡಿ ಸರಿ ದಾರಿಯಲ್ಲಿ ಸಾಗಬೇಕು ಡಾ.ಶೇಖರ ಭಜೇಂತ್ರಿ ಅವರು ಹೇಳಿದರು. ಯುವಕರ ಭವಿಷ್ಯ ಮತ್ತು ಜೀವನ ಹಾಳಾಗುತ್ತಿದೆ ಮತ್ತು ಕುಟುಂಬಗಳು ಬೀದಿಗೆ ಬಂದಿರುವ ಘಟನೆಗಳನ್ನು ಕಾಣಬಹುದು, ಉತ್ತಮ ವಿದ್ಯಾಭ್ಯಾಸದ ಜೊತೆಗೆ ಮೂಲಕ ಒಳ್ಳೆಯ ಭವಿಷ್ಯ ರೂಪಿಸಿಕೊಳ್ಳಬೇಕು ಎಂದು ಮೌಲಾನ ಆಜಾದ ಆಂಗ್ಲ ಮಾಧ್ಯಮ ಶಾಲೆಯ ಮುಖ್ಯ ಗುರು ಶೀಲ್ಪಾ ಕೆ ಅವರು ಅಧ್ಯಕ್ಷತೆ ವಹಿಸಿ ಮಾತನಾಡಿಷರು. ಮೇಲ್ವಿಚಾರಕಿ ಕಾವ್ಯಸಿರಿಗೇರಿ ಅವರು ಪ್ರಾಸ್ತಾವಿಕವಾಗಿ ಮಾತನಾಡಿ ಧರ್ಮಸ್ಥಳ ಗ್ರಾಮಾಭಿವೃದ್ದಿ ಯೋಜನೆಗಳ ಬಗ್ಗೆ ಮಾಹಿತಿ ನೀಡಿದರು. ಸೇವಾ ಪ್ರತಿನಿದಿ ಶಿಲ್ಪಾ ಮತ್ತು ಶಾಲೆಯ ಶಿಕ್ಷಕರಾದ ಬಾಳಪ್ಪ ಹಡಪದ, ಶಿವಪ್ಪ ದಿವಟರ ಹಾಗು ವಿದ್ಯಾರ್ಥಿಗಳು ಉಪಸ್ಥಿತರಿದ್ದರು.

# ಪಾಪಾಗ್ನಿ ಮಠದಲ್ಲಿ ಶ್ರೀ ಶರಭ ಯೋಗೇಂದ್ರಸ್ವಾಮಿಗಳ 308ನೇ ಆರಾಧನಾ ಮಹೋತ್ಸವ

• ಮಲ್ಲಮ್ಮ ನುಡಿ ವಾರ್ತೆ ಚಿಕ್ಕಬಳ್ಳಾಪುರ



ಶ್ರೀ ಶ್ರೀ ದಕ್ಷಿಣ ಕಾಶಿ ಪಂಚನಂದಿ ಮಹಾ ಪುಣ್ಯಕ್ಷೇತ್ರ ಪಾಪಾಗ್ನಿ ಮಠ ಚಾರಿಟಬಲ್ ಟ್ರಸ್ಟ್, ಶ್ರೀ ವಿಶ್ವಕರ್ಮ ಸಂಘದ ವತಿಯಿಂದ ಶ್ರೀ ಶ್ರೀ ಶರಭಯೋಗೇಂದ್ರಸ್ವಾಮಿಗಳ 308ನೇ ಆರಾಧನಾ ಮಹೋತ್ಸವ ಹಾಗೂ ಶ್ರೀ ಶ್ರೀ ಶ್ರೀ ವೀರ ಬ್ರಹ್ಮೇಂದ್ರಸ್ವಾಮಿಗಳ ರಥೋತ್ಸವ ಕಾರ್ಯಕ್ರಮವು ಗುರುವಾರ ಅತ್ಯಂತ ವೈಭವ,ಶ್ರದ್ಧಾ-ಭಕ್ತಿಯಿಂದ ನೆರವೇರಿತು.ಆರಾಧನಾ ಮಹೋತ್ಸವದ ಅಂಗವಾಗಿ ಬೆಳಗ್ಗೆಯಿಂದಲೇ ಗಣಪತಿ ಪೂಜೆ,ಪುಣ್ಯಾಹ,ದಶಶಾಂತಿ,ರುದ್ರಾಭಿಷೇಕ, ಕಳಶಾರಾಧನೆ, ಮಹಾನ್ಯಾಸಪೂರ್ವಕ ಅಭಿಷೇಕ, ಮಹಾಮಂತ್ರ ಹೋಮ,ನಾದಸ್ವರ ಸುಪ್ರಭಾತ, ಧ್ವಜಾರೋಹಣ,ಕಳಶೋತ್ಸವ,ಲಿಂಗ ಪ್ರತಿಷ್ಠಾಪನೆ ಹಾಗೂ ಶ್ರೀ ಶರಭ ಯೋಗೇಂದ್ರಸ್ವಾಮಿ,ಅನ್ನಪೂರ್ಣದೇವಿ ಮತ್ತು ಕಾಶಿ ವಿಶ್ವನಾಥಸ್ವಾಮಿಗಳಿಗೆ ಪಂಚಾಮೃತ ಅಭಿಷೇಕ ಸೇರಿದಂತೆ ವಿವಿಧ ವಿಶೇಷ ಪೂಜೆಗಳು ಮತ್ತು ಧಾರ್ಮಿಕ ಕಾರ್ಯಕ್ರಮಗಳನ್ನು ಆಯೋಜಿಸಲಾಗಿತ್ತು.

ಚಿಕ್ಕಬಳ್ಳಾಪುರ ಜಿಲ್ಲೆ ಸೇರಿದಂತೆ ಸುತ್ತಮುತ್ತಲಿನ ಪ್ರದೇಶಗಳು ಹಾಗೂ ಇತರ ರಾಜ್ಯಗಳಿಂದ ಆಗಮಿಸಿದ ಸಾವಿರಾರು ಭಕ್ತರು ಪುಣ್ಯಕ್ಷೇತ್ರದಲ್ಲಿ ನಡೆದ ಧಾರ್ಮಿಕ ಕೈಂಕರ್ಯಗಳಲ್ಲಿ ಭಾಗವಹಿಸಿ ದೇವರ ದರ್ಶನ ಪಡೆದು ಆಶೀರ್ವಾದ ಪಡೆದರು.ನಂತರ ಟ್ರಸ್ಟ್ ಸದಸ್ಯರ ಸಮ್ಮುಖದಲ್ಲಿ ಶ್ರೀ ಶ್ರೀ ವೀರ ಬ್ರಹ್ಮೇಂದ್ರಸ್ವಾಮಿಗಳ ರಥೋತ್ಸವವನ್ನು ವಿಧಿ-ವಿಧಾನಗಳೊಂದಿಗೆ ಚಾಲನೆ ನೀಡಲಾಯಿತು.ನೂರಾರು ಭಕ್ತರು ರಥಕ್ಕೆ ಪೂಜೆ ಸಲ್ಲಿಸಿ ಮೆರವಣಿಗೆಯಲ್ಲಿ ಭಾಗವಹಿಸಿದರು.

ಟ್ರಸ್ಟ್ ಅಧ್ಯಕ್ಷ ಬ್ರಹ್ಮಶ್ರೀ ಎನ್.ಹೆಂಜಾರಾಚಾರಿ ಮಾತನಾಡಿ, ಶರಭಯೋಗೇಂದ್ರಸ್ವಾಮಿಗಳ 308ನೇ ಆರಾಧನಾ ಮಹೋತ್ಸವ ಮತ್ತು ರಥೋತ್ಸವವು ಸಾವಿರಾರು ಭಕ್ತರ ಆಗಮನಕ್ಕೆ ಸಾಕ್ಷಿಯಾಗಿದೆ. ಪಂಚನಂದಿ ಮಹಾ ಪುಣ್ಯಕ್ಷೇತ್ರ ಪಾಪಾಗ್ನಿ ಮಠವು ವಿಶಿಷ್ಟ ಧಾರ್ಮಿಕ ಇತಿಹಾಸವನ್ನು ಹೊಂದಿದೆ.ಟ್ರಸ್ಟ್ ವತಿಯಿಂದ ಪ್ರತಿವರ್ಷ ಆರಾಧನಾ ಮಹೋತ್ಸವ,ರಥೋತ್ಸವ,ವಿಶೇಷ ಪೂಜೆ, ಹೋಮ-ಹವನ ಸೇರಿದಂತೆ ವಿವಿಧ ಧಾರ್ಮಿಕ ಕಾರ್ಯಕ್ರಮಗಳನ್ನು ಆಯೋಜಿಸಲಾಗುತ್ತಿದ್ದು, ಭಕ್ತರಿಗೆ ಅನ್ನಸಂತರ್ಪಣೆಯ ವ್ಯವಸ್ಥೆಯನ್ನೂ ಕಲ್ಪಿಸಲಾಗಿದೆ.ಈ ಐತಿಹಾಸಿಕ ಕ್ಷೇತ್ರಕ್ಕೆ ವರ್ಷದಿಂದ ವರ್ಷಕ್ಕೆ ಭಕ್ತರ ಸಂಖ್ಯೆ ಹೆಚ್ಚುತ್ತಿರುವುದು ಸಂತಸದ ಸಂಗತಿಯಾಗಿದೆ ಎಂದು ಹೇಳಿದರು.

# ವಿಕಾಸ್ ಶೀಲ್ ಇನ್ಸಾನ್ ಪಾರ್ಟಿಯ ಬೀದರ್

• ಮಲ್ಲಮ್ಮ ನುಡಿ ವಾರ್ತೆ ಬೀದರ್



ಸಮಾಜ ಸೇವೆ, ಸಂಘಟನೆ ಹಾಗೂ ಜನಪರ ಕಾರ್ಯಗಳಲ್ಲಿ ಸಕ್ರಿಯವಾಗಿ ತೊಡಗಿಸಿಕೊಂಡಿರುವ ಹುಮನಾಬಾದ್ ತಾಲ್ಲೂಕಿನ ಅಶೋಕ ಕೋಳಿ ಅವರನ್ನು ವಿಕಾಸ್ ಶೀಲ ಇನ್ಸಾನ್ ಪಾಟಿಯ ಬೀದರ್ ಜಿಲ್ಲಾ ಅಧ್ಯಕ್ಷರಾಗಿ ನೇಮಕ ಮಾಡಲಾಗಿದೆ.

ಪಕ್ಷದ ಕರ್ನಾಟಕ ರಾಜ್ಯ ವಿಕಾಸ ಶೀಲ ಇನ್ಸಾನ್ ಪಾರ್ಟಿಯ ರಾಜ್ಯಾಧ್ಯಕ್ಷ ಬಿ.ಕೆ. ಮೋಹನ್ ಕುಮಾರ್ ಅವರು ನೇಮಕಾತಿ ಆದೇಶ ನೀಡಿ, ಜಿಲ್ಲೆಯಾದ್ಯಂತ ಪಕ್ಷವನ್ನು ಬಲಿಷ್ಠಗೊಳಿಸುವುದು, ಹೊಸ ಸದಸ್ಯರನ್ನು ಸೇರ್ಪಡೆಗೊಳಿಸುವುದು ಹಾಗೂ ಪಕ್ಷದ ಸಿದ್ಧಾಂತ ಮತ್ತು ಜನಪರ ಕಾರ್ಯಕ್ರಮಗಳನ್ನು ಪರಿಣಾಮಕಾರಿಯಾಗಿ ಜನರಿಗೆ ತಲುಪಿಸುವ ಜವಾಬ್ದಾರಿಯನ್ನು ವಹಿಸಿದ್ದಾರೆ.

ನೇಮಕಾತಿ ಪತ್ರದಲ್ಲಿ ಅಶೋಕ ಕೋಳಿ ಅವರ ಸಂಘಟನಾ ಸಾಮರ್ಥ್ಯ, ಸಮಾಜ ಮುಖಿ ಕಾರ್ಯಗಳು ಹಾಗೂ ನಾಯಕತ್ವವನ್ನು ಪರಿಗಣಿಸಿ ಈ ಜವಾಬ್ದಾರಿ ನೀಡಲಾಗಿದೆ ಎಂದು ಉಲ್ಲೇಖಿಸಲಾಗಿದೆ. ನೇಮಕಗೊಂಡಿರುವ ಅಶೋಕ ಕೋಳಿ ಅವರು ಪಕ್ಷದ ಹಿರಿಯ ಮುಖಂಡರು ಮತ್ತು ಕಾರ್ಯಕರ್ತರ ವಿಶ್ವಾಸಕ್ಕೆ ಕೃತಜ್ಞತೆ ಸಲ್ಲಿಸಿ, ಜಿಲ್ಲೆಯಾದ್ಯಂತ ಪಕ್ಷವನ್ನು ಇನ್ನಷ್ಟು ಸಂಘಟಿ-ತಗೊಳಿಸಿ, ಜನ ಸೇವೆಗೆ ಆದ್ಯತೆ ನೀಡುವುದಾಗಿ ತಿಳಿಸಿದ್ದಾರೆ. ಅವರ ನೇಮಕಕ್ಕೆ ಪಕ್ಷದ ಮುಖಂಡರು, ಕಾರ್ಯಕರ್ತರು ಹಾಗೂ ವಿವಿಧ ಸಂಘಟನೆಗಳ ಪದಾಧಿಕಾರಿಗಳು ಅಭಿನಂದನೆ ಸಲ್ಲಿಸಿದ್ದಾರೆ.

# ಸ್ಮಶಾನ ಭೂಮಿ: ಪರ್ಯಾಯ ಜಾಗಕ್ಕೆ ಒತ್ತಾಯ

• ಮಲ್ಲಮ್ಮ ನುಡಿ ವಾರ್ತೆ ಬೀದರ್



ಅಮಲಾಪೂರ ಗ್ರಾಮದ ಭೂರಹಿತ ಕುಟುಂಬಕ್ಕೆ ಸರ್ಕಾರ ಮಂಜೂರು ಮಾಡಿರುವ ಭೂಮಿಯನ್ನು ಸ್ಮಶಾನ ಭೂಮಿಯಾಗಿ ಬಳಸುವ ಪ್ರಸ್ತಾವ ಕೈಬಿಟ್ಟು, ಸ್ಮಶಾನಕ್ಕಾಗಿ ಪ್ರತ್ಯೇಕ ಸರ್ಕಾರಿ ಭೂಮಿಯನ್ನು ಮಂಜೂರು ಮಾಡಬೇಕು ಎಂದು ವೀರ ಕನ್ನಡಿಗರ ಸೇನೆ ಜಿಲ್ಲಾ ಘಟಕದಿಂದ ಆಗ್ರಹಿಸಿದ್ದಾರೆ.

ಈ ಸಂಬಂಧ ಸಂಘಟನೆಯ ರಾಜ್ಯ ಸಂಚಾಲಕ ಸುಬ್ಬಣ್ಣ ಕರಕನಳ್ಳಿ ಹಾಗೂ ಜಿಲ್ಲಾ ಸಂಚಾಲಕ ಅಂಬಾದಾಸ ಸೈನೆ ನೇತೃತ್ವದಲ್ಲಿ ತಹಸೀಲ್ದಾರ್ ರವೀಂದ್ರ ದಾಮ, ಸಹಾಯಕ ಆಯುಕ್ತ ಶಕೀಲ್ ಅಹ್ಮದ್ ಹಾಗೂ ಜಿಲ್ಲಾಧಿಕಾರಿ ಶಿಲ್ಪಾ ಶರ್ಮಾ ಅವರಿಗೆ ಮನವಿ ಸಲ್ಲಿಸಲಾಯಿತು. ಮನವಿಯಲ್ಲಿ,1993-94ರ ಲ್ಯಾಂಡ್ ಗ್ರಾಂಟ್ ಸಮಿತಿಯ ತೀರ್ಮಾನದಂತೆ ಅಮಲಾಪೂರ ಗ್ರಾಮದ ಸರ್ವೆ ನಂ.71ರ ಸರ್ಕಾರಿ ಗೈರಾಣಿಯಲ್ಲಿ ಭೂರಹಿತ ಬಡ ಕುಟುಂಬಗಳಿಗೆ ಭೂಮಿ ಮಂಜೂರಾಗಿದ್ದು, ಅದರಂತೆ ತುಕ್ಕಪ್ಪ ತಂದೆ ಲಾಲಪ್ಪ ಅವರಿಗೆ 4 ಎಕರೆ 38 ಗುಂಟೆ ಜಮೀನು ಮಂಜೂರಾಗಿದೆ ಎಂದು ಉಲ್ಲೇಖಿಸಲಾಗಿದೆ. ಡಿಜಿಟಲ್ ಭೂ ದಾಖಲೆಗಳಲ್ಲಿಯೂ ಈ ಮಂಜೂರಾತಿ ದಾಖಲಾಗಿದ್ದು, ಕರ್ನಾಟಕ ಮಾಹಿತಿ ಆಯೋಗ-ಕ್ಕೆ ಸಲ್ಲಿಸಲಾದ ದಾಖಲೆಗಳು ಹಾಗೂ ಆರ್‌ಟಿಐ ಮೂಲಕವೂ ಇದರ ದೃಢೀಕರಣ ದೊರೆತಿದೆ ಎಂದು ತಿಳಿಸಿದ್ದಾರೆ. ತುಕ್ಕಪ್ಪ ಅವರ ಪುತ್ರ ಅಂಬಾದಾಸ ಹೆಸರಿಗೆ ಜಮೀನಿನ ಪಹಣಿ ಹಾಗೂ ಹೋಲ್ಡಿಂಗ್ ವರ್ಗಾವಣೆ ಮಾಡಿಕೊಡಬೇಕು ಎಂದು ಮನವಿಯಲ್ಲಿ ಒತ್ತಾಯಿಸಲಾಗಿದೆ. ಜೊತೆಗೆ, ಪ್ರತಿಯೊಂದು ಗ್ರಾಮ ಹಾಗೂ ಸಮುದಾಯಕ್ಕೂ ಪ್ರತ್ಯೇಕ ಸ್ಮಶಾನ ಭೂಮಿ ಅಗತ್ಯವಿದ್ದು, ಈಗಾಗಲೇ ಸರ್ವೆ ನಂ.72ರಲ್ಲಿ 1 ಎಕರೆ 39 ಗುಂಟೆ ಭೂಮಿಯನ್ನು ಎಸ್‌ಸಿ ಸಮುದಾಯಕ್ಕೆ ಸರ್ಕಾರ ಮಂಜೂರು ಮಾಡಿದೆ ಎಂದು ಹೇಳಲಾಗಿದೆ.

# ಬ್ರಿಡ್ಜ್‌ಗೆ ಮತ್ತೊಂದು ಬಲಿ, ಬೈಕ್ ಸವಾರ ದುರ್ಮರಣ..!

• ಮಲ್ಲಮ್ಮ ನುಡಿ ವಾರ್ತೆ ಸಿಂಧನೂರು

ತಾಲೂಕಿನ ಸಿಂಧನೂರು-ಮಸ್ಕಿ ರಸ್ತೆಯ ಇ.ಜೆ. ಬಸಾಪುರ(ಎಲೆಕೂಡ್ಲಗಿ ಕ್ಯಾಂಪ್) ಬಳಿ ನಡೆಯುತ್ತಿರುವ ಸೇತುವೆ ಕಾಮಗಾರಿ ಸ್ಥಳದಲ್ಲಿ ಸಂಭವಿಸಿದ ರಸ್ತೆ ಅಪಘಾತದಲ್ಲಿ ಬೈಕ್ ಸವಾರರೊಬ್ಬರು ಸ್ಥಳದಲ್ಲೇ ಮೃತಪಟ್ಟು, ಮತ್ತೊರ್ವ ಗಂಭೀರವಾಗಿ ಗಾಯಗೊಂಡಿರುವ ದಾರುಣ ಘಟನೆ ಗುರುವಾರ ಮುಂಜಾನೆ ಜರುಗಿದೆ.

ಮುಂಜಾನೆ ಸುಮಾರು 4:45 ಗಂಟೆಯ ಸುಮಾರಿಗೆ ಸಂಭವಿಸಿದ ಈ ದುರ್ಘಟನೆಯಲ್ಲಿ ಚಿಕ್ಕದಿನ್ನಿ ಗ್ರಾಮದ ಅಜ್ಮೀರ್ (23, ತಂದೆ: ಜಾಲಾಲ ಸಾಬ್) ಸ್ಥಳದಲ್ಲೇ ಮೃತಪಟ್ಟ ದುರ್ದೈವಿಯಾಗಿದ್ದಾರೆ. ಇವರೊಂದಿಗೆ ಬೈಕ್‌ನಲ್ಲಿ ತೆರಳುತ್ತಿದ್ದ ಸಹೋದರ ಮೌಲಸಾಬ್ (ತಂದೆ: ಖಾದರಸಾಬ್) ಗಂಭೀರವಾಗಿ ಗಾಯಗೊಂಡಿದ್ದು, ಅವರನ್ನು ಕೂಡಲೇ ಚಿಕಿತ್ಸೆಗಾಗಿ ಸಿಂಧನೂರು ತಾಲೂಕು ಆಸ್ಪತ್ರೆಗೆ ದಾಖಲಿಸಲಾಗಿದೆ.



**ಘಟನೆಯ ವಿವರ:** ಮೃತ ಅಜ್ಮೀರ್ ಹಾಗೂ ಗಾಯಾಳು ಮೌಲಸಾಬ್ ಅವರು ಹುಬ್ಬಳ್ಳಿಯಲ್ಲಿ ವಿದ್ಯಾಭ್ಯಾಸದ ಸಲುವಾಗಿ ಬೈಕ್‌ನಲ್ಲಿ (ಸಂಖ್ಯೆ ಎಂ-36-ಇಖ-1241) ಮಸ್ಕಿಯಿಂದ ಸಿಂಧನೂರಿಗೆ ತೆರಳುತ್ತಿದ್ದ ಸಂದರ್ಭದಲ್ಲಿ ಸಿಂಧನೂರು ಕಡೆಯಿಂದ ಅತಿವೇಗ ಹಾಗೂ ನಿರ್ಲಕ್ಷ್ಯದಿಂದ ಬಂದ ಬಿಳಿ ಬಣ್ಣದ ಕಾರೊಂದು ನಿಯಂತ್ರಣ ತಪ್ಪಿ ಬೈಕ್‌ಗೆ ಮುಖಾಮುಖಿ ಡಿಕ್ಕಿ ಹೊಡೆಯಲು ಬಂದಿದೆ. ಆಗ ಕಾರಿನ ಡಿಕ್ಕಿಯಿಂದ ತಪ್ಪಿಸಿಕೊಳ್ಳಲು ಯತ್ನಿಸಿದಾಗ ಬೈಕ್ ಸವಾರ ನಿಯಂತ್ರಣ ಕಳೆದುಕೊಂಡು ಬ್ರಿಡ್ಜ್ ತೆಗ್ಗಿನಲ್ಲಿ ಬಿದ್ದು ಈ ದುರ್ಘಟನೆ ಸಂಭವಿಸಿದೆ. ಅಪಘಾತದ ಕುರಿತು ಮೃತರ ಕುಟುಂಬದವರು ತುರುವಿಹಾಳ ಪೊಲೀಸ್ ಠಾಣೆಯಲ್ಲಿ ದೂರು ದಾಖಲಿಸಿದ್ದಾರೆ. ಸಿಂಧನೂರು ತಾಲೂಕು ಆಸ್ಪತ್ರೆಯಲ್ಲಿ ಮೃತದೇಹದ ಮರಣೋತ್ತರ ಪರೀಕ್ಷೆ ನಡೆಸಲಾಗಿದೆ.

ಸುರಕ್ಷತಾ ಕ್ರಮಗಳ ಕೊರತೆ:ಬ್ರಿಡ್ಜ್ ಬಳಿ ತೆ-ಗ್ಗು ತೆಗೆದು ಹಾಗೆಯೇ ಬಿಡಲಾಗಿದ್ದು, ಮಣ್ಣು ಮುಚ್ಚಿಲ್ಲ. ಯಾವುದೇ ರಸ್ತೆ ಸಂಚಾರ ಸುರಕ್ಷತಾ ನಾಮಫಲಕಗಳು ಅಥವಾ ಸಿಗ್ನಲ್ ದೀಪಗಳನ್ನು ಅಳವಡಿಸದೆ ಇರುವುದೇ ಈ ಅಪಘಾತಕ್ಕೆ ಪ್ರಮುಖ ಕಾರಣ ಎಂದು ಆರೋಪಿಸಲಾಗಿದೆ.

ಎಲೆಕೂಡ್ಲಗಿ ಕ್ಯಾಂಪ್ ಭಾಗದಲ್ಲಿ ನಡೆಯುತ್ತಿರುವ ಈ ಕಾಮಗಾರಿ ಸ್ಥಳದಲ್ಲಿ ಸಂಭವಿಸುತ್ತಿರುವ ಎರಡನೇ ದುರ್ಘಟನೆ ಇದಾಗಿದ್ದು, ಇಷ್ಟೆಲ್ಲಾ ಅನಾಹುತಗಳು ಸಂಭವಿಸುತ್ತಿದ್ದರೂ ಸಂಬಂಧಪಟ್ಟ ಗುತ್ತಿಗೆದಾರರು ಮತ್ತು ಅಧಿಕಾರಿಗಳು ಎಚ್ಚೆತ್ತುಕೊಳ್ಳುತ್ತಿಲ್ಲ ಎಂದು ಸ್ಥಳೀಯರು ಹಾಗೂ ಸಾರ್ವಜನಿಕರು ತೀವ್ರ ಆಕ್ರೋಶ ವ್ಯಕ್ತಪಡಿಸಿದ್ದಾರೆ. ಇನ್ನು ಎಷ್ಟು ಅಮಾಯಕರ ಜೀವ ಬಲಿಯಾದರೆ ಅಧಿಕಾರಿಗಳ ಕಣ್ಣು ತೆರೆಯಲಿದೆ? ಎಂದು ಸಾರ್ವಜನಿಕರು ಪ್ರಶ್ನಿಯಾಗಿದೆ.

# ನಶೆಮುಕ್ತ ಯುವಜನರಿಂದ ಸಶಕ್ತ ಭಾರತ ನಿರ್ಮಾಣ

• ಮಲ್ಲಮ್ಮ ನುಡಿ ವಾರ್ತೆ ಬೀದರ್

ಯುವಜನತೆ ದುಷ್ಚಟ,ದುರ್ಗುಣ,ದುರಾಚಾರ,ದುರ್ಬುದ್ಧಿ, ದುರುಳುತನ, ದುರಹಂಕಾರ, ದುರ್ವರ್ತನೆಗಳಿಂದ ದೂರರಾದರೆ ನಶೆಮುಕ್ತ ಹಾಗೂ ಸಶಕ್ತ ಭಾರತವಾಗಿ ಪರಿವರ್ತನೆಯಾಗಲಿದೆ ಎಂದು ನೌಬಾದ್ ಸರ್ಕಾರಿ ಪ್ರಥಮ ದರ್ಜೆ ಮಹಾವಿದ್ಯಾಲಯದ ಪ್ರಾಧ್ಯಾಪಕಿ ಡಾ.ವಿದ್ಯಾ ಪಾಟೀಲ ತಿಳಿಸಿದರು.

ಗುರುವಾರ ನಗರದ ಜನವಾಡ ರಸ್ತೆಯಲ್ಲಿರುವ ಪ್ರಜಾಪಿತಾ ಬ್ರಹ್ಮಾಕುಮಾರಿಸ್ ಈಶ್ವರಿಯ ವಿಶ್ವವಿದ್ಯಾಲಯ ರಾಜಯೋಗ ಕೇಂದ್ರ ಪಾವನಧಾಮ ಅವರಣದಲ್ಲಿ ನಶೆಮುಕ್ತ ಭಾರತ ಅಭಿಯಾನದಡಿ ವ್ಯಸನಮುಕ್ತ ಸಮಾಜ ನಿರ್ಮಾಣಕ್ಕಾಗಿ ಹಮ್ಮಿಕೊಂಡ ಪ್ರತಿಜ್ಞಾವಿಧಿ ಸ್ವೀಕಾರ ಸಮಾರಂಭದಲ್ಲಿ ಮುಖ್ಯ ಅತಿಥಿಗಳಾಗಿ ಮಾತನಾಡಿದರು.

ಒಳ್ಳೆಯ ಪ್ರಜಾಪ್ರಭುತ್ವದಲ್ಲಿ ನಾಯಕರನ್ನು ಪ್ರಶ್ನಿಸುವುದು ಅತ್ಯಗತ್ಯ; ಹಾಗೆ ಮಾಡದಿದ್ದರೆ ಪ್ರಜಾಪ್ರಭುತ್ವಕ್ಕೆ ಅರ್ಥವಿರುವುದಿಲ್ಲ. ಆದರೆ, ಇತ್ತೀಚಿನ ಪ್ರತಿಭಟನೆಗಳ ವೇಳೆ ಯುವಕರು ಬಳಸಿದ ಭಾಷೆ ಮತ್ತು ವರ್ತನೆ ಪೋಷಕರು ಹಾಗೂ ಶಿಕ್ಷಕರಲ್ಲಿ ಆತ್ಮಾವಲೋಕನಕ್ಕೆ ಕಾರಣವಾಗಿದೆ. ಹಿರಿಯರು ಮತ್ತು ಗುರುಗಳಿಂದ ಮಕ್ಕಳಿಗೆ ಸರಿಯಾದ 'ಸಂಸ್ಕಾರ' ಸಿಗುತ್ತಿಲ್ಲವೇ ಎಂಬ ಪ್ರಶ್ನೆ ಎದುರಾಗಿದೆ. ಯುವಕರು ದಾರಿ ತಪ್ಪಿದ್ದರೆ, ಅದನ್ನು ತಿದ್ದಿ ಸರಿಯಾದ ಮಾರ್ಗಕ್ಕೆ ತರುವ ಜವಾಬ್ದಾರಿ ಹಿರಿಯರ ಮೇಲಿದೆ. ಹಳೆಯ ಕಾಲದಂತೆ ಪ್ರತಿಯೊಂದಕ್ಕೂ ಕಠಿಣ ಶಿಕ್ಷೆ ನೀಡುವ ಪಾಲನಾ ಶೈಲಿ ಈಗಿನ ಕಾಲಕ್ಕೆ ಸೂಕ್ತವಲ್ಲ. ಪೋಷಕರು ಮಕ್ಕಳೊಂದಿಗೆ ಮಿತ್ರರಂತೆ ಬೆರೆತು, ಅವರು ತಮ್ಮ ಎಲ್ಲಾ ವಿಚಾರಗಳನ್ನು ಮುಕ್ತವಾಗಿ ಹಂಚಿಕೊಳ್ಳುವಂತಹ ವಿಶ್ವಾಸವನ್ನು ಮೂಡಿಸಬೇಕು ಎಂದರು.





ಇಂದಿನ ದಿನಗಳಲ್ಲಿ ಮಕ್ಕಳಿಗೆ, ವಿಶೇಷವಾಗಿ ಹೆಣ್ಣು ಮಕ್ಕಳಿಗೆ ಹೆಚ್ಚಿನ ಸ್ವಾತಂತ್ರ್ಯ ಸಿಗುತ್ತಿರುವುದು ಸಂತಸದ ವಿಚಾರ. ಆದರೆ, ಪ್ರತಿ ಸ್ವಾತಂತ್ರ್ಯದೊಂದಿಗೂ ಒಂದು ದೊಡ್ಡ ಜವಾಬ್ದಾರಿ ಇರುತ್ತದೆ ಎಂಬುದನ್ನು ಮಕ್ಕಳಿಗೆ ಕಡ್ಡಾಯವಾಗಿ ಅರ್ಥಮಾಡಿಸಬೇಕಿದೆ. ಮೊಬೈಲ್ ಗೀಳು: ಇಂದಿನ ಅತಿದೊಡ್ಡ ವ್ಯಸನ ಹಿಂದಿನ ಕಾಲದಲ್ಲಿ ಧೂಮಪಾನ ಅಥವಾ ಮದ್ಯಪಾನವನ್ನು ಮಾತ್ರ ವ್ಯಸನ ಎಂದು ಪರಿಗಣಿಸಲಾಗುತ್ತಿತ್ತು. ಆದರೆ ಆಧುನಿಕ ದಿನಗಳಲ್ಲಿ ಹೊಸ ರೀತಿಯ ಡ್ರಗ್ಸ್ ಗಳ ಜೊತೆಗೆ ಅತಿ ದೊಡ್ಡ ನಶೆಯಾಗಿ ಕಾಡುತ್ತಿರುವುದು 'ಮೊಬೈಲ್ ಫೋನ್'.

ಮೊಬೈಲ್ ಗೀಳು ಕೇವಲ ಮಕ್ಕಳನ್ನಷ್ಟೇ ಅಲ್ಲ, ಪೋಷಕರನ್ನೂ ಆವರಿಸಿದೆ. ಮಕ್ಕಳ ಕೈಯಿಂದ ಮೊಬೈಲ್ ಕಿತ್ತುಕೊಳ್ಳುವ ಮುನ್ನ ಪೋಷಕರು ತಾವೇ ಮೊಬೈಲ್ ಬಳಕೆಯನ್ನು ಮಿತಿಗೊಳಿಸಬೇಕಿದೆ ಎಂದರು.

ಮನುಷ್ಯರನ್ನು ಇತರ ಪ್ರಾಣಿಗಳಿಂದ ಪ್ರತ್ಯೇಕಿಸುವ ಪ್ರಮುಖ ಗುಣವಾದ 'ಸ್ವಯಂ-ನಿಯಂತ್ರಣ' ಮತ್ತು 'ಇಚ್ಛಾಶಕ್ತಿ' ಇಂದಿನ ಪೀಳಿಗೆಯಲ್ಲಿ ಬೆಳೆಸುವ ತುರ್ತು ಅಗತ್ಯವಿದೆ. ಯುವಕರ ಬುದ್ಧಿಮತ್ತೆ ಮತ್ತು ಶಕ್ತಿಯನ್ನು ಸರಿಯಾದ ದಿಕ್ಕಿನಲ್ಲಿ ಮುನ್ನಡೆಸಬೇಕು. "ನಮ್ಮ ಮಕ್ಕಳಿಗೆ ದೇಶಪ್ರೇಮದ ನಶೆ ಹತ್ತಿಸಬೇಕು. ಸಮಾಜವನ್ನು ಸುಧಾರಿಸುವ ಮತ್ತು ಸಮಾಜಕ್ಕೆ ಕೊಡುಗೆ ನೀಡುವತ್ತ ಅವರ ಆಸಕ್ತಿಯನ್ನು ಬೆಳೆಸಬೇಕು. ನಿಜವಾದ ಸಂತೋಷ ಇರುವುದು ಕ್ಷಣಿಕ ಖುಷಿಗಳಲ್ಲಿ ಅಲ್ಲ, ಬದಲಾಗಿ ಸಮಾಜಮುಖಿ ಕೆಲಸಗಳಲ್ಲಿ" ಎಂದು ವಿದ್ಯಾ ಕರೆ ನೀಡಿದರು.

ಬ್ರಹ್ಮಾಕುಮಾರಿಸ್ ಕೇಂದ್ರ ಪಾವನಧಾಮದ ಸಂಚಾಲಕಿ ಬಿ.ಕೆ ಪ್ರತಿಮಾ ಬಹೆನ್‌ಜಿ ಸಾನಿಧ್ಯ ವಹಿಸಿ ಮಾತನಾಡಿ, ಇಂದಿನ ಒತ್ತಡದ ಬದುಕಿನಲ್ಲಿ, ಜನರು ನೆಮ್ಮದಿ ಕಂಡುಕೊಳ್ಳಲು ಯಾವುದಾದರೊಂದು ರೀತಿಯ ವ್ಯಸನಕ್ಕೆ ಬಲಿಯಾಗುತ್ತಿದ್ದಾರೆ. ವ್ಯಸನವು ತಾತ್ಕಾಲಿಕವಾಗಿ ದುಃಖವನ್ನು ಮರೆಸಿದರೂ, ಅಂತಿಮವಾಗಿ ಇದು ವ್ಯಕ್ತಿಯನ್ನು, ಆತನ ಕುಟುಂಬವನ್ನು, ಸಂಪತ್ತನ್ನು ಮತ್ತು ಆರೋಗ್ಯವನ್ನು ಸಂಪೂರ್ಣವಾಗಿ ನಾಶಪಡಿಸುತ್ತದೆ. ಕಷ್ಟಪಟ್ಟು ದುಡಿದ ಹಣವೆಲ್ಲ ಆಸ್ಪತ್ರೆಗಳ ಪಾಲಾಗುತ್ತದೆ ಮತ್ತು ಸಮಾಜದಲ್ಲಿ ಗೌರವವೂ ಹಾಳಾಗುತ್ತದೆ ಎಂದರು.

15 ರಿಂದ 20 ವರ್ಷದ ಯುವತಿಯರು ಸಹ ಮುಕ್ತವಾಗಿ ಧೂಮಪಾನದಂತಹ ವ್ಯಸನಗಳಿಗೆ ತುತ್ತಾಗಿರುವುದು ಕಳವಳಕಾರಿ ಸಂಗತಿ. ಮನೆಯವರ ಮಾತುಗಳನ್ನು ಕೇಳದ ಯುವಜನತೆಗೆ ಕೇವಲ ಲೌಕಿಕ ಶಿಕ್ಷಣ ನೀಡಿದರೆ ಸಾಲದು; ಮುಂಬರುವ ಸವಾಲುಗಳನ್ನು ಸಮರ್ಥವಾಗಿ ಎದುರಿಸಲು ಅವರಿಗೆ 'ರಾಜಯೋಗ' ಮತ್ತು ಆಧ್ಯಾತ್ಮಿಕತೆಯ ಮೂಲಕ ಆಂತರಿಕ ಶಕ್ತಿಯನ್ನು ತುಂಬುವುದು ನಮ್ಮೆಲ್ಲರ ಆದ್ಯ ಕರ್ತವ್ಯವಾಗಿದೆ ಎಂದವರು ನುಡಿದರು.

ಜನರನ್ನು ವ್ಯಸನ ಮುಕ್ತರನ್ನಾಗಿಸಲು 'ಈಶ್ವರಿ ವಿಶ್ವವಿದ್ಯಾಲಯ'ವು ದೇಶಾದ್ಯಂತ ಮಹತ್ವದ ಅಭಿಯಾನವನ್ನು ಹಮ್ಮಿಕೊಂಡಿದೆ. ಪರಮ ಕಲ್ಯಾಣಕಾರಿಯಾದ ಡಾ. ದಾದಿ ಪ್ರಕಾಶ್‌ಮಣಿ ಜಿಯವರ ದೃಷ್ಟಿಕೋನದಂತೆ, ಪ್ರತಿಯೊಂದು ಜೀವವನ್ನೂ ರಕ್ಷಿಸಿ, ಭಾರತದ ಆದರ್ಶ ಪ್ರಜೆಯನ್ನಾಗಿ ರೂಪಿಸುವುದು ಈ ಕಾರ್ಯಕ್ರಮದ ಪ್ರಮುಖ ಉದ್ದೇಶವಾಗಿದೆ ಎಂದು ಬಹೆನ್‌ಜಿ ಹೇಳಿದರು. ನೌಬಾದ್ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ಪ್ರಾಚಾರ್ಯ ಪ್ರೊ.ಮನೋಜಕುಮಾರ ಸಮಾರಂಭ ಉದ್ಘಾಟಿಸಿದರು. ಕೇಂದ್ರದ ಹಿರಿಯ ರಾಜಯೋಗ ಶಿಕ್ಷಕಿ ಬಿ.ಕೆ ಗುರುದೇವಿ ಸ್ವಾಗತಿಸಿ ಕಾರ್ಯಕ್ರಮ ನಿರೂಪಿಸಿದರು. ಕೇಂದ್ರದ ಸಹೋದರ, ಸಹೋದರಿಯರು ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು.

# ವಿಬಿ-ಜಿ-ರಾಮ-ಜಿ ಜಾಗೃತಿ ಕಾರ್ಯಕ್ರಮ ಸಮರ್ಪಕವಾಗಿ ಸದುಪಯೋಗಿ ಪಡೆದುಕೊಳ್ಳಿ: ಎಡಿ



• ಮಲ್ಲಮ್ಮ ನುಡಿ ವಾರ್ತೆಬಸವಕಲ್ಯಾಣ

ವಿಬಿ.ಜಿ.ರಾಮ ಜಿ ಯೋಜನೆಯ ಸಮರ್ಪಕವಾಗಿ ಸದುಪಯೋಗ ಪಡೆದುಕೊಳ್ಳುವ ಮೂಲಕ ಯಶಸ್ವಿ ಗೊಳಿಸಬೇಕು ಎಂದು ತಾ.ಪಂ.ಸ.ನಿ.ಮಹ್ಮದ್ ಸಲೀಂ ಹೇಳಿದರು. ತಾಲ್ಲೂಕಿನ ಬೆಟ್ಟಬಾಲಕುಂದಾ ಹಾಗೂ ಮೊರಖಂಡಿ ಗ್ರಾಮದಲ್ಲಿ ವಿಬಿ.ಜಿ.ರಾಮ ಜಿ ಯೋಜನೆ ಕುರಿತು ಹಮ್ಮಿಕೊಂಡ ಜಾಗೃತಿ ಕಾರ್ಯಕ್ರಮದಲ್ಲಿ ಅವರು ಮಾತನಾಡಿ, ನೂತನವಾಗಿ ಅನುಷ್ಠಾಗೊಂಡ ವಿಬಿ ಜಿ ರಾಮ ಜಿ ಯೋಜನೆಯಡಿ ವಯಕ್ತಿಯ ಮತ್ತು ಸಮುದಾಯ ಕಾಮಗಾರಿಗಳನ್ನು ಮಾಡಲು ಸಾಕಷ್ಟು ಅವಕಾಶಗಳನ್ನು ಕಲ್ಪಿಸಲಾಗಿದ್ದು, ಅದರ ಸದುಪಯೋಗ ಪಡೆದುಕೊಳ್ಳುವ ಮೂಲಕ ಸ್ವಾವಲಂಬಿ ಜೀವನ ನಡೆಸಬೇಕು ಎಂದು ತಿಳಿಸಿದರು.

ಹಿಂದಿನ ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿಯಲ್ಲಿ ಒಂದು ಕುಟುಂಬಕ್ಕೆ 100 ದಿನ ಉದ್ಯೋಗ ಖಾತ್ರಿ ನೀಡಲಾಗಿತ್ತು, ಆದರೆ ಈ ಯೋಜನೆಯಡಿ ಪ್ರತಿ ಕುಟುಂಬಕ್ಕೆ-125 ದಿನ ಖಾತ್ರಿ ನೀಡಲಾಗಿದೆ ಮತ್ತು ಪ್ರತಿದಿನ 370 ರೂ. ನೀಡಲಾಗುತ್ತಿತ್ತು ಬದಲಾಗಿ ಇ ಯೋಜನೆಯಡಿ 382 ರೂ. ಗಳಿಗೆ ಹೆಚ್ಚಿಸಲಾಗಿದೆ. ಅಂದರೆ ನೀವು ನಿರಂತರವಾಗಿ ಕೆಲಸ ಮಾಡಿದರೆ 47750 ರೂ. ವರೆಗೆ ನೀವು ಕೆಲಸ ಮಾಡಬಹುದು ಎಂದರು ತಿಳಿಸಿದರು. ಕೂಲಿ ಕಾರ್ಮಿಕರು ಪ್ರಾಮಾಣಿಕವಾಗಿ ದುಡಿಯುತ್ತಾರೆ, ಹೀಗಾಗಿ ಅಧಿಕೃತವಾದ ಪ್ ನಲ್ಲಿ ಅವರ ಹಾಜರಾತಿ ಪಡೆದುಕೊಳ್ಳಬೇಕು ಹೊರತು ಯಾವುದೇ ಖಾಸಗಿ ಪ್ ನಲ್ಲಿ ಹಾಜರಾತಿ ತೆಗೆದುಕೊಳ್ಳಬಾರದು ಎಂದು ಕಟ್ಟುನಿಟ್ಟಿನ ಸೂಚನೆ ನೀಡಿದರು. ಈ ಸಂದರ್ಭದಲ್ಲಿ ಬೆಟ್ಟಬಾಲಕುಂದಾ ಗ್ರಾಮ ಪಂಚಾಯತ್ ಅಭಿವೃದ್ಧಿ ಅಧಿಕಾರಿ ವಿಷ್ಣುಕಾಂತರೆಡ್ಡಿ ಪಾಟೀಲ್, ಟಿಸಿ ಶಿವರಾಜ ಪಾಟೀಲ್, ಐಇಸಿ ಸಂಯೋಜಕ ವೀರಾರೆಡ್ಡಿ, ಟಿಎ ಗಳಾದ ಅವಿನಾಶ, ಸಚೀನ ವೈರಾಗೆ, ಡಿಇಓ ವಿಠಲ, ಬಿಎಫ್ಟಿ ಸತೀಶ, ಕರಬಸಪ್ಪಾ, ಕಾಯಕ ಮಿತ್ರಗಳಾದ ನೀಕೀತಾ, ರಜನಿ ಸೇರಿದಂತೆ ಇನ್ನಿತರರು ಇದ್ದರು.

# ಕತ್ತಲೆಯ ಅಧ್ಯಾಯಗಳಿಗೆ ಗುರುವಿನಿಂದ ಮುಕ್ತಿ : ಹಾರಕೂಡ ಶ್ರೀ



• ಮಲ್ಲಮ್ಮ ನುಡಿ ವಾರ್ತೆಬಸವಕಲ್ಯಾಣ

ಮನುಷ್ಯನ ಬದುಕಿನಲ್ಲಿ ಕತ್ತಲೆಯ ಅಧ್ಯಾಯಗಳು ಬರುವುದು ಸಹಜ ಅವುಗಳಿಂದ ಧೃತಿಗೆಟ್ಟು ಹೆದರಬಾರದು, ಗುರುವಿನ ಸಾನಿಧ್ಯದಿಂದ ಭಾಗ್ಯದ ಬೆಳಕು ಮೂಡುತ್ತದೆ ಎಂದು ಹಾರಕೂಡದ ಪೂಜ್ಯಶ್ರೀ ಡಾ. ಚನ್ನವೀರ ಶಿವಾಚಾರ್ಯರು ನುಡಿದರು. ಇಲ್ಲಿನ ಎಂ. ಬಿ. ಪಾಟೀಲ ಬಡಾವಣೆಯ ಶರಣ ಇಷ್ಟಲಿಂಗ ಮಹಾಪೂಜೆ ನಿಮಿತ್ಯ ಜರುಗಿದ ಧರ್ಮಸಭೆಯ ಪಾವನ ಸಾನಿಧ್ಯ ವಹಿಸಿ ಮಾತನಾಡಿದ ಶ್ರೀಗಳು, ಮಹಾತ್ಮರ ಬದುಕಿನಲ್ಲಿಯೂ ಕತ್ತಲೆಯ ಅಧ್ಯಾಯಗಳು ಉಂಟೆಂಬುದು ತಿಳಿದಿದ್ದೇವೆ, ರಾಮನಿಗೂ ವನವಾಸವಿತ್ತು ಕೃಷ್ಣನಿಗೂ ಕಷ್ಟವಿತ್ತು ಅಂದಮೇಲೆ ಸಾಮಾನ್ಯರ ಬದುಕಿನಲ್ಲಿ ಇರುಳು ಇಣುಕುವುದು ಸಹಜ. ಒಂಟಿತನ, ಬಡತನ, ರೋಗರೋಜನೆ ಇವೆಲ್ಲ ಶಾಪವಲ್ಲ, ಇವು ಬದುಕನ್ನು ಅರ್ಥ ಮಾಡಿಸುವ ಅಮೂಲ್ಯ ಸಂದರ್ಭಗಳು, ಮತ್ತು ಮನುಷ್ಯನನ್ನು ಗಟ್ಟಿಗೊಳಿಸುವ ಸಾಧನಗಳು ಎಂದು ಭಾವಿಸಬೇಕು. ಗುರುವಿನ ದಿವ್ಯಾನುಭವದ ಬೆಳಕಿನಲ್ಲಿ ಆತ್ಮಸಾಕ್ಷಿ ಹೆಮ್ಮೆ ಪಡುವಂತೆ ಬದುಕಿದ-ರೆ, ಗೆಲುವುಗಳು ಸಾಲುಗಟ್ಟಿ ನಿಲ್ಲುತ್ತವೆ ಎಂದು ಹೇಳಿದ ಶ್ರೀಗಳು ಸರ್ವರಿಗೂ ಹಾರಕೂಡ ಶ್ರೀ ಪೀಠದ ಆಶೀರ್ವಾದ ಪ್ರಾಪ್ತವಾಗಲಿ ಎಂದು ಶುಭ ಹಾರೈಸಿದರು. ಈ ಸಂದರ್ಭದಲ್ಲಿ ಶರಣಯ್ಯ ಸ್ವಾಮಿ ಮಠಪತಿ, ವೀರಣ್ಣ ಶೀಲವಂತ, ರುದ್ರೇಶ್ವರ ಗೋರಟ ಸೇರಿದಂತೆ ಅನೇಕರು ಉಪಸ್ಥಿತರಿದ್ದರು. ರಾಚಯ್ಯಸ್ವಾಮಿ ಮಠಪತಿ ನೀಲಳ್ಳಿ ಸ್ವಾಗತಿಸಿದರು. ಕಾರ್ತಿಕ ಸ್ವಾಮಿ ಯಲದಗುಂಡಿ ಪ್ರಾರ್ಥನೆ ಗೀತೆ ಹಾಡಿದರು. ರಮೇಶ ರಾಜೋಳೆ ನಿರೂಪಿಸಿದರು. ಶರಣಯ್ಯ ಸ್ವಾಮಿ ಮಠಪತಿ ನೀಲಳ್ಳಿ ಪರಿವಾರದ ವತಿಯಿಂದ ಹಾರಕೂಡ ಶ್ರೀಗಳ 1023ನೇ ತುಲಾಭಾರ ಜರುಗಿತು.

# ಧರ್ಮಸ್ಥಳ ಗ್ರಾಮಾಭಿವೃದ್ಧಿಯಿಂದ ಬಸದಿಯ ಜೀರ್ಣೋದ್ಧಾರ ಕಾರ್ಯಕ್ಕೆ 2ಲಕ್ಷ ಡಿ ಡಿ ವಿತರಣೆ



• ಮಲ್ಲಮ್ಮ ನುಡಿ ವಾರ್ತೆ ಕೊಪ್ಪಳ

ಪಶ್ಚಿಮ ತಾಲೂಕಿನ ಕೋಟೆ ಏರಿಯಾದಲ್ಲಿರುವ ಜೈನ ಬಸದಿಯ ಜೀರ್ಣೋದ್ಧಾರ ಕಾರ್ಯ-ಕ್ಕೆ ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯ ವತಿಯಿಂದ ರೂ 2 ಲಕ್ಷ ಮೊತ್ತದ ಡಿಡಿ ಮಂಜೂರು ಮಾಡಲಾಗಿದ್ದು, ಧರ್ಮಸ್ಥಳ ಸಂಸ್ಥೆಯ ಕೊಪ್ಪಳ ಪಶ್ಚಿಮ ಯೋಜನಾ ಕಛೇರಿಯ ಯೋಜನಾಧಿಕಾರಿಯಾದ ಶಶಿಧರ್ ಹೆಚ್ ರವರು ಜೈನ ಬಸದಿಯ ಅಧ್ಯಕ್ಷರು ಜ್ಯೋತಿ ರಂಗುಳ್ಳಿ ಅವರಿಗೆ ಡಿ ಡಿ ಯನ್ನು ಹಸ್ತಾಂತರಿಸಿದರು.

ಈ ಸಂದರ್ಭದಲ್ಲಿ ಸುರೇಂದ್ರ ಪಾಟೀಲ್ ಅಧ್ಯಕ್ಷರು ಜೈನ ಸಮುದಾಯ ದಿಗಂಬರ ಟ್ರಸ್ಟ್, ಸುನಂದಮ್ಮ ಕಾರ್ಯದರ್ಶಿ ಹಾಗೂ ಪದಾಧಿಕಾರಿಗಳು ಮತ್ತು ಸೋಮನಾಥ ಪಾಟೀಲ್, ಶಂಕರ್‌ಗೌಡ ಪಾಟೀಲ್, ಬಾಹುಬಲಿ, ಮಂಜುನಾಥ, ದರ್ಶನ್, ರಘು, ಹಾಗೂ ಒಕ್ಕೂಟದ ಪದಾಧಿಕಾರಿಗಳಾದ ಜಯಶ್ರೀ, ರಾಜಶ್ರೀ, ಸರ್ಮಮಂಗಳ, ಮೇಘ, ನಾಗವೇಣಿ, ವಿಶಾಲಾಕ್ಷಿ ಹಾಗೂ ಕಾರ್ಯಕ್ಷೇತ್ರದ ಮೇಲ್ವಿಚಾರಕ ಅಶೋಕ ಆರ್, ಸೇವಾಪ್ರತಿನಿಧಿ ರೂಪ ರವರು ಉಪಸ್ಥಿತರಿದ್ದರು.




ಭಾಲ್ಕಿ: ಭಾಲ್ಕಿಯ ಸಾರ್ವಜನಿಕ ಆಸ್ಪತ್ರೆಯಲ್ಲಿ ಭಾಲ್ಕಿ ಹಿರೇಮಠದ ಪೀಠಾಧಿಪತಿ ಶ್ರೀ ಗುರುಬಸವ ಪಟ್ಟದ್ದೇವರ ಜನ್ಮದಿನದ ಪ್ರಯುಕ್ತ ಲಿಂಗಾಯತ ಸಮುದಾಯದ ರಾಜ್ಯಕಾರ್ಯದರ್ಶಿ ಕಿರಣ ಖಂಡ್ರೆ ನೇತೃತ್ವದಲ್ಲಿ ಬಡ ರೋಗಿಗಳಿಗೆ ಹಣ್ಣು-ಹಂಪಲು ವಿತರಿಸಲಾಯಿತು.

# ತಾಯಿ ಎದೆಹಾಲಿನಿಂದ ಮಗುವಿನ ಆರೋಗ್ಯಕರ ಬೆಳವಣಿಗೆ

• ಮಲ್ಲಮ್ಮ ನುಡಿ ವಾರ್ತೆ ಭಾಲ್ಕಿ



ತಾಯಿ ಎದೆ ಹಾಲಿನಲ್ಲಿ ಮಗುವಿನ ಆರೋಗ್ಯಕರ ಬೆಳವಣಿಗೆಗಾಗಿ ಅಗತ್ಯವಿರುವ ಸಮಗ್ರ ಜೀವಸತ್ವಗಳು, ಖನಿಜಾಂಶಗಳು ಅಡಕವಾಗಿರುತ್ತವೆ. ಕಾರಣ ಹೆತ್ತ ಮಗುವಿಗೆ ಒಂದು ಗಂಟೆಯೊಳಗೆ ತಾಯಿಎದೆ ಹಾಲುಣಿಸಬೇಕು ಎಂದು ಬೀದರನ ಬ್ರೀಮ್ಸ್ ಆಸ್ಪತ್ರೆಯ ಮಕ್ಕಳತಜ್ಞ ಅಸೋಸಿಯೆಟೆಡ್ ಪ್ರೊಫೆಸರ್ ಡಾ.ಶರಣ ಬುಳ್ಳಾ ಹೇಳಿದರು. ನಗರದ ಸಾರ್ವಜನಿಕ ಆಸ್ಪತ್ರೆಯಲ್ಲಿ ರೋಟರಿ ಕ್ಲಬ್ ಆಫ್ ಭಾಲ್ಕಿ ಫೋರ್ಟ್ (ಆರ್‌ಐ 3160) ವತಿಯಿಂದ ಹಮ್ಮಿಕೊಂಡ ವಿಶ್ವಸ್ತನ್ಯಪಾನ ಸಪ್ತಾಹ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು.

ಸ್ತನ್ಯಪಾನವು ನವಜಾತ ಶಿಶುವನ್ನು ಸಾಂಕ್ರಮಿಕ ರೋಗಗಳಿಂದ ರಕ್ಷಿಸುತ್ತದೆ. ತಾಯಿಯಿಂದ ನೇರವಾಗಿ ದೊರೆಯುವ ಪ್ರತಿಕಾಯಗಳು (ಆಂಟಿಬಾಡಿಸ್) ಮಗುವಿನಲ್ಲಿ ಪ್ರಬಲ ರೋಗನಿರೋಧಕ ಶಕ್ತಿಯನ್ನು ವೃದ್ಧಿಸುತ್ತದೆ. ಮಗು ಅತ್ತಾಗ ಹಾಲು ಕುಡಿಸುವುದಕ್ಕಿಂತ ಹಸು ಆದಾಗ ಹಾಲು ಕುಡಿಸುವುದು ಉತ್ತಮ ಎಂದು ಹೇಳಿದರು.

ಸ್ತ್ರೀ ರೊಗತಜ್ಞೆ ಆದ ತಾಲೂಕು ರೋಟರಿ ಕ್ಲಬ್ ಅಧ್ಯಕ್ಷೆ ಡಾ.ಶೈಲಜಾ ತಳವಾಡೆ ಅವರು ಮಾತನಾಡಿ, ತಾಯಿಯ ಎದೆಹಾಲು ಶಿಶುವಿನ ಪಾಲಿಗೆ ಅಮೃತವಿದ್ದ ಹಾಗೆ. ಸದೃಢ ಶರೀರಕ್ಕಾಗಿ ಮಗುವಿಗೆ 06 ತಿಂಗಳ ವರೆಗೆ ಯಾವುದೇ ಆಹಾರವಿಲ್ಲದೆ ಹಾಗೂ 02 ವರ್ಷ ವರೆಗೆ ಪೌಷ್ಠಿಕಾಂಶ ಆಹಾರದೊಂದಿಗೆ ತಾಯಿಯ ಎದೆಹಾಲು ಕುಡಿಸಬಹುದು ಎಂದು ಹೇಳಿದರು.

ಸಾರ್ವಜನಿಕ ಆಸ್ಪತ್ರೆಯ ಮುಖ್ಯ ವೈದ್ಯಾಧಿಕಾರಿ ಡಾ.ಶಶಿಕಾಂತ ಭೂರೆ ಅಧ್ಯಕ್ಷತೆವಹಿಸಿ ಮಾತನಾಡಿದರು.

ಕಾರ್ಯಕ್ರಮದಲ್ಲಿ ಸ್ತ್ರೀ ರೋಗತಜ್ಞೆ ಡಾ.ಸರೋಜ ಪಾಟೀಲ್, ಮಕ್ಕಳ ತಜ್ಞರಾದ ಡಾ.ಚನ್ನವೀರ ಕರ್ಸೆ, ಡಾ. ರಾಮಲಿಂಗ ಅಳ್ಳೆ, ಡಾ.ಅಮೀತ ಅಷ್ಟೂರೆ, ಸಿಸ್ಟರ್‌ಗಳಾದ ಸಂಧ್ಯಾ, ರೀನಾ, ರೆಬೆಕಾ, ನಂದಿನಿ, ಸಂಗೀತಾ ಸೇರಿದಂತೆ ಹೆಚ್ಚಿನ ಸಂಖ್ಯೆಯಲ್ಲಿ ತಾಯಂದಿರು ಮಕ್ಕಳೊಂದಿಗೆ ಉಪಸ್ಥಿತರಿದ್ದರು.

ರೋಟರಿ ಕಾರ್ಯದರ್ಶಿ ಪ್ರೊ.ಅಶೋಕ ರಾಜೋಳೆ ನಿರೂಪಿಸಿ, ವಂದಿಸಿದರು.

> ‘ಇತ್ತೀಚೆಗೆ ಕೆಲವು ಹೆಣ್ಮಕ್ಕಳು ತಮ್ಮ ಸೌಂದರ್ಯ ಹಾಳಾಗುತ್ತದೆ ಎನ್ನುವ ಕಾರಣಕ್ಕಾಗಿ ಮಕ್ಕಳಿಗೆ ಎದೆಹಾಲು ಕುಡಿಸಲು ಹಿಂದೇಟು ಹಾಕುತ್ತಿರುವುದು ಖೇದಕರ ಸಂಗತಿ. ರಕ್ತಹೀನತೆ ತಡೆಗಟ್ಟಲು ಗರ್ಭಿಣಿ ಮಹಿಳೆಯರು ಹೆಚ್ಚಿನ ಪೌಷ್ಠಿಕಾಂಶಗಳು ಸೇವಿಸಬೇಕು.’
>
> **-ಡಾ.ಶೈಲಜಾ ತಳವಾಡೆ ಅಧ್ಯಕ್ಷರು ರೋಟರಿ ಕ್ಲಬ್ ಭಾಲ್ಕಿ.**

> ‘ಎದೆಹಾಲು ಶಿಶುಗಳಿಗೆ ಸೂಕ್ತವಾದ ಮತ್ತು ಸುರಕ್ಷಿತವಾದ ಮೊದಲ ಆಹಾರವಾಗುತ್ತದೆ. ಮಗುವಿಗೆ ಹಾಲುಣಿಸುವುದರಿಂದ ಸ್ತನ ಹಾಗೂ ಅಂಡಾಶಯದ ಕ್ಯಾನ್ಸರ್ ಅಪಾಯ ತಡೆಗಟ್ಟಿ, ಉನ್ನತ ಮಟ್ಟದ ಭೌತಿಕ ಮತ್ತು ಬೌದ್ಧಿಕ ಶಕ್ತಿ ಬೆಳೆಯುತ್ತದೆ.’
>
> **- ಡಾ.ಶರಣ ಬುಳ್ಳಾ ಮಕ್ಕಳ ತಜ್ಞರು ಬ್ರೀಮ್ಸ್ ಬೀದರ.**

# ಇಲಾಖೆ ನಿರ್ದೇಶನಗಳು ಕಟ್ಟುನಿಟ್ಟಾಗಿ ಅನುಸರಿಸಿ

• ಮಲ್ಲಮ್ಮ ನುಡಿ ವಾರ್ತೆ ಭಾಲ್ಕಿ



ಶಾಲಾ ಶಿಕ್ಷಣ ಇಲಾಖೆ (ಪದವಿ ಪೂರ್ವ) ನೀಡುವ ನಿರ್ದೇಶನಗಳು ಎಲ್ಲ ಕಾಲೇಜಿನ ಪ್ರಾಂಶುಪಾಲರು ನಿರ್ಲಕ್ಷ ?? ಮಾಡದೇ ಕಟ್ಟುನಿಟ್ಟಾಗಿ ಅನುಸರಿಸಬೇಕು ಎಂದು ಬೀದರ ನೂತನ ಡಿಡಿಪಿಯು (ಪದವಿ ಪೂರ್ವ) ಚಂದ್ರಕಾಂತ ಗಂಗಶೆಟ್ಟಿ ತಾಕೀತು ಮಾಡಿದರು. ನಗರದ ಶಿವಾಜಿ ಪದವಿ ಪೂರ್ವ ಕಾಲೇಜಿನಲ್ಲಿ ‘ಯುಡೈಸ್ ಪ್ಲಸ್’ ಮತ್ತು ‘ಅಪಾರ’ ಕುರಿತು ಕರೆದ ತಾಲೂಕಿನ ಸರ್ಕಾರಿ, ಅನುದಾನಿತ, ಅನುದಾನರಹಿತ ಪದವಿ ಪೂರ್ವ ಕಾಲೇಜುಗಳ ಪ್ರಾಂಶುಪಾಲರ ಸಭೆಯ ಅಧ್ಯಕ್ಷತೆವಹಿಸಿ ಮಾತನಾಡಿದರು. ಇನ್ನೂ ಹಲವು ಕಾಲೇಜಿನವರು ‘ಯುಡೈಸ್ ಪ್ಲಸ್ ಮತ್ತು ಅಪಾರ ’ಅಪಡೇಟ್ ಮಾಡಿರುವುದಿಲ್ಲ. 2026-27ನೇ ಸಾಲಿನಲ್ಲಿ ಪ್ರಥಮ/ದ್ವಿತೀಯ ಪಿಯುಸಿಗೆ ದಾಖಲಾದ ಮಕ್ಕಳ ಮಾಹಿತಿ ಒದಗಿಸಬೇಕು. ಪ್ರಥಮ ಕಿರು ಪರೀಕ್ಷೆ ಫಲಿತಾಂಶದ ಅಂಕಗಳು ಸ್ಯಾಟ್ಸ್‌ನಲ್ಲಿ ಭರ್ತಿ ಮಾಡಬೇಕು. ಮಕ್ಕಳ ಹಾಜರಾತಿ ಕಡಿಮೆಯಾಗದಂತೆ ನಿಗಾವಹಿಸಿ, ಸಾಂಘೀಕ ಪ್ರಯತ್ನದಿಂದ ಪ್ರಸ್ತುತ ಸಾಲಿನ ದ್ವಿತೀಯ ಪಿಯು ಫಲಿತಾಂಶ ಹೆಚ್ಚಿಸಬೇಕು. ಪಾಲಕರ ಸಭೆ ಕರೆದು ವಿದ್ಯಾರ್ಥಿಗಳ ಪ್ರಗತಿ ಚರ್ಚಿಸಬೇಕು. ಆಯಾ ವಿಷಯದ ಉಪನ್ಯಾಸಕರು ವಾರ್ಷಿಕ ಯೋಜನೆಗನುಗುಣವಾಗಿ ನಿಗದಿತ ಅವಧಿಯೊಳಗೆ ಪಠ್ಯಕ್ರಮ ಮುಗಿಸಬೇಕು ಎಂದು ತಿಳಿಸಿದರು. ಸನ್ಮಾನ: ಇದೇ ಸಂದರ್ಭದಲ್ಲಿ ಬೀದರ ನೂತನ ಡಿಡಿಪಿಯು ಚಂದ್ರಕಾಂತ ಗಂಗಶೆಟ್ಟಿ ಅವರಿಗೆ ಪ್ರಾಂಶುಪಾಲರ ಸಂಘದಿಂದ ಗೌರವಿಸಲಾಯಿತು.

ಸಭೆಯಲ್ಲಿ ನಿಟಕಪೂರ್ವ ಡಿಡಿಪಿಯು ಚಂದ್ರಕಾಂತ ಶಾಹಾಬಾದಕರ್, ಜಿಲ್ಲಾ ಸರ್ಕಾರಿ ಪ್ರಾಂಶುಪಾಲ ಸಂಘದ ಅಧ್ಯಕ್ಷ ಓಂಪ್ರಕಾಶ ದಡ್ಡೆ, ಉಪನ್ಯಾಸಕರ ಸಂಘದ ಅಧ್ಯಕ್ಷ ಶಿವುಕುಮಾರ ಕೋಸಂ, ಕಾರ್ಯಾಧ್ಯಕ್ಷ ಶ್ರೀಕಾಂತ ದಾಡಗೆ, ಮಾಜಿ ಅಧ್ಯಕ್ಷ ಪ್ರಭು ಎಸ್., ಉಪಾಧ್ಯಕ್ಷ ಅಶೋಕ ರಾಜೋಳೆ, ತಾಲೂಕು ಪ್ರಾಂಶುಪಾಲರ ಸಂಘದ ಅಧ್ಯಕ್ಷ ಜೈಕಾಂತ ಗಂಗೋಜಿ, ಪ್ರಾಂಶುಪಾಲರಾದ ರಾಜಕುಮಾರ ಪಾಟೀಲ್, ಭಗವಾನ ಬಿರಾದಾರ, ವಿಜಯಕುಮಾರ ಪಾಟೀಲ್, ಸುಖದೇವ ಬಿರಾದಾರ, ಬಾಲಾಜಿ ವಾಡೇಕರ್, ಭೀಮರಾವ ಗಿರಿ, ಪ್ರವೀಣ ಮಠಪತಿ, ಎಸ್.ಎಲ್.ಢೇರೆ, ವಿಜಯಕುಮಾರ ವಾರದ, ಮದುಕರ್ ಗಾಂವಕರ್ ಸೇರಿದಂತೆ ತಾಲೂಕಿನ ಎಲ್ಲ ಪ್ರಾಂಶುಪಾಲರು ಉಪಸ್ಥಿತರಿದ್ದರು. ಪ್ರೊ.ಆರತಿ ಪಾತ್ರೆ ನಿರೂಪಿಸಿದರು.

# ಭಾಲ್ಕಿ ಕ್ಷೇತ್ರದಲ್ಲಿ ಎಸ್‌ಐಆರ್‌ನಲ್ಲಿ ಶೇ.100 ರಷ್ಟು ಗುರಿ ಸಾಧನೆ

• ಮಲ್ಲಮ್ಮ ನುಡಿ ವಾರ್ತೆ ಭಾಲ್ಕಿ



ಭಾಲ್ಕಿ ವಿಧಾನ ಸಭಾ ಕ್ಷೇತ್ರದಲ್ಲಿ ಕೇಂದ್ರದ ಚುನಾವಣಾ ಆಯೋಗದ ಮಾರ್ಗಸೂಚಿಯಂತೆ ನಡೆದ 2026ನೆಯ ಸಾಲಿನ ಮತದಾರರ ಸಮಗ್ರ ಪಟ್ಟಿಯ ತೀವ್ರ ವಿಶೇಷ ಪರಿಷ್ಕರಣೆ (ಎಸ್‌ಐಆರ್) ಪ್ರಕ್ರಿಯೆಯಲ್ಲಿ ಸಂಪೂರ್ಣ ಶೇ.100 ರಷ್ಟು ಗುರಿ ಸಾಧಿಸಿದ್ದೇವೆ ಎಂದು ತಹಸೀಲ್ದಾರ ಮಲ್ಲಿಕಾರ್ಜುನ ವಡ್ಡನಕೇರಿ ಹೇಳಿದರು.

ನಗರದ ತಹಸೀಲ್ ಕಚೇರಿಯಲ್ಲಿ ಗುರುವಾರ ನಡೆದ ವಿವಿಧ ರಾಜಕೀಯ ಪಕ್ಷದ ಮುಖಂಡರ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ಕೇಂದ್ರದ ಚುನಾವಣಾ ಆಯೋಗದ ನಿರ್ದಶನದಂತೆ ಕಳೆದ ಜೂ.30 ರಂದು ಎಸ್‌ಐಆರ್ ಪ್ರಕ್ರಿಯೆಗೆ ಚಾಲನೆ ನೀಡಿ ಆ.8ರೊಳಗೆ ಸಮೀಕ್ಷೆ ಪೂರ್ಣಗೊಳಿಸುವಂತೆ ಸೂಚನೆ ಕೂಡ ನೀಡಿತು. ಅದರಂತೆ ಕ್ಷೇತ್ರದಲ್ಲಿ ಎಸ್‌ಐಆರ್ ಪ್ರಕ್ರಿಯೆ ಆರಂಭಿಸಿ ನಿಗದಿತ ಎರಡ್ಮೂರು ದಿನಗಳ ಮೊದಲೇ ಎಸ್‌ಐಆರ್ ಪೂರ್ಣಗೊಳಿಸಿ ಜಿಲ್ಲೆಯಲ್ಲಿಯೇ ಪ್ರಥಮ ಸ್ಥಾನ ಪಡೆದಿದ್ದೇವೆ ಎಂದು ಸಂತಸ ವ್ಯಕ್ತ ಪಡಿಸಿದರು. ಕ್ಷೇತ್ರದಲ್ಲಿ 263 ಮತಗಟ್ಟೆ ಹೊಂದಿದ್ದು, 2,43,811 ಮತದಾರರು ಇದ್ದಾರೆ. ಅದರಂತೆ ಮತಗಟ್ಟೆ ಮೇಲ್ವಚಾರಕರು, ಮತಗಟ್ಟೆ ಅಧಿಕಾರಿಗಳು ಮನೆ ಮನೆಗೂ ಭೇಟಿ ಎಲ್ಲ ಮತದಾರರಿಗೆ ಎನ್ಯುಮರೇಷನ್ ಫಾರಂ ನೀಡಿ ಸಂಪೂರ್ಣ ಗಣಕೀಕರಣಗೊಳಿಸಿ ನಿರ್ದಿಷ್ಟ ಗುರಿ ಸಾಧಿಸಿದ್ದೇವೆ. ಕ್ಷೇತ್ರದಲ್ಲಿ ಇರುವ 2,43,811 ಮತದಾರರ ಎನ್ಯುಮರೇಷನ್ ಫಾರಂ ಗಣಕೀಕರಣಗೊಳಿಸಲಾಗಿದೆ. ಅದರಲ್ಲಿ 19828 ಮತದಾರರು ಸ್ಥಳಾಂತರಗೊಂಡಿದ್ದು, 4973 ಮತದಾರರು ಮೃತರಾಗಿದ್ದಾರೆ. 4962 ಮತದಾರರು ಗೈರಾಗಿದ್ದು, 2468 ದ್ವಿಪ್ರತಿ ಮತದಾರರು, ಇತರೆ 118 ಸೇರಿ ಒಟ್ಟು 32349 ಮತದಾರರು ಮತ ಪಟ್ಟಿಯಿಂದ ಡಿಲೀಟ್ ಆಗುವ ಸಾಧ್ಯತೆಯಿದೆ ಎಂದರು.

ಆದರೆ, ಅರ್ಹ ಮತದಾರರು ಯಾವುದೇ ಕಾರಣಕ್ಕೂ ಆತಂಕ ಪಡುವ ಅವಶ್ಯಕತೆಯಿಲ್ಲ. ಆಕ್ಷೇಪಣೆ ಸಲ್ಲಿಸಲು ಮತ್ತು ಹೊಸ ಸೇರ್ಪಡೆಗೆ ಅವಕಾಶ ಇದ್ದು ಅರ್ಹ ಮತದಾರರು ಸದುಪಯೋಗ ಪಡೆದು ಕೊಳ್ಳಬೇಕು ಎಂದು ತಿಳಿಸಿದರು.

ಈ ಸಂದರ್ಭದಲ್ಲಿ ಚುನಾವಾಣಾ ನೋಂದಣಾಧಿಕಾರಿ ಶಂಕರ ಖಾದಿ, ತಾಲೂಕು ಕಾಂಗ್ರೆಸ್ ಅಧ್ಯಕ್ಷ ಹಣಮಂತರಾವ ಚವ್ಹಾಣ, ತಾಲೂಕು ಬಿಜೆಪಿ ಅಧ್ಯಕ್ಷ ವೀರಣ್ಣ ಕಾರಬಾರಿ, ತಾಲೂಕು ಜೆಡಿಎಸ್ ಅಧ್ಯಕ್ಷ ಮಲ್ಲಿಕಾರ್ಜುನ ನೇಳಗೆ, ಬಾಬುರಾವ ಧೂಪೆ ಸೇರಿದಂತೆ ಹಲವರು ಇದ್ದರು.

> ‘ಭಾಲ್ಕಿ ಕ್ಷೇತ್ರದಲ್ಲಿ ನಿಗದಿತ ಸಮಯಕ್ಕಿಂತ ಎರಡ್ಮೂರು ದಿನ ಮೊದಲೇ ಎಸ್‌ಐಆರ್ ಸಮೀಕ್ಷೆ ಪೂರ್ಣಗೊಳಿಸಿ ಜಿಲ್ಲೆಯಲ್ಲಿಯೇ ಪ್ರಥಮ ಸ್ಥಾನದಲ್ಲಿದ್ದೇವೆ. ಚುನಾವಣಾ ನೋಂದಣಾಧಿಕಾರಿ, ಮತದಾರರು, ಸಾರ್ವಜನಿಕರು, ಮತಗಟ್ಟೆ ಮೇಲ್ವಿಚಾರಕರು, ಮತಗಟ್ಟೆ ಅಧಿಕಾರಿಗಳು, ಜನಪ್ರತಿಧಿಗಳು, ಎಲ್ಲ ಪಕ್ಷದ ಏಜೆಂಟರ ಸಹಕಾರದಿಂದ ಈ ಸಾಧನೆ ಸಾಧ್ಯವಾಗಿದೆ. ಸಹಕಾರ ನೀಡಿದ ಎಲ್ಲರಿಗೂ ತುಂಬು ಹೃದಯದ ಕೃತಜ್ಞತೆಗಳು.
>
> - ಮಲ್ಲಿಕಾರ್ಜುನ ವಡ್ಡನಕೇರಿ ತಹಸೀಲ್ದಾರರು ಭಾಲ್ಕಿ

# ಅ. 13 ರಂದು ಬಂಥನಾಳ ನೂತನ ಪೀಠಾಧಿಪತಿಗಳ ಪುರಪ್ರವೇಶ



ಇಂಡಿ : ಬರುವ ಅಗಸ್ಟ 13 ರಂದು ಬಂಥನಾಳದ ನೂತನ ಪೀಠಾಧಿಪತಿ ಶ್ರೀ ಸಂಗನಬಸವೇಶ್ವರ ಶ್ರೀಗಳ ಪುರ ಪ್ರವೇಶ ಕಾರ್ಯಕ್ರಮ ನಡೆಯಲಿದೆ ಎಂದು ಪೂಜ್ಯ ಶ್ರೀ ಡಾ. ವೃಷಭಲಿಂಗೇಶ್ವರ ಶ್ರೀಗಳು ತಿಳಿಸಿದ್ದಾರೆ. ಬಂಥನಾಳದ ಗ್ರಾಮದ ದೇವಸ್ಥಾನದ ಆವರಣದಲ್ಲಿ ನಡೆದ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದರು.

ತಾಂಬಾ ಗ್ರಾಮದಿಂದ ಭವ್ಯ ಮೆರವಣಿಗೆ ಬಾಜಾ ಭಜಂತ್ರಿ ಮಹಿಳೆಯರಿಂದ ಕುಂಭ ಮೇಳದೊಂದಿಗೆ ಆಂಧ್ರ ಮಹಾರಾಷ್ಟ್ರ ಮತ್ತು ಕರ್ನಾಟಕದ ಭಕ್ತರು ಪಾಲ್ಗೊಳ್ಳುವರು.

ನಾಡಿನ ಹಲವಾರು ಮಠಾಧೀಶರು ಮತ್ತು ಅಂದಾಜು 40 ಸಾವಿರಕ್ಕೂ ಹೆಚ್ಚು ಜನ ಕಾರ್ಯಕ್ರಮದಲ್ಲಿ ಪಾಲ್ಗೊಳ್ಳಲಿದ್ದಾರೆ.

ಬಂಥನಾಳದಲ್ಲಿ ಸಂಪ್ರದಾಯದಂತೆ ಈಗ 11 ದಿವಸಗಳ ಕಾಲ ಬಾಗೇವಾಡಿಯ ಶಿವ ಪ್ರಕಾಶ ಪೂಜ್ಯರಿಂದ ಪ್ರವಚನ ನಡೆದಿದ್ದು ಅಂದು ಮುಕ್ತಾಯ ಸಮಾರಂಭ ನಡೆಯಲಿದೆ. ಭಕ್ತರು ಹೆಚ್ಚಿನ ಸಂಖ್ಯೆಯಲ್ಲಿ ಪಾಲ್ಗೊಳ್ಳಲು ಪೂಜ್ಯರು ತಿಳಿಸಿದ್ದಾರೆ.

ಪತ್ರಿಕಾ ಗೋಷ್ಠಿಯಲ್ಲಿ ಗೋಳಸಾರದ ಅಭಿನವ ಪುಂಡಲಿಂಗ ಶ್ರೀಗಳು, ತಡವಲಗಾದ ರಾಚೋಟೇಶ್ವರ ಶ್ರೀಗಳು, ಆಲಮೇಲದ ಚಂದ್ರಶೇಖರ ಶ್ರೀಗಳು, ಬಾಗೇವಾಡಿಯ ಶಿವಪ್ರಕಾಶ ಶ್ರೀಗಳು, ಮುಳವಾಡದ ಸಿದ್ದಲಿಂಗ ಶ್ರೀಗಳು ಪಾಲ್ಗೊಂಡಿದ್ದರು.

# ಕೊಂಕಲ್ ಶಾಲೆ ಕಟ್ಟಡ ಕಾಮಗಾರಿ ಆರಂಭಕ್ಕೆ ರಂಗಸ್ವಾಮಿ ಮನವಿ

• ಮಲ್ಲಮ್ಮ ನುಡಿ ವಾರ್ತೆ ಗುರುಮಠಕಲ್



ಆ.6: ಜಿಲ್ಲಾ ಬರ ಪರಿಸ್ಥಿತಿ ಸಮೀಕ್ಷೆಗೆ ಗುರುಮಠಕಲ್ ತಾಲೂಕಿಗೆ ಆಗಮಿಸಿದ್ದ ಕರ್ನಾಟಕ ಸರ್ಕಾರದ ವೈದ್ಯಕೀಯ ಶಿಕ್ಷಣ ಹಾಗೂ ಯಾದಗಿರಿ ಜಿಲ್ಲಾ ಉಸ್ತುವಾರಿ ಸಚಿವರಾದ ಡಾ. ಶರಣಪ್ರಕಾಶ್ ಪಾಟೀಲ ಅವರಿಗೆ ಕೊಂಕಲ್ ಗ್ರಾಮದ ಗ್ರಾಮಸ್ಥರು ಮನವಿ ಪತ್ರ ಸಲ್ಲಿಸಿ, ಸರ್ಕಾರಿ ಪ್ರೌಢ ಶಾಲೆಗೆ ಮಂಜೂರಾಗಿರುವ 8 ಕೊಠಡಿಗಳ ಕಟ್ಟಡ ಕಾಮಗಾರಿಯನ್ನು ಕೂಡಲೇ ಆರಂಭಿಸುವಂತೆ ಡಿಎಸ್ ತಾಲೂಕ ಸಂಚಾಲಕ ರಂಗಸ್ವಾಮಿ ಮನವಿ ನೀಡಿದರು.

ಕೊಂಕಲ್ ಗ್ರಾಮದ ಸರ್ಕಾರಿ ಪ್ರೌಢ ಶಾಲೆಯ ಹಳೆಯ ಕಟ್ಟಡ ಶಿಥಿಲಗೊಂಡಿರುವ ಹಿನ್ನೆಲೆಯಲ್ಲಿ ಸರ್ಕಾರವು ಹೊಸ 8 ಕೊಠಡಿಗಳ ಕಟ್ಟಡವನ್ನು ಮಂಜೂರು ಮಾಡಿದ್ದರೂ, ಇದುವರೆಗೆ ಕಾಮಗಾರಿ ಆರಂಭವಾಗಿಲ್ಲ ಎಂದು ಮನವಿಯಲ್ಲಿ ತಿಳಿಸಲಾಗಿದೆ. ಇದರಿಂದ ವಿದ್ಯಾರ್ಥಿಗಳು ಪಕ್ಕದ ಕಾಲೇಜಿನ ಕಟ್ಟಡದಲ್ಲಿ ವಿದ್ಯಾಭ್ಯಾಸ ಮಾಡಬೇಕಾದ ಅನಿವಾರ್ಯ ಪರಿಸ್ಥಿತಿ ನಿರ್ಮಾಣವಾಗಿದ್ದು, ಶೀಘ್ರದಲ್ಲೇ ಕಟ್ಟಡ ನಿರ್ಮಾಣ ಕಾಮಗಾರಿಯನ್ನು ಆರಂಭಿಸಿ ಪೂರ್ಣಗೊಳಿಸಲು ಸಂಬಂಧಪಟ್ಟ ಅಧಿಕಾರಿಗಳಿಗೆ ಸೂಚನೆ ನೀಡುವಂತೆ ಸಚಿವರನ್ನು ಕೋರಿದರು.

ಇದೇ ವೇಳೆ ಶಾಲೆಯಲ್ಲಿ ವಿಜ್ಞಾನ, ಗಣಿತ ಹಾಗೂ ಇಂಗ್ಲಿಷ್ ವಿಷಯಗಳ ಶಿಕ್ಷಕರ ಕೊರತೆಯೂ ಇರುವುದರಿಂದ ವಿದ್ಯಾರ್ಥಿಗಳ ವಿದ್ಯಾಭ್ಯಾಸಕ್ಕೆ ತೊಂದರೆಯಾಗುತ್ತಿದೆ. ಆದ್ದರಿಂದ ಅಗತ್ಯ ಶಿಕ್ಷಕರನ್ನು ತುರ್ತಾಗಿ ನೇಮಕ ಮಾಡುವಂತೆ ಗ್ರಾಮಸ್ಥರು ಮನವಿ ಸಲ್ಲಿಸಿದರು.

ಮನವಿ ಸ್ವೀಕರಿಸಿದ ಸಚಿವರು, ಸಂಬಂಧಿಸಿದ ಅಧಿಕಾರಿಗಳೊಂದಿಗೆ ಚರ್ಚಿಸಿ ಅಗತ್ಯ ಕ್ರಮ ಕೈಗೊಳ್ಳುವುದಾಗಿ ಭರವಸೆ ನೀಡಿದರು.

# ಕಡೇಚೂರು ಕೈಗಾರಿಕೆಯಲ್ಲಿ ಮತ್ತೆ ದುರಂತ, ಮಾಲೀಕರ ಹೊಣೆ ಮಾಡಿ ಕೊಲೆ ಕೇಸ್ ದಾಖಲಿಸಿ: ಭೀಮುನಾಯಕ ಒತ್ತಾಯ

• ಮಲ್ಲಮ್ಮ ನುಡಿ ವಾರ್ತೆ ಯಾದಗಿರಿ




ಕಡೇಚೂರು ಕೈಗಾರಿಕಾ ಪ್ರದೇಶದ ವಿಷಾನಿಲ ದುರಂತದಿಂದ ಮೂವರು ಮೃತಪಟ್ಟು ಓರ್ವ ಗಂಭೀರ ಘಟನೆ ನಡೆದು ಒಂದು ಬೆಳಗ್ಗೆ ಮತ್ತೊಂದು ಕೈಗಾರಿಕೆಯಲ್ಲಿ ಇಂಥದ್ದೇ ದುರಂತ ನಡೆದು ಓರ್ವ ಕಾರ್ಮಿಕ ಗಂಭೀರ ಸ್ಥಿತಿಗೆ ತಲುಪಿ ಆಸ್ಪತ್ರೇ ಸೇರಿದ್ದು ಪ್ರಕರಣ ದಾಖಲಾಗಿದ್ದರೂ ಸರ್ಕಾರ ಇಂತಹ ಕಂಪೆನಿಗಳ ಮುಚ್ಚಲು ಕ್ರಮ ಕೈಗೊಳ್ಳುತ್ತಿಲ್ಲವೇಕೆ ಎಂದು ಕರ್ನಾಟಕ ರಕ್ಷಣಾ ವೇದಿಕೆ ಜಿಲ್ಲಾದ್ಯಕ್ಷ ಟಿ.ಎನ್. ಭೀಮುನಾಯಕ ಪ್ರಶ್ನಿಸಿದ್ದಾರೆ.ಈ ಕುರಿತು ಹೇಳಿಕೆ ನೀಡಿರುವ ಅವರು, ರಾಮೀಸ್ ಕಂಪನಿ ಹೆಸರಿನ ಕೈಗಾರಿಕೆ ಕಂಪನಿಯಲ್ಲಿ ಆಯಾನ್ ಶಂಶೋದ್ದಿನ್ ಹುಮ್ನಾಬಾದ್ ಎಂಬ ಕಾರ್ಮಿಕ ತೀವ್ರ ಅಸ್ವಸ್ಥಗೊಂಡಿದ್ದರಿಂದ ರಾತ್ರಿಯೇ ಹೆಚ್ಚಿನ ಚಿಕಿತ್ಸೆಗೆಂದು ರಾಯಚೂರು ರಿಮ್ಸ್ ಆಸ್ಪತ್ರೆಗೆ ರವಾನಿಸಲಾಗಿದೆ ಎಂದು ತಿಳಿಸಿರುವ ಅವರು, ಈಗಾಗಲೇ ಮಾಲಿನ್ಯ ನಿಯಂತ್ರಣ ಮಂಡಳಿಯಿಂದ ಇಲ್ಲಿನ ಎಲ್ಲ ವಿಷಯಕಾರಿ ರಾಸಾಯನಿಕ ಹೊರಸೂಸುವ ಕಂಪೆನಿಗಳಿಗೆ ಕಳೆದ ಜೂನ್ ತಿಂಗಳಲ್ಲಿಯೇ ಬಂದ್ ಮಾಡಲು ನೋಟೀಸ್ ಜಾರಿ ಮಾಡಿದ್ದಾರೆ ಎಂದು ಮಾಹಿತಿ ಇದೆ.


ಇದಲ್ಲದೇ ಅದೇ ತಿಂಗಳಲ್ಲಿ ಎಲ್ಲ ಕಂಪನಿಗಳಿಗೆ ನೋಟೀಸ್ ಸಿದ್ದಪಡಿಸಿದ್ದರೂ ಕೇವಲ ಒಂದೇ ಕಂಪೆನಿಗೆ ಜಾರಿ ಮಾಡಿ ಇನ್ನುಳಿದ ಕಂಪೆನಿಗಳಿಗೆ ನೋಟೀಸ್ ಕಳಿಸಿಲ್ಲ ಎಂಬ ಸಂಗತಿ ಬೆಳಕಿಗೆ ಬಂದಿದ್ದು ಇದರ ಹಿಂದೆ ಯಾವ ಹಿತಾಸಕ್ತಿ ಅಡಗಿದೆ ಎಂದು ಅವರು ಪ್ರಶ್ನಿಸಿದ್ದಾರೆ.

ಎಲ್ಲ ಅಪಾಯಕಾರಿ ಕಂಪೆನಿಗಳಿಗೆ ನೋಟೀಸ್ ಕೊಟ್ಟು ಬಂದ್ ಮಾಡಿದ್ದಿದ್ದರೆ ಕಾರ್ಮಿಕರು ಸಾಯುತ್ತಿದ್ದಿಲ್ಲ ಇದುವರೆಗೆ ಹಲವು ಕಾರ್ಮಿಕರು ಸಾವನ್ನಪ್ಪಿದ್ದಾರೆ ಇದಕ್ಕೆ ಕಂಪೆನಿಗಳು ಕೇವಲ ಪರಿಹಾರ ಕೊಟ್ಟು ಕೈತೊಳೆದುಕೊಳ್ಳುತ್ತಿದ್ದಾರೆ. ಆದರೆ ಕಾರ್ಮಿಕರ ಪ್ರಾಣ ಹರಣ ಮಾಡಿದ ಕಂಪೆನಿ ಮಾಲೀಕರ ವಿರುದ್ಧ ಎಫ್.ಎಸ್.ಎಲ್ ವರದಿ ಬಂದ ಮೇಲೆ ಕ್ರಮ ಕೈಗೊಳ್ಳುವುದಾಗಿ ಹೇಳುತ್ತಿದ್ದಾರೆ. ಆದರೆ ಕಾರ್ಮಿಕರ ಸಾವು ಮಾಲೀಕರ ಲಾಭಕೋರತನ ಹಾಗೂ ನಿರ್ಲಕ್ಷ ಕಾರಣದಿಂದ ಸಾವಾಗಿರುವುದರಿಂದ ಇದನ್ನು ಕೊಲೆ ಎಂದೇ ಪರಗಣಿಸಿ ಎಫ್.ಐ.ಆರ್. ದಾಖಲಿಸಿ ಮಾಲೀಕರನ್ನು ಎ–1 ಆರೋಪಿಯಾಗಿಸಿ ಬಂಧಿಸಬೇಕು ಮತ್ತು ಕಂಪೆನಿಗಳನ್ನು ಶಾಶ್ವತವಾಗಿ ಬಂದ್ ಮಾಡಿಸಬೇಕು ಎಂದು ಅವರು ಒತ್ತಾಯಿಸಿದ್ದಾರೆ.

ಈಗಾಗಲೇ ಸ್ಥಳೀಯ ಶಾಸಕರು ವಿಧಾನಸಭೆಯಲ್ಲಿ ನಿರಂತರ ಧ್ವನಿ ಎತ್ತಿ ಬಂದ್ ಮಾಡಲು ಒತ್ತಾಯಿಸಿದ್ದರೂ ರೈತರು ಹೋರಾಟಗಾರರು ಆಕ್ರೋಶ ವ್ಯಕ್ತಪಡಿಸಿದ್ದರೂ ಪತ್ರಿಕೆಗಳಲ್ಲಿ ವರದಿಯಾಗಿದೆ

ಆದರೆ ಸರ್ಕಾರ ಈ ಕಂಪೆನಿಗಳನ್ನು ಮುಚ್ಚಿಸಲು ಮೀನಾ ಮೇಷ ಎಣಿಸುತ್ತಿರುವುದೇಕೆ? ಯಾವು ಹಿತಾಸಕ್ತಿ ಕಾರಣಕ್ಕೆ ವಿಳಂಬ ನೀತಿ ಅನುಸರಿಸಲಾಗುತ್ತಿದೆ ಎಂದು ಅವರು ಪ್ರಶ್ನಿಸಿದ್ದಾರೆ.

ಒಂದೆಡೆ ಈ ಭಾಗದ ರೈತರು ಗುಳೆ ಹೋಗುತ್ತಿದ್ದಾರೆ ಮನೆಯಲ್ಲಿ ಹಿರಿಯ ಜೀವಗಳನ್ನು ಬಿಟ್ಟು ಹೋಗುತ್ತಿದ್ದು, ಅವರು ವಿಷಾನಿಲದಿಂದ ಸಾಯುವಂತಾಗಿದೆ. ಅತ್ತ ಕಾರ್ಮಿಕರು ಜೀವ ಕಳೆದುಕೊಳ್ಳುತ್ತಿದ್ದಾರೆ ಎಲ್ಲ ರೀತಿಯಿಂದಲೂ ಇಲ್ಲಿನ ಕಾರ್ಖಾನೆಗಳು ಲಾಭಕ್ಕಾಗಿ ಜೀವದ ಜೊತೆ ಚೆಲ್ಲಾಟ ಆಡುತ್ತಿದ್ದು ಕ್ರಿಮಿನಲ್ ಪ್ರಕರಣಗಳನ್ನು ದಾಖಲಿಸಬೇಕು ಮಾಲೀಕರನ್ನು ಬಂಧಿಸಿ ಶಿಕ್ಷಿಸಬೇಕು ಎಂದು ಆಗ್ರಹಿಸಿದ್ದು, ಇಲ್ಲವಾದಲ್ಲಿ ಉಗ್ರ ಹೋರಾಟ ಮಾಡಬೇಕಾಗುತ್ತದೆ ಎಂದು ಮಲ್ಲು ಮಾಳಿಕೇರಿ, ಸಿದ್ದು ನಾಯಕ ಹತ್ತಿಕುಣಿ, ಅಂಬ್ರೇಷ್ ಹತ್ತಿಮನಿ, ಸಂತೋಷ ನಿರ್ಮಲಕರ್, ನಿಂಗಪ್ಪ ಗುಡಗುಡಿ, ಭೀಮಾಶಂಕರ ಹತ್ತಿಕುಣಿ, ಪ್ರಕಾಶ ಪಾಟೀಲ್ ಜೈಗ್ರಾಮ್, ಶರಣಬಸಪ್ಪ ಯಲ್ಹೇರಿ, ಮೌನೇಶ ಮಾಧವಾರ, ಸುರೇಶ ಬೆಳಗುಂದಿ, ಮಹೇಶ ಸೈದಾಪೂರ, ದಿಲೀಪ್ ಕುಮಾರ ಸೈದಾಪೂರ, ಮಲ್ಲು ಬಾಡಿಯಾಲ, ಬಸ್ಸು ನಾಯಕ ಸೈದಾಪೂರ, ವೆಂಕಟರಾಮುಲು, ಸಾಬು ನೀಲಳ್ಳಿ, ನಾಗರಡ್ಡಿ ಕೂಡ್ಲೂರು ಎಚ್ಚರಿಸಿದ್ದಾರೆ.



ವಿಷಕಾರಿ ಕೈಗಾರಿಕೆಗಳನ್ನು ಮುಚ್ಚಿಸಲು ಈ ಭಾಗದ ಬೂಮಿ ಕಳೆದುಕೊಂಡ ರೈತರು, ಕೂಲಿ ಕಾರ್ಮಿಕರು ಪ್ರಜ್ಞಾವಂತರೂ ಸಹ ಕೈಜೋಡಿಸಬೇಕೆಂದು ಅವರು ಮನವಿ ಮಾಡಿಕೊಂಡಿದ್ದಾರೆ.

# ಶಿಕ್ಷಣದ ಜೊತೆಗೆ ಕ್ರೀಡೆಗೂ ಸಮಾನ ಆದ್ಯತೆ: ಮಲ್ಲಿಕಾರ್ಜುನ



• ಮಲ್ಲಮ್ಮ ನುಡಿ ವಾರ್ತೆ ಗುರುಮಠಕಲ್

ಹೋಬಳಿ ಮಟ್ಟದ 2026–27ನೇ ಸಾಲಿನ ಪ್ರಾಥಮಿಕ ಹಾಗೂ ಪ್ರೌಢಶಾಲೆಗಳ ಕ್ರೀಡಾ-ಕೂಟದ ಉದ್ಘಾಟನಾ ಸಮಾರಂಭ ಗುರುವಾರ ಪಟ್ಟಣದ ಜವಾಹರಲಾಲ್ ನೆಹರು ಕ್ರೀಡಾಂಗಣದಲ್ಲಿ ವಿಜೃಂಭಣೆಯಿಂದ ನಡೆಯಿತು.

ಕಾರ್ಯಕ್ರಮವನ್ನು ಉದ್ದೇಶಿಸಿ ಮಾತನಾಡಿದ ತಾಲೂಕು ಪಂಚಾಯತ್ ಪಂಚಾಯತ್‌ರಾಜ್ ಸಹಾಯಕ ಅಧಿಕಾರಿ ಮಲ್ಲಿಕಾರ್ಜುನ್ ಎಸ್, "ಶಿಕ್ಷಣದ ಜೊತೆಗೆ ಕ್ರೀಡೆಗೂ ಸಮಾನ ಮಹತ್ವ ನೀಡಬೇಕು. ಕ್ರೀಡೆ ಮಕ್ಕಳಲ್ಲಿ ಶಿಸ್ತು, ಆತ್ಮವಿಶ್ವಾಸ ಹಾಗೂ ನಾಯಕತ್ವದ ಗುಣಗಳನ್ನು ಬೆಳೆಸುತ್ತದೆ" ಎಂದು ಹೇಳಿದರು.

ತಾಲೂಕು ದೈಹಿಕ ಶಿಕ್ಷಣಾಧಿಕಾರಿ ಅನಿಲ್ ಕುಮಾರ್ ಮಾತನಾಡಿ, "ಪಠ್ಯದ ಜೊತೆಗೆ ಆಟವೂ ಮಕ್ಕಳ ಸಮಗ್ರ ಬೆಳವಣಿಗೆಗೆ ಅತ್ಯಗತ್ಯ. ಕ್ರೀಡಾ ಚಟುವಟಿಕೆಗಳಲ್ಲಿ ಸಕ್ರಿಯವಾಗಿ ಭಾಗವಹಿಸಿ ತಮ್ಮ ಪ್ರತಿಭೆಯನ್ನು ಪ್ರದರ್ಶಿಸುವ ಮೂಲಕ ಕ್ರೀಡಾ ಮನೋಭಾವ ಬೆಳೆಸಿಕೊಳ್ಳಬೇಕು. ದೇಶಕ್ಕೆ ಕೀರ್ತಿ ತರುವ ಕ್ರೀಡಾಪಟುಗಳಾಗಿ ಹೊರಹೊಮ್ಮಬೇಕು" ಎಂದು ವಿದ್ಯಾರ್ಥಿಗಳಿಗೆ ಕರೆ ನೀಡಿದರು.

ಕಾರ್ಯಕ್ರಮದಲ್ಲಿ ತಾಲೂಕು ದೈಹಿಕ ಶಿಕ್ಷಣಾಧಿಕಾರಿ ಅನಿಲ್ ಕುಮಾರ್, ಶಿಕ್ಷಣ ಸಂಯೋಜಕ ರವೀಂದ್ರ ಚವಾಣ್, ಸರ್ಕಾರಿ ನೌಕರರ ಸಂಘದ ತಾಲೂಕು ಅಧ್ಯಕ್ಷ ಸಂತೋಷ್ ನೀರೇಟಿ, ಲಕ್ಷ್ಮಿಕಾಂತ್ ರೆಡ್ಡಿ, ನಾರಾಯಣರೆಡ್ಡಿ ಪೊಲೀಸ್ ಪಾಟೀಲ್, ಹಣಮ್ಯ ನಾಯಕ್, ರಘುಪತಿ ರೆಡ್ಡಿ, ಚಂದು ಜಾಧವ್, ಶ್ರೀಮತಿ ದುರ್ಗಮ್ಮ, ಶ್ರೀಮತಿ ವಿಜಯಲಕ್ಷ್ಮಿ, ದೋರನಹಳ್ಳಿ ಅನಿಲ್ ಕುಮಾರ್, ನಾಗೇಶ್, ಆಂಜನೇಯಲು, ನಾಗಿರೆಡ್ಡಿ, ಶಿವಾರೆಡ್ಡಿ, ಚಂದ್ರಕಾಂತ್, ಬಾಲಪ್ಪ ಸಿರಿಗೆಂ, ಸುನಿಲ್ ಶುಕ್ಲಾ, ಬಾಲರಾಜ ಎಮ್, ಮಹೇಶ್ ಎಸ್ಪಿ, ಸೇರಿದಂತೆ ಗಣ್ಯರು, ಶಿಕ್ಷಕರು ಹಾಗೂ ಸಿಬ್ಬಂದಿ ಉಪಸ್ಥಿತರಿದ್ದರು.

ರಾಂಪುರ, ಶಿವಪುರ, ಪುಟ್ ಪಾಕ, ಹಿಮ್ಲಾಪುರ, ಚೆಪ್ಪೆಟ್ಲಾ, ಹತ್ತಿಕುಣಿ ಸೇರಿದಂತೆ ಗುರುಮಠಕಲ್ ವಲಯದ ವಿವಿಧ ಗ್ರಾಮಗಳ ಶಾಲೆಗಳ ವಿದ್ಯಾರ್ಥಿಗಳು ಕ್ರೀಡಾಕೂಟದಲ್ಲಿ ಉತ್ಸಾಹದಿಂದ ಭಾಗವಹಿಸಿ ಗಮನ ಸೆಳೆದರು.

# ವಚನ ಸಾಹಿತ್ಯ ಸಮಾಜಕ್ಕೆ ದಾರಿದೀಪ: ಡಾ.ಶುಭಾಶ್‌ಚಂದ್ರ ಕೌಲಗಿ

• ಮಲ್ಲಮ್ಮ ನುಡಿ ವಾರ್ತೆ ಯಾದಗಿರಿ



ವಚನ ಸಾಹಿತ್ಯವು ಕೇವಲ ಧಾರ್ಮಿಕ ಅಭಿವ್ಯಕ್ತಿಯಲ್ಲ, ಸಮಾಜದಲ್ಲಿದ್ದ ಅಸಮಾನತೆ, ಅಂಧಶ್ರದ್ಧೆ ಹಾಗೂ ಚಾತುರ್ವರ್ಣ ವ್ಯವಸ್ಥೆಯ ವಿರುದ್ಧ ಜಾಗೃತಿ ಮೂಡಿಸಿ ಸಮಾಜ ಸುಧಾರಣೆಗೆ ಅಪಾರ ಕೊಡುಗೆ ನೀಡಿದ ಮಹಾನ್ ಚಳವಳಿಯಾಗಿದೆ ಎಂದು ಡಾ. ಸುಭಾಷ್ಚಂದ್ರ ಕೌಲಗಿ ಹೇಳಿದರು. ನಗರದ ಸರ್ಕಾರಿ ಪದವಿ ಮಹಾವಿದ್ಯಾಲಯದಲ್ಲಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಕರ್ನಾಟಕ ಸಂಗೀತ ನೃತ್ಯ ಅಕಾಡೆಮಿ, ಬೆಂಗಳೂರು, ಡಿ.ಡಿ.ಯು. ಸಮೂಹ ಶಿಕ್ಷಣ ಸಂಸ್ಥೆಗಳು (ರಿ), ಯಾದಗಿರಿ ಹಾಗೂ ಸರ್ಕಾರಿ ಪದವಿ ಮಹಾವಿದ್ಯಾಲಯದ ಸಂಯುಕ್ತ ಆಶ್ರಯದಲ್ಲಿ ಆಯೋಜಿಸಿದ್ದ "ವಚನ ವೈಭವ–ಸಂಗೀತ ನೃತ್ಯೋತ್ಸವ" ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು. ಹಿಂದಿನ ರಾಜರ ಕಾಲದಲ್ಲಿ ಸಂಗೀತ, ಸಾಹಿತ್ಯ ಹಾಗೂ ನೃತ್ಯಕಲೆಗಳಿಗೆ ರಾಜಾಶ್ರಯ ದೊರೆಯುತ್ತಿತ್ತು. ಇಂದು ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಸರ್ಕಾರದ ಆಶ್ರಯದಲ್ಲಿ ಕಾರ್ಯನಿರ್ವಹಿಸುತ್ತಿರುವ ವಿವಿಧ ಅಕಾಡೆಮಿಗಳು ಆ ಜವಾಬ್ದಾರಿಯನ್ನು ಯಶಸ್ವಿಯಾಗಿ ನಿರ್ವಹಿಸುತ್ತಿವೆ. ಕರ್ನಾಟಕ ಸಂಗೀತ ನೃತ್ಯ ಅಕಾಡೆಮಿ ಆಯೋಜಿಸಿರುವ ವಚನ ವೈಭವ ಕಾರ್ಯಕ್ರಮವು ವಚನ ಸಾಹಿತ್ಯದ ಮೌಲ್ಯಗಳನ್ನು ಜನಸಾಮಾನ್ಯರಿಗೆ ತಲುಪಿಸುವ ಮಹತ್ವದ ಪ್ರಯತ್ನವಾಗಿದೆ ಎಂದು ಹೇಳಿದರು. ವಚನಗಳು ಸಮಾಜವನ್ನು ತಿದ್ದುವ, ಸಮಾನತೆ ಹಾಗೂ ಮಾನವೀಯ ಮೌಲ್ಯಗಳನ್ನು ಬಿತ್ತುವ ಶಕ್ತಿಯನ್ನು ಹೊಂದಿವೆ. ಇಂದಿನ ಒತ್ತಡದ ಬದುಕಿನಲ್ಲಿ ಮಾನಸಿಕ ನೆಮ್ಮದಿಗಾಗಿ ಸಂಗೀತದ ಮೊರೆ ಹೋಗುವುದು ಅಗತ್ಯವಾಗಿದ್ದು, ಇಂತಹ ಕಾರ್ಯಕ್ರಮಗಳು ಮುಂದಿನ ದಿನಗಳಲ್ಲಿ ಇನ್ನಷ್ಟು ವಿಸ್ತರಿಸಲಿ ಎಂದು ಆಶಿಸಿದರು. ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಕರ್ನಾಟಕ ಸಂಗೀತ ನೃತ್ಯ ಅಕಾಡೆಮಿಯ ಅಧ್ಯಕ್ಷೆ ಶ್ರೀಮತಿ ಶುಭ ಧನಂಜಯ್ ಮಾತನಾಡಿ, "ಯಾದಗಿರಿ ಜಿಲ್ಲೆಯನ್ನು ಕೇವಲ ಹಿಂದುಳಿದ ಜಿಲ್ಲೆಯೆಂಬ ಹಣೆಪಟ್ಟಿಯಿಂದ ನೋಡುವ ಮನೋಭಾವ ನಮ್ಮದಲ್ಲ. ಈ ನೆಲದಲ್ಲಿ ಸಂಗೀತ, ಸಾಹಿತ್ಯ ಮತ್ತು ಸಂಸ್ಕೃತಿಯ ಶ್ರೀಮಂತ ಪರಂಪರೆ ಅಡಗಿದೆ. ಅದನ್ನು ರಾಜ್ಯದ ಗಮನಕ್ಕೆ ತರುವ ಉದ್ದೇಶದಿಂದಲೇ 'ವಚನ ವೈಭವ–ಸಂಗೀತ ನೃತ್ಯೋತ್ಸವ' ಆಯೋಜಿಸಿದ್ದೇವೆ. ಮುಂದಿನ ದಿನಗಳಲ್ಲಿ ಇದಕ್ಕಿಂತಲೂ ಅದ್ದೂರಿ ಹಾಗೂ ಅರ್ಥಪೂರ್ಣ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಆಯೋಜಿಸುವ ಸಂಕಲ್ಪವನ್ನು ಹೊಂದಿದ್ದೇವೆ" ಎಂದು ಹೇಳಿದರು.

ಸಾಹಿತಿ ಡಾ. ಜಯದೇವಿ ಗಾಯಕವಾಡ ಮಾತನಾಡಿ, ಹಿಂದುಳಿದ ಜಿಲ್ಲೆಯಾದ ಯಾದಗಿರಿಯಲ್ಲಿ ಇಂತಹ ಅರ್ಥಪೂರ್ಣ ಸಾಂಸ್ಕೃತಿಕ ಕಾರ್ಯಕ್ರಮ ಆಯೋಜಿಸಿರುವ ಕರ್ನಾಟಕ ಸಂಗೀತ ನೃತ್ಯ ಅಕಾಡೆಮಿಯ ಅಧ್ಯಕ್ಷರು ಹಾಗೂ ಸರ್ವ ಸದಸ್ಯರ ಕಾರ್ಯವನ್ನು ಶ್ಲಾಘಿಸಿದರು. ಗ್ರಾಮೀಣ ಪ್ರದೇಶಗಳಲ್ಲಿಯೂ ಸಂಗೀತ, ಸಾಹಿತ್ಯ ಮತ್ತು ಸಾಂಸ್ಕೃತಿಕ ಚಟುವಟಿಕೆಗಳಿಗೆ ಉತ್ತೇಜನ ನೀಡುತ್ತಿರುವುದು ಅಭಿನಂದನೀಯ ಎಂದು ಹೇಳಿದರು. ಇದಕ್ಕೂ ಮೊದಲು ಕರ್ನಾಟಕ ಸಂಗೀತ ನೃತ್ಯ ಅಕಾಡೆಮಿಯ ಸದಸ್ಯ ಖಾಸಿಂ ಮಲ್ಲಿಗೋಡು ಸ್ವಾಗತಿಸಿದರು. ರಮೇಶ್ ಗೊಬ್ಬೂರು ಪ್ರಾಸ್ತಾವಿಕವಾಗಿ ಮಾತನಾಡಿದರು. ಕಾರ್ಯಕ್ರಮದಲ್ಲಿ ಅಕಾಡೆಮಿ ಸದಸ್ಯಪದ ದೇವರಾಜ ಸೇರಿದಂತೆ ಹಲವರು ಉಪಸ್ಥಿತರಿದ್ದರು.

ಡಾ. ಗುರುಬಸವ ಮಹಾಮನಿ ಅವರ ಮನಮೋಹಕ ವಯೊಲಿನ್ ವಾದನವು ಕಾರ್ಯಕ್ರಮದ ಪ್ರಮುಖ ಆಕರ್ಷಣೆಯಾಗಿತ್ತು. ಅವರ ವಯೊಲಿನ್‌ಗೆ ಸಂಗೀತ ಶಿಕ್ಷಕರಾದ ಶರಣು ವಠಾರ, ಚಂದ್ರಶೇಖರ್ ಗೋಗಿ ಹಾಗೂ ಅಂಬಾಮಹೇಶ್ವರಿ ಹುಲ್ಕಲ್ ಅವರು ವಚನ ಗಾಯನದ ಮೂಲಕ ಮೆರುಗು ನೀಡಿದರು. ಗುರುಮಠಕಲ್ ನೃತ್ಯ ಶಾಲೆಯ ವಿದ್ಯಾರ್ಥಿಗಳ ಭರತನಾಟ್ಯ ಪ್ರದರ್ಶನವೂ ನೆರೆದಿದ್ದ ಕಲಾಭಿಮಾನಿಗಳ ಮನಸೂರೆಗೊಂಡಿತು.

ಶಂಕ್ರಪ್ಪ ಹೂಗಾರ ವಂದನಾರ್ಪಣೆ ಸಲ್ಲಿಸಿದರು.

# ಪತ್ರಿಕೆ ಓದು ಜೀವನ ಮೌಲ್ಯ ರೂಪಿಸುತ್ತದೆ



ಇಂಡಿ:ಪತ್ರಿಕೆ ಓದು ಜೀವನ ಮೌಲ್ಯ ರೂಪಿಸುತ್ತದೆ. ನಿತ್ಯ ದಿನಪತ್ರಿಕೆಗಳನ್ನು ಓದುವದರಿಂದ ಜ್ಞಾನ ಹೆಚ್ಚಾಗುತ್ತಿದೆ ಎಂದು ಸಂಸ್ಥಾನ ಮಠ ಶಿರಶ್ಯಾಡದ ಅಭಿನವ ಮುರುಗೇಂದ್ರ ಶಿವಾಚಾರ್ಯರರು ಹೇಳಿದರು. ನಗರದ ಕ್ಷೇತ್ರಶಿಕ್ಷಣಾಧಿಕಾರ್ಯಾಲಯದ ಗುರುಭವನದಲ್ಲಿ ಶ್ರೀ ಭಾಗ್ಯವಂತಿ ವಿದ್ಯಾವರ್ಧಕ ಸಂಸ್ಥೆ ಚವಡಿಹಾಳ ಇವರಿಂದ ನಡೆದ ಪತ್ರಿಕಾ ದಿನಾಚರಣೆ ಕಾರ್ಯಕ್ರಮದಲ್ಲಿ ಮಾತನಾಡಿದರು.

ಉಪನ್ಯಾಸನೀಡಿ ನಾದ ಶಾಲೆಯ ಮುಖ್ಯೋಪಾಧ್ಯಾಯ ಚಿದಂಬರ ಬಂಡಗರ ಮಾತನಾಡಿ ಪತ್ರಿಕೋಧ್ಯಮ ಪ್ರಜಾಪ್ರಭುತ್ವದ ನಾಲ್ಕನೆಯ ಅಂಗವಾಗಿದ್ದು ಪರ್ತಕರ್ತರ ಜವಾಬ್ದಾರಿ ಹೆಚ್ಚಿದ್ದು ಪರ್ತಕರ್ತರು ಸಾರ್ವಜನಿಕರ ಮತ್ತು ಸರಕಾರದ ನಡುವೆ ಸೇತುವೆಯಾಗಿ ಕೆಲಸ ಮಾಡುತ್ತಾರೆ. ಆಡಳಿತದಲ್ಲಿ ಉತ್ತರದಾಯಿತ್ವ ಮತ್ತು ಪಾರದರ್ಶಕತೆ ಕಾಯ್ದು ಕೊಳ್ಳಲು ಮಾಧ್ಯಮಗಳ ಸಹಕಾರ ಅಗತ್ಯವಾಗಿದೆ , ಪತ್ರಕರ್ತರು ಧ್ವನಿ ಇಲ್ಲದವರಿಗೆ ಧ್ವನಿಯಾಗಿ ಸೇವೆ ಮಾಡಬೇಕು ಎಂದರು.ತಹಸೀಲ್ದಾರ ನಾಗೇಂದ್ರ ಕೋಳಶೆಟ್ಟಿ ಮಾತನಾಡಿ ಸಮಾಜದ ಆಗು ಹೋಗುಗಳನ್ನು ಮಾಧ್ಯಮಗಳು ತೋರಿಸುತ್ತವೆ. ಮಾಧ್ಯಮಗಳು ಇಲ್ಲದೆ ಇದ್ದರೆ ನಮ್ಮ ಕೆಲಸಗಳು ನಮ್ಮಲ್ಲೇ ಉಳಿಯುತ್ತಿದ್ದವು. ಮಾಧ್ಯಮಗಳಿಂದ ಎಲ್ಲರಿಗೂ ಪರಿಚಯವಾಗುತ್ತಿದೆ ಎಂದರು.ತಾಪಂ ಕಾರ್ಯನಿರ್ವಾಹಕ ಅಧಿಕಾರಿ ಮಹಾದೇವಪ್ಪ ಏವೂರ, ಸರಕಾರಿ ನೌಕರರ ಸಂಘದ ಅಧ್ಯಕ್ಷ ಬಸವರಾಜ ರಾಹೂರ, ಬಿಜೆಪಿ ಧುರೀಣ ಅನೀಲ ಜಮಾದಾರ, ಜೆಡಿ ಎಸ್ ಧುರೀಣ ಅಯೂಬ ನಾಟಿಕಾರ, ಪ್ರಾಚಾರ್ಯ ಚಂದು ದಶವಂತ, ಉಮೇಶ ಕೋಳೆಕರ , ವಾಯ್.ಜಿ.ಬಿರಾದಾರ, ಬಸವರಾಜ ಗೊರನಾಳ ಮಾತನಾಡಿದರು.ವೇದಿಕೆಯ ಮೇಲೆ ಕ್ಷೇತ್ರಶಿಕ್ಷಣಾಧಿಕಾರಿ ಮೋಹನಕುಮಾರ, ಹೆಸ್ಕಾ ಎಇಇ ಎಸ್.ಆರ್ ಮೆಂಡೆಗಾರ, ಪ್ರಕಾಶ ಐರೋಡಗಿ ಮುಖ್ಯ ಗುರುಗಳಾದ ನಿಜಣ್ಣ ಕಾಳೆ, ಯಮನಾಜಿ ಸಾಳುಂಕೆ, ಆರ್.ಬಿ.ಸಿಂಪಿ, ಎ.ಸಿ.ಪಾಟೀಲ, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಶಿವಯೋಗಪ್ಪ ಚನಗೊಂಡ ಮತ್ತಿತರಿದ್ದರು.ಇದೇ ವೇಳೆ ತಾಲೂಕಿನ ಎಲ್ಲ ಪರ್ತಕರ್ತರನ್ನು, ಪತ್ರಿಕೆಯ ಏಜಂಟರಾದ ಮಲ್ಲು ಆಳುರ, ಸಿದರಾಯ ಆಳೂರ ಮತ್ತು ಚನಬಸಪ್ಪ ಏವೂರ , ಪತ್ರಿಕೆ ಹಂಚುವ ಹುಡುಗರನ್ನು ಸನ್ಮಾನಿಸಲಾಯಿತು.

## ಎದೆ ಹಾಲಿನ ಮಹತ್ವ ಕುರಿತು ಅರಿವು



• ಮಲ್ಲಮ್ಮ ನುಡಿ ವಾರ್ತೆ ಲಿಂಗಸಗೂರ

ಪಟ್ಟಣದಲ್ಲಿ ಸಮಗಾರ ಓಣಿ ಅಂಗನವಾಡಿ ಕೇಂದ್ರದಲ್ಲಿ ಏರಿಯಾದ ಎಲ್ಲ ಗರ್ಭಿಣಿ ಬಾಣಂತಿಯರನ್ನು ಕರೆಯಿಸಿ ಎದೆ ಹಾಲಿನ ಮಹತ್ವದ ಕುರಿತು ತಿಳಿಸಲಾಯಿತು. ಇದರಲ್ಲಿ ಜೊತೆಗೆ ಮಗು ಜನಿಸಿದ ಅರ್ಧ ಗಂಟೆ ಒಳಗಾಗಿ ತಾಯಿ ತನ್ನ ಮಗುವಿಗೆ ಹಾಲನ್ನು ಕುಡಿಸಬೇಕು. ಇದರಲ್ಲಿ ಕೊಲೆಷ್ಟ್ರಲ ಇದ್ದು ಇದು ಮಾರಕ ರೋಗಗಳನ್ನು ತಡೆಗಟ್ಟುವ ಶಕ್ತಿ ಇದ್ದು, ತಾಯಿ ಮಗು ಅತ್ತಾಗಲೆಲ್ಲ ಹಾಲನ್ನು ಕೊಡಬೇಕು. 6 ತಿಂಗಳುಗಳ ಕಾಲ ಮಗುವಿಗೆ ಹಾಲನ್ನು ಮಾತ್ರ ಕೊಡಬೇಕು. 6 ತಿಂಗಳುಗಳ ನಂತರ ಪೂರಕ ಆಹಾರದ ಜೊತೆಗೆ 2 ವರ್ಷದ ವರೆಗೆ ಮಗುವಿಗೆ ಹಾಲನ್ನು ನೀಡಬೇಕು. ಇದರಿಂದ ಮಗು ಸದೃಢ ವಾಗಿ ಬೆಳೆಯಲು ಸಾಧ್ಯವಾಗುತ್ತದೆ. ಪ್ರಾಣೇಶ್ ಆರೋಗ್ಯ ಅಧಿಕಾರಿ ಹೇಳಿದರು.

ಈಸಂದರ್ಭದಲ್ಲಿ ಲಕ್ಷ್ಮೀ ಎಸ್ ಹಣಗಿ ವಲಯ ಮೇಲ್ವಿಚಾರಕಿ , ನಾಗರತ್ನ ,ಬಸಲಿಂಗಮ್ಮ ,ಅರೋಗ್ಯ ಸಿಬ್ಬಂದಿ

ಈರಮ್ಮ ,ವೀಣಾ ,ದಿವ್ಯ ,ಲಷ್ಮಿ, ನಾಗಮ್ಮ ಅಂ ಕಾಕತ್ರೆ ಯರು ಸಹಾಯಕಿ ಏರಿಯಾದ ಜನರು ಸೇರಿದಂತೆ ಉಪಸ್ಥಿತರಿದ್ದರು

# ಪತ್ರಕರ್ತರ 4ನೇ ರಾಜ್ಯಸಮ್ಮೇಳನ ಯಶಸ್ವಿಗೊಳಿಸಿ

• ಮಲ್ಲಮ್ಮ ನುಡಿ ವಾರ್ತೆಕುರುಗೋಡು



ಆ.6 ಕರ್ನಾಟಕ ಕಾರ್ಯನಿರತ ಪತ್ರಕರ್ತರ ಧ್ವನಿ ಸಂಘಟನೆಯ ನೇತೃತ್ವದಲ್ಲಿ ಆ. 8 ರಂದು ಬೆಂಗಳೂರಿನ ನೆಲಮಂಗಲದಲ್ಲಿ , ಶನಿವಾರ ಬೆಳಿಗ್ಗೆ 10;30ಕ್ಕೆ, ಪುಷ್ಪಬೈರೇಗೌಡಕನ್ವೆನ್ಷೆನ್ ಹಾಲ್‌ನಲ್ಲಿ ಜರುಗುವ 4ನೇ ರಾಜ್ಯ ಪತ್ರಕರ್ತರ ಸಮ್ಮೇಳನ ಜರುಗಿಸಲಾಗುತ್ತಿದೆ ಎಂದು ಕರ್ನಾಟಕ ಕಾರ್ಯನಿರತ ಪತ್ರಕರ್ತರ ಧ್ವನಿಸಂಘಟನೆಯ ರಾಜ್ಯಧ್ಯಕ್ಷ ಡಾ.ಬಂಗ್ಲೆಮಲ್ಲಿಕಾರ್ಜುನ ಹೇಳಿದರು. ಅವರು ಪತ್ರಕರ್ತರ ಸಂಘದಿಂದ ಜರುಗುವ 4ನೇ ರಾಜ್ಯಸಮ್ಮೇಳನ ಹಂಗವಾಗಿ ಕುರುಗೋಡು ಪಟ್ಟಣಕ್ಕೆ ಆಗಮಿಸಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಕಾರ್ನಾಟಕ ಕಾರ್ಯನಿರತ ಪತ್ರಕರ್ತರ ಧ್ವನಿ ಸಂಘಟನೆ ರಾಜ್ಯದ ಮೂಲೆ–ಮೂಲೆಗಳಲ್ಲಿ ತನ್ನ ಕಾರ್ಯಚಟುವಟಿಕೆಗಳನ್ನು ದಿನದಿಂದ–ದಿನಕ್ಕೆ ಹೆಚ್ಚಿನ ಪ್ರಮಾಣದಲ್ಲಿ ಪತ್ರಕರ್ತರೆ ಏಳಿಗೆಗಾಗಿ ಸಭೆ, ಸಮಾರಂಭ ಹಾಗು ಪತ್ರಕರ್ತರ ಮೂಲಭೂತ ಸೌಕರ್ಯಕ್ಕಾಗಿ ಪ್ರತಿಭಟನೆ ಸೇರಿದಂತೆ ಇತರೆ ಕಾರ್ಯಕ್ರಮಗಳನ್ನು ಜಿಲ್ಲೆ, ತಾಲೂಕು ಮತ್ತು ಹೋಬಳಿಮಟ್ಟದಲ್ಲಿ ಮಾಡುತ್ತಾ ರಾಜ್ಯದಲ್ಲಿ ಮುಂಚೂಣಿಯಲ್ಲಿದೆ. ಮಾತ್ರವಲ್ಲದೆ ಪತ್ರಕರ್ತರಿಗೆ ಉಚಿತಬಸ್‌ಪಾಸ್, ನಿವೇಶನ, ಸೇರಿದಂತೆ ಇತರೆ ಮೂಲಭೂತ ಸೌಕರ್ಯಗಳಿಗೆ ಪ್ರತಿಭಟನೆ ಹಾಗು ಹೋರಾಟವನ್ನು ಮಾಡುತ್ತಾ ನಮ್ಮ ಸಂಘಟನೆ ಮುನ್ನುಗ್ಗುತ್ತಿದೆ ಎಂದು ಹೆಮ್ಮೆಯಿಂದ ನುಡಿದರು. ಕಾರ್ಯನಿರತಪತ್ರಕರ್ತರ ಧ್ವನಿಸಂಘಟನೆಯ ಬಳ್ಳಾರಿಜಿಲ್ಲಾಘಟಕದ ಪ್ರಧಾನಕಾರ್ಯದರ್ಶಿ ಕೆ.ಭೀಮಣ್ಣಅವರು ಮಾತನಾಡಿ, ಕ.ನಿ.ಪ. ಸಂಘಟನೆಯ ರಾಜ್ಯಾಧ್ಯಕ್ಷರಾದ ಡಾ.ಬಂಗ್ಲೆಮಲ್ಲಿಕಾರ್ಜುನ ಅವರ ನೇತೃತ್ವದಲ್ಲಿ ಜರುಗುವ 4ನೇ ರಾಜ್ಯ ಪತ್ರಕರ್ತರ ಸಮ್ಮೇಳನ ಇರುವುದರಿಂದ ರಾಜ್ಯದ ಮೂಲೆ–ಮೂಲೆಗಳಲ್ಲಿನ ಪರ್ತಕರ್ತರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ 4ನೇ ರಾಜ್ಯಸಮ್ಮೇಳ ಸಮಾರಂಭವನ್ನು ಯಶಸ್ವಿಗೊಳಿಸಬೇಕೆಂದು ಮನವಿಮಾಡಿದ್ದಾರೆ.

# ಕ್ರೀಡೆ ವಿದ್ಯಾರ್ಥಿಗಳಲ್ಲಿ ನಾಯಕತ್ವದ ಗುಣ ಬೆಳೆಸುತ್ತದೆ: ಈರಣ್ಣ ಹಳ್ಳಿಕೇರಿ

• ಮಲ್ಲಮ್ಮ ನುಡಿ ವಾರ್ತೆ ಕುಕನೂರು



ಕ್ರೀಡೆಗಳು ವಿದ್ಯಾರ್ಥಿಗಳಲ್ಲಿ ನಾಯಕತ್ವದ ಗುಣ, ಆತ್ಮವಿಶ್ವಾಸ ಹಾಗೂ ಧನಾತ್ಮಕ ಮನೋಭಾವವನ್ನು ಬೆಳೆಸುವ ಪ್ರಮುಖ ಸಾಧನಗಳಾಗಿವೆ. ಯುವಜನತೆ ದುಶ್ಚಟಗಳಿಂದ ದೂರವಿದ್ದು, ಕ್ರೀಡೆ ಮತ್ತು ಸಾಂಸ್ಕೃತಿಕ ಚಟುವಟಿಕೆಗಳಲ್ಲಿ ಸಕ್ರಿಯವಾಗಿ ತೊಡಗಿಸಿಕೊಳ್ಳುವ ಮೂಲಕ ಉಜ್ವಲ ಭವಿಷ್ಯ ರೂಪಿಸಿಕೊಳ್ಳಬೇಕು ಎಂದು ಮಾಜಿ ಎಪಿಎಂಸಿ ಅಧ್ಯಕ್ಷ ಈರಣ್ಣ ಹಳ್ಳಿಕೇರಿ ಹೇಳಿದರು.

ತಾಲೂಕಿನ ಮಗಳೂರಿನ ಕರ್ನಾಟಕ ಪಬ್ಲಿಕ್ ಸ್ಕೂಲ್ (ಕೆಪಿಎಸ್) ಆವರಣದಲ್ಲಿ ಬುಧವಾರ ನಡೆದ 2026–27ನೇ ಸಾಲಿನ ಮಗಳೂರು ವಲಯ ಮಟ್ಟದ ಪ್ರೌಢಶಾಲೆಗಳ ಕ್ರೀಡಾಕೂಟವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಶಿಕ್ಷಣ ಇಲಾಖೆಯ ಯಾವುದೇ ಕಾರ್ಯಕ್ರಮಗಳು ಯಶಸ್ವಿಯಾಗಬೇಕಾದರೆ ಸ್ಥಳೀಯ ಸಮುದಾಯದ ಸಹಕಾರ ಅತ್ಯಗತ್ಯವಾಗಿದೆ ಎಂದು ಯಲಬುರ್ಗಾ ಕ್ಷೇತ್ರ ಶಿಕ್ಷಣಾಧಿಕಾರಿ ಶ್ರೀನಿವಾಸ್ ಬನ್ನಿಗೋಳ ಹೇಳಿದರು.

ಜಿಲ್ಲಾ ಪಂಚಾಯತ್ ಕೊಪ್ಪಳ, ತಾಲೂಕು ಪಂಚಾಯತ್ ಕುಕನೂರು, ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ, ಕೊಪ್ಪಳ ಹಾಗೂ ಯಲಬುರ್ಗಾ ಕ್ಷೇತ್ರ ಶಿಕ್ಷಣಾಧಿಕಾರಿಗಳು ಮತ್ತು ಕ್ಷೇತ್ರ ಸಮನ್ವಯಾಧಿಕಾರಿಗಳ ಕಾರ್ಯಾಲಯದ ಸಂಯುಕ್ತ ಆಶ್ರಯದಲ್ಲಿ ಕ್ರೀಡಾಕೂಟ ಆಯೋಜಿಸಲಾಗಿತ್ತು.

ಸರ್ಕಾರದ ಅನುದಾನ ಸೀಮಿತವಾಗಿದ್ದರೂ ಗ್ರಾಮಸ್ಥರು, ಹಿರಿಯರು ಹಾಗೂ ಯುವಕರು ಒಗ್ಗೂಡಿ ನೀಡಿದ ಸಹಕಾರದಿಂದ ಕ್ರೀಡಾಕೂಟ ಹಬ್ಬದ ವಾತಾವರಣದಲ್ಲಿ ಯಶಸ್ವಿಯಾಗಿ ನಡೆಯುತ್ತಿದೆ ಎಂದು ಬನ್ನಿಗೋಳ ಮೆಚ್ಚುಗೆ ವ್ಯಕ್ತಪಡಿಸಿದರು. "ದೊಡ್ಡ ಕೆಲಸಗಳು ದೊಡ್ಡ ಮನಸ್ಸಿನ ಸಣ್ಣ ವ್ಯಕ್ತಿಗಳಿಂದ ನೆರವೇರುತ್ತವೆ" ಎಂಬ ಡಾ. ಬಿ.ಆರ್. ಅಂಬೇಡ್ಕರ್ ಅವರ ನುಡಿಯನ್ನು ಉಲ್ಲೇಖಿಸಿದ ಅವರು, ಗ್ರಾಮಸ್ಥರ ಒಗ್ಗಟ್ಟೇ ಕಾರ್ಯಕ್ರಮದ ಯಶಸ್ಸಿಗೆ ಕಾರಣವಾಗಿದೆ ಎಂದರು.

ಕ್ರೀಡೆಯು ಕೇವಲ ಮನರಂಜನೆಗೆ ಸೀಮಿತವಲ್ಲ; ಶಿಸ್ತು, ಸಂಯಮ, ಸರಿ–ತಪ್ಪಿನ ಅರಿವು ಹಾಗೂ ಸವಾಲುಗಳನ್ನು ಎದುರಿಸುವ ಸಾಮರ್ಥ್ಯವನ್ನು ವಿದ್ಯಾರ್ಥಿಗಳಲ್ಲಿ ಬೆಳೆಸುವ ಜೀವನ ಪಾಠವಾಗಿದೆ ಎಂದು ಅವರು ತಿಳಿಸಿದರು. ಕ್ರೀಡಾಪಟುಗಳು ಅಂಪೈರ್‌ಗಳ ತೀರ್ಪನ್ನು ಗೌರವಿಸಿ, ಸೋಲು–ಗೆಲುವಿಗಿಂತ ಭಾಗವಹಿಸುವಿಕೆಗೆ ಹೆಚ್ಚಿನ ಮಹತ್ವ ನೀಡಬೇಕು ಎಂದು ಸಲಹೆ ನೀಡಿದರು.

ವಲಯ ಮಟ್ಟದಲ್ಲಿ ಉತ್ತಮ ಸಾಧನೆ ಮಾಡುವ ಕ್ರೀಡಾಪಟುಗಳು ತಾಲೂಕು, ಜಿಲ್ಲಾ ಹಾಗೂ ರಾಜ್ಯ ಮಟ್ಟದಲ್ಲಿ ಮಿಂಚಿ ಶಾಲೆ ಹಾಗೂ ಗ್ರಾಮದ ಕೀರ್ತಿಯನ್ನು ಹೆಚ್ಚಿಸಲಿ ಎಂದು ಗಣ್ಯರು ಶುಭ ಹಾರೈಸಿದರು.

ಈ ಕಾರ್ಯಕ್ರಮದಲ್ಲಿ ಕೆಪಿಎಸ್ ಶಾಲೆ ಮುಖ್ಯೋಪಾಧ್ಯಾಯ ಹನುಮಂತಪ್ಪ ಎ ಎಚ್, ಯಲಬುರ್ಗಾ ಕುಕನೂರು ಪ್ರಭಾರಿ ದೈಹಿಕ ಶಿಕ್ಷಣಾಧಿಕಾರಿ, ಶರಣಪ್ಪ ವೀರಾಪುರ, ಎಸ್ ಡಿ ಎಂ ಸಿ ಉಪಾಧ್ಯಕ್ಷ ಅನಿಲ್ ಕುಮಾರ್ ಕಲ್ಲಾವಿ, ಬೆವೂರು ಠಾಣೆ ಪಿಎಸ್‌ಐ ಸಂಗನಗೌಡ, ಮಂಗಳೂರು ಗ್ರಾಮ ಪಂಚಾಯಿತಿಯ ಪಿಡಿಓ ನೀಲಂ ಚಳ್ಳಗೆರೆ, ಬಸವರಾಜ್ ಮೇಟಿ, ದೈಹಿಕ ಶಿಕ್ಷಕರ ಅಧ್ಯಕ್ಷ ಉಮೇಶ್ ಕಂಬಳಿ, ಮಾಜಿ ಗ್ರಾಮ ಪಂಚಾಯಿತಿ ಅಧ್ಯಕ್ಷ ಸಕ್ರಪ್ಪ ಚಿನ್ನುರು, ಹಿರೇಬೀಡುನಾಳ ರಾವಣಕಿ ಕುದುರೆಮೋತಿ ಮಂಗಳೂರು ವಟಪರವಿ ನೆಲಜೇರಿ ರಾವಣಕಿ–ಮಂಗಳೂರು ವಸತಿ ಶಾಲೆ ಸೇರಿದಂತೆ ಮಂಗಳೂರು ವಲಯದ ಒಟ್ಟು 9 ಶಾಲಾ ಮಕ್ಕಳು ಕ್ರೀಡಾಕೂಟದಲ್ಲಿ ಭಾಗಿಯಾಗಿದ್ದರು.

# ವಾಜಪೇಯಿ ನಗರ ನಿವೇಶನ ಯೋಜನೆಗೆ ಯೋಗ್ಯ ಭೂಮಿ ಮಂಜೂರು ಮಾಡುವಂತೆ ಕರವೇ ಆಗ್ರಹ



• ಮಲ್ಲಮ್ಮ ನುಡಿ ವಾರ್ತೆ ಲಿಂಗಸಗೂರ

ಪುರಸಭೆ ವ್ಯಾಪ್ತಿಯ ಸರ್ವೆ ನಂ.286ರಲ್ಲಿ ವಾಜಪೇಯಿ ನಗರ ನಿವೇಶನ ಯೋಜನೆಯಡಿ ಮಂಜೂರು ಮಾಡಿರುವ ಗುಡ್ಡಗಾಡು ಪ್ರದೇಶವನ್ನು ರದ್ದುಪಡಿಸಿ, ವಾಸಕ್ಕೆ ಯೋಗ್ಯವಾದ ಭೂಮಿಯನ್ನು ಮರು ಮಂಜೂರು ಮಾಡಬೇಕೆಂದು ಕರ್ನಾಟಕ ರಕ್ಷಣಾ ವೇದಿಕೆ ಸ್ವಾಭಿಮಾನಿ ಸೇನೆ ತಾಲೂಕು ಘಟಕದ ಅಧ್ಯಕ್ಷ ಜಿಲಾನಿ ಬಾಷಾ ಅವರು ಲಿಂಗಸುಗೂರು ಶಾಸಕ ಮಾನಪ್ಪ ಡಿ. ವಜ್ಜಲ್ ಅವರಿಗೆ ಮನವಿ ಸಲ್ಲಿಸಿದ್ದಾರೆ.

ಮನವಿಯಲ್ಲಿ, ಸರ್ವೆ ನಂ.286ರ ಭೂಮಿಯು ದೊಡ್ಡ ದೊಡ್ಡ ಕಲ್ಲುಬಂಡೆಗಳಿಂದ ಕೂಡಿದ ಗುಡ್ಡಗಾಡು ಪ್ರದೇಶವಾಗಿದ್ದು, ಮನೆ ನಿರ್ಮಿಸಿ ವಾಸಿಸಲು ಯಾವುದೇ ರೀತಿಯಲ್ಲೂ ಸೂಕ್ತವಲ್ಲ ಎಂದು ತಿಳಿಸಲಾಗಿದೆ. ಅಲ್ಲದೆ, ಈ ಕುರಿತು ಪುರಸಭೆ ಅಧಿಕಾರಿಗಳು ಸಹ ತಹಶೀಲ್ದಾರರಿಗೆ ವರದಿ ಸಲ್ಲಿಸಿರುವುದಾಗಿ ಉಲ್ಲೇಖಿಸಲಾಗಿದೆ.

ಸದರಿ ಪ್ರದೇಶದಲ್ಲಿ ರಸ್ತೆ, ಕುಡಿಯುವ ನೀರು, ವಿದ್ಯುತ್ ಸೇರಿದಂತೆ ಮೂಲಭೂತ ಸೌಲಭ್ಯಗಳನ್ನು ಕಲ್ಪಿಸಲು ಸಾಕಷ್ಟು ತೊಂದರೆಗಳಿದ್ದು, ಬಡ ಹಾಗೂ ನಿವೇಶನ ರಹಿತ ಕುಟುಂಬಗಳು ಅಲ್ಲಿ ಮನೆ ನಿರ್ಮಿಸಿ ವಾಸಿಸಲು ಸಾಧ್ಯವಾಗುತ್ತಿಲ್ಲ. ಹೀಗಾಗಿ ಸರ್ಕಾರದ ಮೂಲ ಉದ್ದೇಶವಾದ ಬಡವರಿಗೆ ಸುರಕ್ಷಿತ ವಸತಿ ಕಲ್ಪಿಸುವ ಗುರಿ ಈಡೇರುವುದಿಲ್ಲ ಎಂದು ಸಂಘಟನೆ ಅಭಿಪ್ರಾಯಪಟ್ಟಿದೆ. ಇದಲ್ಲದೆ, ಫಲಾನುಭವಿಗಳ ಆಯ್ಕೆ ಪಟ್ಟಿಯಲ್ಲಿ ಅಕ್ರಮಗಳು ನಡೆದಿದ್ದು, ಮನೆ ಹೊಂದಿರುವ ಹಾಗೂ ಆರ್ಥಿಕವಾಗಿ ಸದೃಢ ವ್ಯಕ್ತಿಗಳ ಹೆಸರನ್ನು ಸೇರಿಸಲಾಗಿದೆ ಎಂದು ಆರೋಪಿಸಿರುವ ಕರವೇ, ನಿಜವಾದ ಕಡು ಬಡವರು ಮತ್ತು ನಿವೇಶನ ರಹಿತ ಕುಟುಂಬಗಳನ್ನು ಗುರುತಿಸಿ ಆಯ್ಕೆ ಪಟ್ಟಿಯನ್ನು ಪುನಃ ಪರಿಶೀಲಿಸಿ ಅರ್ಹರಿಗೆ ಮಾತ್ರ ನಿವೇಶನ ಹಂಚಿಕೆ ಮಾಡಬೇಕೆಂದು ಒತ್ತಾಯಿಸಿ ಲಿಂಗಸೂಗೂರ ಶಾಸಕರಿಗೆ ಮನವಿ ಸಲ್ಲಿಸಿದರು

# ಗ್ರಾಮೀಣ ಪ್ರದೇಶಗಳಲ್ಲಿ ಸಾಂಕ್ರಾಮಿಕ ರೋಗಹರಡದಂತೆ ನಿಗಾವಹಿಸಿರಿ: ವಾಗೀಶ್‌ಶಿವಾಚಾರ್ಯ

• ಮಲ್ಲಮ್ಮ ನುಡಿ ವಾರ್ತೆಕುರುಗೋಡು



ಆ,6 ಕುರುಗೋಡು ತಾಲೂಕಿನ ಗ್ರಾಮೀಣ ಪ್ರದೇಶಗಳಲ್ಲಿ ಜನರಿಗೆ ರೋಗಗಳು ಹರಡದಂತೆ ಮುಂಜಾಗ್ರತಕ್ರಮವಾಗಿ ಗ್ರಾಮೀಣ ಪ್ರದೇಶಗಳಲ್ಲಿ ಗ್ರಾಪಂ. ಕಾರ್ಯಾಲಯದ ನೆರವಿನೊಂದಿಗೆ ಎಲ್ಲಾ ಕಡೆಗಳಲ್ಲಿ ಸ್ವಚ್ಚತಾಕ್ರಮಗಳನ್ನು ಅನುಸರಿಸಿ ಸಾಂಕ್ರಾಮಿಕರೋಗಗಳು ಹರಡದಂತೆ ನಿಗಾವಹಿಸಿ ಕಾರ್ಯನಿರ್ವಹಿಸಬೇಕೆಂದು ಜಿಲ್ಲಾಪಂಚಾಯಿತಿಯ ಮುಖ್ಯ ಯೋಜನಾಧಿಕಾರಿ ವಾಗೀಶಶಿವಾಚಾರ್ಯರು ಹೇಳಿದರು.

ಅವರು ಪಟ್ಟಣದ ತಾಲೂಕುಪಂಚಾಯಿತಿ ಕಛೇರಿಯ ಸಭಾಂಗಣದಲ್ಲಿ ಹಮ್ಮಿಕೊಳ್ಳಲಾಗಿದ್ದ 2ನೇ ತಾಲೂಕು ಮಟ್ಟದ ಕೆಡಿಪಿ ಸಮಾನ್ಯಸಭೆಯ ಕಾಮಗಾರಿಗಳ ಪ್ರಗತಿಪರಿಶೀಲನಾಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದರು. ಇದಕ್ಕೆ ಪ್ರತಿಕ್ರಿಯಿಸಿದದ ಕುರುಗೋಡು ತಾಲೂಕು ವೈಧ್ಯಾಧಿಕಾರಿ ಡಾ.ಮಂಜುನಾಥಜವಳಿ ಅವರು ಮಾತನಾಡಿ, ತಾಲೂಕಿನ ವ್ಯಾಪ್ತಿಗೆ ಬರುವ ಎಲ್ಲಾ ಗ್ರಾಪಂ ಮಟ್ಟದಲ್ಲಿ ಚರಂಡಿ, ಇತರೆ ಕಡೆಗಳಲ್ಲಿ ಬ್ಲೀಚಿಂಗ್ ಪೌಡರ್ ಸಿಂಪಡಿಸಿ ಸ್ವಚ್ಚತಾಕ್ರಮಗಳನ್ನು ಕೈಗೊಳ್ಳಲಾಗಿದೆ ಎಂದು ನುಡಿದರು.

ಕೃಷಿ ಇಲಾಖೆಯ ಬಳ್ಳಾರಿ ಸಹಾಯಕನಿರ್ದೇಶಕ ಗರ್ಜಪ್ಪ ಅವರು ಮಾತನಾಡಿ, ಪ್ರಸಕ್ತಸಾಲಿನ ಮುಂಗಾರುಹಂಗಾಮಿನಲ್ಲಿ ಮಳೆಕೊರತೆ ಆಗಿದ್ದರಿಂದ ಗ್ರಾಮೀಣ ಪ್ರದೇಶದ ರೈತರಿಗೆ ಅಲ್ಪಾವಧಿ ಬೆಳೆಗಳನ್ನು ಈಗಾಗಲೇ ಗ್ರಾಮಗಳಲ್ಲಿ ಟಾಂಟಾಂ ಮಾಡಿ ರೈತರಿಗೆ ಜಾಗೃತಿ ಮೂಡಿಸಲಾಗಿದೆ ಎಂದು ನುಡಿದರು. ತೆ–ೂಟಗಾರಿಕೆ ಸಹಾಯಕ ನಿರ್ದೇಶಕ ಶಂಕರ್ ಅವರು ಮಾತನಾಡಿ, ತೋಟಗಾರಿಕೆ ಬೆಳೆಗಳಾದ ಹಂಜೂರ, ಪಪ್ಪಾಯಿ, ಟಮಟೋ, ಸೇರಿದಂತೆ ಇತರೆ ಬೆಳೆಗಳನ್ನು ಕಡಿಮೆ ಖರ್ಚಿನಲ್ಲಿ ಬೆಳೆಗಳನ್ನು ರೈತರು ಬೆಳೆಯಬೇಕೆಂದು ತಿಳಿಸಲಾಗಿದೆ ಎಂದು ನುಡಿದರು. ಲೋಕೋಪಯೋಗಿ ಇಲಾಖೆಯ ಎಇಇ ಗವಿಯಪ್ಪ ಅವರು ಮಾತನಾಡಿ, ತಾಲೂಕಿನ ವ್ಯಾಪ್ತಿಯಲ್ಲಿ ಶಿಥಿಲಾವಸ್ಥೆಯಲ್ಲಿರುವ ಗೆಣಿಕೆಹಾಳು ಕಾಲುವೆಬ್ರಿಡ್ಜ್, ಸೋಮಲಾಪುರ ಕಾಲುವೆಬ್ರಿಡ್ಜ್ ಕಾಮಗಾರಿಗಳ ನಿರ್ಮಾಣವನ್ನು ಕೈಗೊತ್ತಿಕೊಳ್ಳಲಾಗುವುದು ಎಂದು ನುಡಿದರು. ಪಂಚಾಯತ್‌ರಾಜ್ ಇಂಜಿನಿಯರ್ ಉಪವಿಭಾಗದ ಎಇಇ ಹರೀಷ್ ಅವರು ಮಾತನಾಡಿ, ತಾಲೂಕಿನ ನಡೆಯುತ್ತಿರುವ ಕಾಮಗಾರಿಗಳನ್ನು ಪೂರ್ಣಗೊಳಿಸಲಾಗಿದ್ದು, ಉಳಿದ ಕಾಮಗಾರಿಗಳನ್ನು ಪೂರ್ಣಗೊಳಿಸಲಾಗುವುದು ಎಂದು ಭರವಸೆ ನೀಡಿದರು. ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆಯ ಎಇಇ ರಾಮಚಂದ್ರಪ್ಪ, ಜೆಸ್ಕಾಂ ಇಲಾಖೆಯ ಅಧಿಕಾರಿಗಳು ಸೇರಿದಂತೆ ಇತರೆ ತಾಲೂಕು ಮಟ್ಟದ ಅಧಿಕಾರಿಗಳು ತಮ್ಮ ಇಲಾಖೆಯ ಕಾಮಗಾರಿಗಳ ಪ್ರಗತಿ ಬಗ್ಗೆ ತಿಳಿಸಿದರು.

ಕುರುಗೋಡು ತಾಪಂ. ಕಾರ್ಯನಿರ್ವಾಹಕ ಅಧಿಕಾರಿ ಪೊಂಪಾಪತಿಹಿರೇಮಠ ಅವರು ಪ್ರಸ್ತಾವಿಕವಾಗಿ ಮಾತನಾಡಿದ ಅವರು, ತಾಲೂಕುಮಟ್ಟದ ಕೆಡಿಪಿ ಸಾಮಾನ್ಯಸಭೆಗೆ ಮುಂಬರುವದಿನಗಳಲ್ಲಿ ಯಾರು ತಪ್ಪಿಸದೇ ಕಡ್ಡಾಯವಾಗಿ ಕೆಡಿಪಿ ಸಭೆಗೆ ಹಾಜರಾಗಬೇಕು, ಇಲ್ಲದಿದ್ದರೆ ಅವರ ವಿರುದ್ದ ಸೂಕ್ತಕ್ರಮ ಕೈಗೊಳ್ಳಲಾಗುವುದು ಖಡಕ್ಕಾಗಿ ಎಲ್ಲರಿಗೂ ಸೂಚನೆ ನೀಡಿದರು.

ಸಭೆಯಲ್ಲಿ ತಾಲೂಕುಯೋಜನಾಧಿಕಾರಿ ರಾಧಿಕಾ, ನರೇಗಾ ಸಹಾಯಕನಿರ್ದೇಶಕ ಶಿವರಾಮರೆಡ್ಡಿ, ಪಂಚಾಯತ್‌ರಾಜ್‌ನ ರೇಣುಕಾಚಾರ್ಯಸ್ವಾಮಿ, ಸೇರಿದಂತೆ ಇತರೆ ತಾಲೂಕುಮಟ್ಟದ ಅಧಿಕಾರಿಗಳು, ತಾಲೂಕಿನ ಎಲ್ಲಾ ಪಿಡಿಒಗಳು, ಸಿಬ್ಬಂದಿವರ್ಗದರು ಇದ್ದರು.

# ಧ್ಯಾನ್ ಚಂದ ಕ್ರೀಡಾ ಇತಿಹಾಸದಲ್ಲಿ ಅವಿಸ್ಮರಣೀಯ ; ಚಂದ್ರಶೇಖರ



• ಮಲ್ಲಮ್ಮ ನುಡಿ ವಾರ್ತೆಮುದಗಲ್

ಧ್ಯಾನ್ ಚಂದ ಇಡೀ ಜಗತ್ತಿನಲ್ಲಿಯೇ ಅತ್ಯಂತ ಶ್ರೇಷ್ಠ ಕ್ರೀಡಾ ಮಾಂತ್ರಿಕರಾಗಿದ್ದರು. ಅವರ ಹೆಸರು ಇತಿಹಾಸದಲ್ಲೇ ಅವಿಸ್ಮರಣಿಯವೆಂದು ಕರ್ನಾಟಕ ಆಡಳಿತ ಸೇವೆ ವಿಶೇಷ ಕಾರ್ಯಧರ್ಶಿ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತರಾಜ್ ಇಲಾಖೆ ಬೆಂಗಳೂರು, ಚಂದ್ರಶೇಖರ ಎಂ. ಗಂಗಣ್ಣ ಗುರುವಾರ ಹೇಳಿದರು. ಪಟ್ಟಣದ ಇಂದಿರಾಗಾಂಧಿ ವಸತಿ ಶಾಲೆ, 2026–27ನೇ ಸಾಲಿನ ವಲಯ ಮಟ್ಟದ ಪ್ರೌಢ ಶಾಲೆಗಳ ಕ್ರೀಡಾಕೂಟ ಕಾರ್ಯಕ್ರದ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು ಇವತ್ತು ಮೇಜರ ಧ್ಯಾನ್ ಚಂದ ಅವರನ್ನು ನೆನಪಿಸಿಕೊಳ್ಳಲೇ ಬೇಕು. ಜರ್ಮಿನಿಯ ಸರ್ವಾಧಿಕಾರಿ ಹಿಟ್ಲರ್ ಬೆರಗುಗೊಳಿಸಿದ ಕ್ರೀಡಾ ಮಾಂತ್ರಿಕರಾಗಿದ್ದರು. ಎರಡನೇ ವಿಶ್ವ ಯುದ್ಧದ ಸಂದರ್ಭದಲ್ಲಿ ಹಿಟ್ಲರ್ ಒಬ್ಬ ಸರ್ವಾಧಿಕಾರಿಯಾಗಿ ಇಡೀ ಪ್ರಪಂಚದಲ್ಲಿ ಭಯ ಹುಟ್ಟಸಿ, ಪ್ರಕ್ಷುಬ್ದ ವಾತವರಣ ಸೃಷ್ಠಿಸಿದ ವ್ಯಕ್ತಿಯಾಗಿದ್ದ. ಭಾರತ ಮತ್ತು ಜರ್ಮನಿ ನಡುವೆ ನಡೆಯುವ ಕ್ರೀಡಾ ಕೂಟದಲ್ಲಿ ಧ್ಯಾನ್ ಚಂದವರು ಕೈಚಳಕದಿಂದ ಹಿಟ್ಲರ ತಂಡಕ್ಕೆ ಸೋಲುಂಟಾಗುತ್ತದೆ. ಇಡೀ ಜಗತ್ತಿನಲ್ಲಿಯೇ ಮೊಟ್ಟ ಮೊದಲ ಬಾರಿಗೆ ಹಿಟ್ಲರ್ನ ಗರ್ವಭಂಗ ಮಾಡಿದ ಕೀರ್ತಿ ಮೇಜರ ಧ್ಯಾನ ಚಂದ ಅವರಾಗಿರುತ್ತಾರೆ. ಕ್ರೀಡಾ ಚಟುವಟಿಕೆಯಲ್ಲಿ ಭಾಗವಹಿಸಿ ದೇಹವನ್ನು ಸದೃಢವಾಗಿ ಹಾಗೂ ಮನಸ್ಸು ಉಲ್ಲಾಸ, ಚೈತನ್ಯ ಭರಿತವಾಗಿರಲಿ ಎಂದು ಶುಭ ಹಾರೈಕೆ ಮಾಡಿದರು. ವೇದಿಕೆಯಲ್ಲಿ ಕ್ಷೇತ್ರ ಶಿಕ್ಷಣಾಧಿಕಾರಿ ಸುಜಾತ ಹೂನೂರು, ಪುರಸಭೆ ಮುಖ್ಯಾಧಿಕಾರಿ ಪ್ರವೀಣ್ ಕುಮಾರ ಬೋಗಾರ, ಟಿಪಿಓ ಚಂದ್ರಶೇಖರ, ಇಂದಿರಾಗಾಂಧಿ ವಸತಿ ಶಾಲೆ ಪ್ರಾಚಾರ್ಯ ದುರಗಪ್ಪ ಕುಣಿಕೆಲ್ಲೂರ, ಹಿರಿಯ ದೈಹಿಕ ಶಿಕ್ಷಕ ಎಸ್ ಎನ್ ಅಕ್ಕಿ, ಸಿಆರ್ಪಿ ರಾಮಚಂದ್ರ ಡವಳೆ, ಮಲ್ಲಪ್ಪ, ಶ್ರೀನಿವಾಸ ರೆಡ್ಡಿ, ಆರೋಗ್ಯ ಇಲಾಖೆ ಮಹೇಶ ಹೊಸಮನಿ, ಶರ–ಣಗೌಡ ಅಗಸಿಮುಂದಿನ, ಮುಖ್ಯ ಗುರುಗಳು ಬಾಲಚಂದ್ರ ದಾಸರ, ಬಸ್ಸಪ್ಪ ಹಂದ್ರಾಳ, ಸಂಗಪ್ಪ, ಸುಜಿತಾನಂದ, ಬಸವರಾಜ ಕರಡಿ, ಮಂಜುನಾಥ ಬನ್ನಿಗೊಳ್ಕರ್, ನೇಮಿಚಂದ ನಾಯಕ, ರಾಜೇಶ, ಬಾಬು ಕುರಿ, ರಾಚಪ್ಪ ಸೇರಿದಂತೆ ಶಾಲಾ ಸಿಬ್ಬಂದಿಗಳು. ದೈಹಿಕ ಶಿಕ್ಷಕರು, ಕ್ರೀಡಾ ಪಟುಗಳು, ಶಾಲ ವಿದ್ಯಾರ್ಥಿಗಳು ಇದ್ದರು.

# ಕಡಲಬ್ಬರದಿಂದಾಗಿ ತದಡಿ ಮೀನುಗಾರಿಕಾ ಬಂದರಿನಲ್ಲಿ ಲಂಗರು ಹಾಕಿದ ಬೋಟ್‌ಗಳು

• ಮಲ್ಲಮ್ಮ ನುಡಿ ವಾರ್ತೆಗೋಕರ್ಣ





ಆಳಮೀನುಗಾರಿಕೆಗೆ ಆ.1 ರಿಂದ ಸರಕಾರ ಅನುಮತಿ ನೀಡಿದ್ದರೂ ಕೂಡ ಬಹುತೇಕ ಬೋಟ್‌ಗಳು ಮೀನು ಶಿಕಾರಿಗೆ ಇಳಿಯದೇ ಲಂಗುರು ಹಾಕಿವೆ. ಮಳೆ ಕಡಿಮೆ ಇದ್ದರೂ ಕೂಡ ಗಾಳಿಯ ರಭಸಕ್ಕೆ ಅಳವೆಯಲ್ಲಿ ಕಡಲಬ್ಬರದಿಂದಾಗಿ ಬೋಟ್‌ಗಳು ಸಮಸ್ಯೆಗೆ ಸಿಲುಕಿವೆ. ಇನ್ನು ಕೆಲವು ಬೋಟ್‌ಗಳು ಶಿಕಾರಿಗೆ ತೆರಳಿದ್ದರೂ ಕೂಡ ನಿರೀಕ್ಷಿತ ಪ್ರಮಾಣದಲ್ಲಿ ಮೀನುಗಳು ಸಿಗುತ್ತಿಲ್ಲ. ತದಡಿ ಬಂದರನ್ನೇ ನಂಬಿಕೊಂಡು ಸಾವಿರಾರು ಜನರು ತಮ್ಮ ಬದುಕನ್ನು ಕಟ್ಟಿಕೊಂಡಿದ್ದಾರೆ. ಹೀಗಾಗಿ ಆರಂಭದಲ್ಲಿಯೇ ಮೀನು ಶಿಕಾರಿ ಮೀನುಗಾರರಿಗೆ ತಡೆಯುಂಟು ಮಾಡಿದೆ. ಹೀಗಾಗಿ ಮೀನುಗಾರರು ಸಹಜವಾಗಿಯೇ ನೊಂದುಕೊಳ್ಳುವಂತಾಗಿದೆ. ಇನ್ನು ಕಾರ್ಮಿಕರ ಕೊರತೆಯು ಕೂಡ ಕಂಡುಬರುತ್ತಿದ್ದರಿಂದಾಗಿ ಬೋಟ್ ಮಾಲಿಕರು ನಷ್ಟ ಅನುಭವಿಸುವಂತಾಗಿದೆ. ತದಡಿ ಒಂದು ಕಾಲದಲ್ಲಿ ಮೀನುಗಾರಿಕಾ ಬಂದರು ರಾಜ್ಯದಲ್ಲಿಯೇ ಹೆಸರುವಾಸಿಯಾಗಿತ್ತು.

ಮಲ್ಪೆ ಕಡೆಯಿಂದ ಫಿಶಿಂಗ್ ಬೋಟ್‌ಗಳು ನೂರಾರು ಈ ಬಂದರನ್ನೇ ಆಶ್ರಯಿಸಿಕೊಂಡಿತ್ತು. ವಿಶಾಲವಾದ ಕಡಲ ತೀರವಿದ್ದು, ಅಲ್ಲಿಯು ಕೂಡ ಬೋಟ್‌ಗಳು ನಿಲುಗಡೆಯಾಗುತ್ತಿದ್ದವು. ಆದರೆ ನಂತರದ ದಿನಗಳಲ್ಲಿ ಕಡಲ ಕೊರೆತದಿಂದಾಗಿ ಕಡಲು ತೀರವನ್ನು ನದಿಯು ಆವರಿಸಿಕೊಂಡಿದೆ. ವಿವಿದೆಡೆ ಬಂದರು ನಿರ್ಮಾಣಗೊಳ್ಳುತ್ತಿದ್ದಂತೆಯೇ ಉಡುಪಿ ಕಡೆಯಿಂದ ಬರುವ ಬೋಟ್‌ಗಳು ಸಂಪೂರ್ಣ ಸ್ಥಗಿತಗೊಂಡಿತ್ತು. ಹೀಗಾಗಿ ಸ್ಥಳೀಯರ ಬೋಟ್‌ಗಳು ಮಾತ್ರ ಇದ್ದು, ಅದರಲ್ಲಿಯೂ ಮತ್ಸ್ಯಕ್ಷಾಮ ಹಾಗೂ ಕಡಲಬ್ಬರದಿಂದಾಗಿ ಬೋಟ್ ಮಾಲಿಕರು ಅತಂತ್ರ ಸ್ಥಿತಿಯಲ್ಲಿದ್ದಂತಾಗಿದೆ.

# ಮಾಸಾಶನ ಕಡಿತ ಹಾಗೂ ಅವೈಜ್ಞಾನಿಕ ಆದಾಯ ಮಿತಿ ಖಂಡಿಸಿ ವಿಶೇಷ ಚೇತನರ ಪ್ರತಿಭಟನೆ



• ಮಲ್ಲಮ್ಮ ನುಡಿ ವಾರ್ತೆ ಸಿಂಧನೂರು

ಆ.06.ವಿಕಲಚೇತನರ, ಹಿರಿಯ ನಾಗರಿಕರ ಹಾಗೂ ವಿಧವಾ ಮಾಸಾಶನ ಕಡಿತಗೊಳಿಸಿರುವುದನ್ನು ಖಂಡಿಸಿ, ನಗರ ಹಾಗೂ ಗ್ರಾಮೀಣ ಪುನರ್ವಸತಿ ಕಾರ್ಯಕರ್ತರ ತಾಲೂಕು ಘಟಕದ ವತಿಯಿಂದ ತಹಶೀಲ್ದಾರ್ ಕಚೇರಿ ಎದುರು ಪ್ರತಿಭಟನೆ ಹಮ್ಮಿಕೊಳ್ಳಲಾಗಿತ್ತು.

ಪ್ರಸ್ತುತವಿರುವ 32,000 ರೂಪಾಯಿಗಳ ವಾರ್ಷಿಕ ಆದಾಯ ಮಿತಿಯನ್ನು ರದ್ದುಪಡಿಸಿ, ಬಿಪಿಎಲ್ ಕಾರ್ಡ್ದಾರರಿಗೆ ಇರುವಂತೆ 1,20,000 ರೂಪಾಯಿಗಳಿಗೆ ಏರಿಕೆ ಮಾಡಬೇಕು.

ತಾಂತ್ರಿಕ ಕಾರಣಗಳು ಹಾಗೂ ಆದಾಯದ ನೆಪವೊಡ್ಡಿ ತಡೆಹಿಡಿಯಲಾಗಿರುವ ಎಲ್ಲ ಮಾಸಾಶನ ಮತ್ತು ವೇತನಗಳನ್ನು ತಕ್ಷಣ ಬಿಡುಗಡೆ ಮಾಡಬೇಕು ಹಾಗೂ ಶೇ. 40ರಿಂದ 74ರಷ್ಟು ಅಂಗವಿಕಲತೆ ಇದ್ದವರಿಗೆ ತಿಂಗಳಿಗೆ 3,000 ರೂಪಾಯಿ ಹಾಗೂ ಶೇ. 75ಕ್ಕಿಂತ ಹೆಚ್ಚಿರುವವರಿಗೆ 5,000 ರೂಪಾಯಿ ಜೀವನ ಭತ್ಯೆ ನೀಡಬೇಕು ಎಂದು ಒತ್ತಾಯಿಸಿದರು.

ಪ್ರತಿಭಟನಾ ಸ್ಥಳಕ್ಕೆ ಆರ್.ಡಿ.ಸಿ.ಸಿ. ಬ್ಯಾಂಕ್ ನಿರ್ದೇಶಕರಾದ ಸೋಮನಗೌಡ ಬಾದರ್ಲಿ ಅವರು ಭೇಟಿ ನೀಡಿ, ವಿಶೇಷ ಚೇತನರ ಸಮಸ್ಯೆಗಳನ್ನು ಆಲಿಸಿದರು. ಬಳಿಕ ಮಾತನಾಡಿದ ಅವರು, ವಿಕಲಚೇತನರ ಬೇಡಿಕೆಗಳನ್ನು ಸರ್ಕಾರದ ಗಮನಕ್ಕೆ ತರುವುದಲ್ಲದೆ, ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಹಾಗೂ ಸಂಬಂಧಪಟ್ಟ ಸಚಿವರೊಂದಿಗೆ ಚರ್ಚಿಸಿ ಸಮಸ್ಯೆಗೆ ಶೀಘ್ರವೇ ಸೂಕ್ತ ಪರಿಹಾರ ದೊರಕಿಸಿಕೊಡಲು ಪ್ರಾಮಾಣಿಕ ಪ್ರಯತ್ನ ಮಾಡುವುದಾಗಿ ಭರವಸೆ ನೀಡಿದರು.

ನಂತರ ವಿವಿಧ ಬೇಡಿಕೆಗಳನ್ನೊಳಗೊಂಡ ಮನವಿ ಪತ್ರವನ್ನು ತಹಶೀಲ್ದಾರ್ ಮೂಲಕ ಮುಖ್ಯಮಂತ್ರಿಗಳಿಗೆ ಸಲ್ಲಿಸಲಾಯಿತು.

ಈ ಸಂದರ್ಭದಲ್ಲಿ ಹನುಮಂತ ಗಿಣಿವಾರ, ಶಕೀಲ್ ಸಾಬ್ ರಾಮತ್ನಾಳ, ವೀರಭದ್ರಪ್ಪ ಜಾಲಿಹಾಳ, ಕೆ ಬೀರಪ್ಪ ಗೊರೆಬಾಳ, ಪ್ರಕಾಶ್ ಸೋಮ್ಲಾಪುರ್, ಭೀಮರಾಯ ಸಿಂಧನೂರ್, ಎಂಡಿ ಹುಸೇನ್ ಸಾಬ್, ಬಸವರಾಜ್ ಸಾಸಲಮರಿ, ಹನುಮಂತ ಬಾದರ್ಲಿ, ತಿಮ್ಮಣ್ಣ ಮಾಡಿಸಿರವಾರ, ಚಂದಪ್ಪ ಪಗಡದಿನ್ನಿ, ರಮೇಶ್ ಗಾಂಧಿನಗರ್, ಮಾಯಪ್ಪ ಮಲ್ಲಾಪುರ್, ಸೇರಿದಂತೆ ಅನೇಕರು ಇದ್ದರು.

# ಎಸ್.ಐ.ಆರ್. ಪರಿಷ್ಕರಣೆ: 18.36 ಲಕ್ಷ ಗಣತಿ ನಮೂನೆ ಡಿಜಿಟಲೀಕರಣ

ಕಲಬುರಗಿ, ಅ.06: ವಿಶೇಷ ಸಮಗ್ರ ಮತದಾರರ ಪಟ್ಟಿ ಪರಿಷ್ಕರಣೆ ಅಂಗವಾಗಿ ಜಿಲ್ಲೆಯಾದ್ಯಂತ ಬುಧವಾರದ ಅಂತ್ಯಕ್ಕೆ ಒಟ್ಟು 23,71,542 ಮತದಾರರ ಪೈಕಿ 18,36,716 ಗಣತಿ ನಮೂನೆಗಳನ್ನು ಡಿಜಿಟಲೀಕರಣ ಮಾಡಲಾಗಿದೆ ಎಂದು ಜಿಲ್ಲಾ ಚುನಾವಣಾಧಿಕಾರಿ ಇಕ್ರಂ ಶರೀಫ್ ತಿಳಿಸಿದ್ದಾರೆ.

ಬಿ.ಎಲ್.ಓ. ಗಳು ಮನೆ–ಮನೆ ಭೇಟಿ ಕೊಟ್ಟಾಗ ಇಲ್ಲಿಯವರೆಗೆ 33,690 ಜನ ಮತದಾರರು ಅನ್ ಲೈನ್ ಮೂಲಕ ಗಣತಿ ನಮೂನೆ ಸಲ್ಲಿಸಿರುವುದು ತಿಳಿದು ಬಂದಿದೆ. 71,719 ಜನ ಮತದಾರರು ನಿಧನ ಹೊಂದಿರುವ ಬಗ್ಗೆ, 50,043 ಮತದಾರರು ಮನೆಯಲ್ಲಿ ಇಲ್ಲದಿರುವ (ಗೈರು), 3,54,872 ಮತದಾರರು ಶಾಶ್ವತವಾಗಿ ಸ್ಥಳಾಂತರಗೊಂಡಿರುವುದು, ಇತರೆ 25,511 ಹಾಗೂ 32,681 ಮತದಾರರು ಈಗಾಗಲೆ ನೋಂದಣಿಯಾಗಿರುವ ಬಗ್ಗೆ ವರದಿಯಾಗಿದೆ ಎಂದು ಅವರು ತಿಳಿಸಿದ್ದಾರೆ.

## ಹಳೆಯ ವಿದ್ಯಾರ್ಥಿಗಳಿಂದ ಸರ್ಕಾರಿ ಶಾಲೆಗೆ ಟಿವಿ ಕೊಡುಗೆ: ಶ್ಲಾಘನೆ



**ಹಳಿಯಾಳ:** ಇವತ್ತಿನ ದಿನಮಾನಗಳಲ್ಲಿ ವಿದ್ಯಾರ್ಥಿಗಳು ಸಾಧನೆ ಮಾಡಿದ ವ್ಯಕ್ತಿಗಳನ್ನು ನೋಡಬೇಕಾದರೆ ಸರ್ಕಾರಿ ಶಾಲೆಗಳಲ್ಲಿ ಓದಿ ಉನ್ನತ ಹುದ್ದೆಯಲ್ಲಿ ಕಾರ್ಯ ನಿರ್ವಹಿಸುತ್ತಿರುವವರನ್ನು ನೋಡಬೇಕು. ನಾನು ಇಂದು ಅರಣ್ಯ ಇಲಾಖೆಯ ಅಧಿಕಾರಿಯಾಗಿ ಕಾರ್ಯನಿರ್ವಹಿಸುತ್ತಿರುವುದು ಸರ್ಕಾರಿ ಶಾಲೆಯ ವಿದ್ಯಾರ್ಥಿಯಾಗಿದ್ದ ಕಾರಣದಿಂದಲೇ. ಇಂತಹ ಕಾರ್ಯಕ್ರಮ ನನಗೆ ಸಂತಸ ತಂದಿದೆ" ಎಂದು ಉಪ ಅರಣ್ಯ ಸಂರಕ್ಷಣಾಧಿಕಾರಿ ಡಾ. ಪ್ರಶಾಂತ್ ಕುಮಾರ್ ಕೆ.ಸಿ ಅವರು ಹೇಳಿದರು.

ಹಳಿಯಾಳ ಪಟ್ಟಣದ ಶಿವಾಜಿ ವೃತ್ತದಲ್ಲಿರುವ ಪುರಸಭೆಯ ಪುರಭವನದಲ್ಲಿ ಶಾ.ಸ.ಸ.ಹಿರಿಯ ಪ್ರಾಥಮಿಕ ಮಾದರಿ ಶಾಲೆ ನಂ–1ರ,1975 ರಿಂದ 1982 ರ ವರೆಗೆ ವಿದ್ಯಾಭ್ಯಾಸ ಮಾಡಿದ ಒಂದೇ ವರ್ಗದ ವಿದ್ಯಾರ್ಥಿಗಳಿಂದ ಆಯೋಜಿಸಿದ್ದ ದೂರದರ್ಶನ ಟಿವಿ ಕೊಡುಗೆ ಕಾರ್ಯಕ್ರಮ ವನ್ನು ಅವರು ಉದ್ಘಾಟಿಸಿ ಮಾತನಾಡಿದರು.

ವಿದ್ಯಾರ್ಥಿಗಳು ಸಾಧನೆಯ ಶಿಖರವನ್ನು ತಲುಪಬೇಕಾದರೆ ಉತ್ತಮ ಸಂಸ್ಕಾರ ಮತ್ತು ಗುರಿಯನ್ನು ಇಟ್ಟುಕೊಳ್ಳಬೇಕು ಎಂಬ ಉದ್ದೇಶದಿಂದ ಈ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿತ್ತು. ಹಳೆಯ ವಿದ್ಯಾರ್ಥಿಗಳು ತಾವು ಓದಿದ ಶಾಲೆಗೆ ಟಿವಿ ಕೊಡುಗೆಯನ್ನು ನೀಡುವ ಮೂಲಕ ಮಾದರಿ ಕೆಲಸ ಮಾಡಿದ್ದಾರೆ ಎಂದು ಅವರು ಅಭಿನಂದಿಸಿದರು. ಕಾರ್ಯಕ್ರಮದಲ್ಲಿ ಹಳೆಯ ವಿದ್ಯಾರ್ಥಿಗಳನ್ನು ಸನ್ಮಾನಿಸಲಾಯಿತು ಮತ್ತು ಶಾಲೆಗೆ ದೂರದರ್ಶನಗಳನ್ನು ಹಸ್ತಾಂತರಿಸಲಾಯಿತು.

ಈ ಸಮಾರಂಭದಲ್ಲಿ ಕ್ಷೇತ್ರ ಶಿಕ್ಷಣಾಧಿಕಾರಿ ಪ್ರಮೋದ ಕೆ. ಮಹಾಲೆ,ಪ್ರಾಥಮಿಕ ಶಾಲಾ ಶಿಕ್ಷಕ ಸಂಘದ ಜಿಲ್ಲಾ ಅಧ್ಯಕ್ಷರಾದ ಸತೀಶ ನಾಯಕ ಭಾವಿಕೇರಿ, ಎಸ್‌ಡಿಎಂಸಿ ಅಧ್ಯಕ್ಷ ಸುರೇಶ ಕೋತಿಚಕರ,ಹಳಿಯಾಳ ಅರಣ್ಯ ವಿಭಾಗದ ಪತ್ರಾಂಕಿತ ವ್ಯವಸ್ಥಾಪಕರಾದ ರವಿ ಪಂಡಿತ್, ಶಿವು ದೇಸಾಯಿ,ಉಮೇಶ ಬೊಶೆಟ್ಟಿ,ಮುಖ್ಯಾಧ್ಯಾಪಕರಾದ ಸುನೀಲ ಗಾಂವಕರ,ಸೇರಿದಂತೆ ಶಾಲಾ ಸಿಬ್ಬಂದಿ ಹಾಗೂ 1975–1982 ಬ್ಯಾಚ್‌ನ ಹಳೆಯ ವಿದ್ಯಾರ್ಥಿಗಳು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿದ್ದರು.

## ನಿತ್ಯ ವಿಬಿಜಿ ರಾಮ್ ಜಿ ಪ್ರಗತಿ ಪರಿಶೀಲಿಸಲು ಸಿಇಓಗಳಿಗೆ ಈಶ್ವರ ಖಂಡ್ರೆ ಆದೇಶ



**ಬೆಂಗಳೂರು:** ಮನ್ರೇಗಾ ಬದಲಿಗೆ ಜಾರಿಯಾಗಿರುವ ವಿಬಿಜಿ ರಾಮ್ ಜಿಯಲ್ಲಿ ಉದ್ಯೋಗ ನೀಡದೆ, ಮಾನವ ದಿನ ಸೃಜನೆ ಮಾಡದೆ ನಿರ್ಲಕ್ಷ್ಯ ತೋರಿದ ಪಂಚಾಯತಿ ಅಭಿವೃದ್ಧಿ ಅಧಿಕಾರಿಗಳ ವಿರುದ್ಧ ಕಠಿಣ ಕ್ರಮ ಕೈಗೊಳ್ಳುವಂತೆ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವ ಈಶ್ವರ ಬಿ ಖಂಡ್ರೆ ಸೂಚನೆ ನೀಡಿದ್ದಾರೆ.

ವಿಕಾಸಸೌಧದಲ್ಲಿಂದು ಇಲಾಖೆಯ ಉನ್ನತಾಧಿಕಾರಿಗಳೊಂದಿಗೆ ಸಭೆ ನಡೆಸಿದ ಅವರು, 2025ರ ಜುಲೈ ತಿಂಗಳಲ್ಲಿ ಮನ್ರೇಗಾ ಅಡಿ ಉದ್ಯೋಗ ನೀಡಿ, ಮಾನವ ದಿನ ಸೃಜಿಸಿದ್ದ ಪಂಚಾಯ್ತಿಗಳಲ್ಲಿ ಈ ವರ್ಷ ಜುಲೈನಲ್ಲಿ ಒಬ್ಬರಿಗೂ ಉದ್ಯೋಗ ನೀಡದಿದ್ದರೆ ಅಂತಹವರಿಗೆ ನೋಟಿಸ್ ಜಾರಿ ಮಾಡಿ ಎಂದರು.

ಬೆಂಗಳೂರು ಸುತ್ತಮುತ್ತ 382 ರೂ. ಕೂಲಿಗೆ ಜನರು ಮುಂದೆ ಬರುವುದಿಲ್ಲ ಎನ್ನಬಹುದು, ಆದರೆ, ಗ್ರಾಮೀಣ ಪ್ರದೇಶದ ಪಂಚಾಯತಿಯ ಅಭಿವೃದ್ಧಿ ಅಧಿಕಾರಿ (ಪಿಡಿಓ) ಗ್ರಾಮೀಣ ಅರ್ಹ ಫಲಾನುಭವಿಗಳಿಗೆ ಕೆಲಸ ನೀಡದೆ ಕರ್ತವ್ಯಲೋಪ ಎಸಗಿದ್ದಲ್ಲಿ ಕಾರಣ ಕೇಳಿ ನೋಟಿಸ್ ನೀಡಿ, ಉತ್ತರ ಪಡೆದು, ಒಂದೊಮ್ಮೆ ನಿರ್ಲಕ್ಷ್ಯ, ಉದಾಸೀನತೆ ಸಾಬೀತಾದಲ್ಲಿ ಅಮಾನತು ಮಾಡುವಂತೆ ಕಾರ್ಯದರ್ಶಿ ಮತ್ತು ಆಯುಕ್ತರಿಗೆ ಸೂಚನೆ ನೀಡಿದರು.

**ಪ್ರತಿ ನಿತ್ಯ ವಿಸಿ ನಡೆಸಿ ಪ್ರಗತಿ ಪರಿಶೀಲಿಸಿ:** ವಿಬಿಜಿ ರಾಮ್ ಜಿಯಡಿ ಪ್ರತಿ ದಿನ 5 ಲಕ್ಷ ಮಾನವದಿನ ಸೃಜನೆ ಆಗುವವರೆಗೆ ಕಾರ್ಯದರ್ಶಿಗಳು, ಆಯುಕ್ತರು ಎಲ್ಲ ಜಿಲ್ಲಾ ಪಂಚಾಯತಿಗಳ ಸಿಇಓಗಳೊಂದಿಗೆ ನಿತ್ಯ ವರ್ಚುವಲ್ ಸಭೆ ನಡೆಸಿ ಪ್ರಗತಿ ಪರಿಶೀಲನೆ ಮಾಡಬೇಕು. ಅದೇ ರೀತಿ ಸಿಇಓಗಳು ಇ.ಓ, ಪಿಡಿಓಗಳೊಂದಿಗೆ ಸಭೆ ನಡೆಸಿ ಪ್ರಗತಿ ಪರಿಶೀಲಿಸಬೇಕು ಎಂದು ಸೂಚಿಸಿದರು. ಸಭೆಯಲ್ಲಿ ಇಲಾಖೆಯ ಕಾರ್ಯದರ್ಶಿಗಳಾದ ಸಮೀರ್ ಶುಕ್ಲ, ಡಿ.ರಂದೀಪ್, ಆಯುಕ್ತರಾದ ದಿವ್ಯಾ ಪ್ರಭು, ಫೌಜಿಯಾ ತರನ್ನುಂ ಮತ್ತಿತರರು ಪಾಲ್ಗೊಂಡಿದ್ದರು.

## ತಾಯಿಯ ಎದೆಹಾಲು ಅಮೃತ ಸಮಾನ



**ಬಾಗಲಕೋಟೆ:** ತಾಲೂಕಿನ ಬೇವೂರ ಗ್ರಾಮದ ಮಾದರಿ ಅಂಗನವಾಡಿ ಕೇಂದ್ರದಲ್ಲಿ ಗುರುವಾರ ವಿಶ್ವ ಸ್ತನ್ಯಪಾನ ಸಪ್ತಾಹ ಆಚರಿಸಲಾಯಿತು.

ಕಾರ್ಯಕ್ರಮ ಉದ್ಘಾಟಿಸಿದ ಅಂಗನವಾಡಿ ಮೇಲ್ವಿಚಾರಕಿ ಸವಿತಾ ಮಾಚಾ, ತಾಯಿಯ ಎದೆಹಾಲು ಮಗುವಿಗೆ ಅಮೃತ ಸಮಾನವಾಗಿದ್ದು, ಶಿಶುವಿಗೆ 6 ತಿಂಗಳ ಕಾಲ ತಾಯಿಯ ಎದೆಹಾಲು ನೀಡಬೇಕು ಎಂದು ಹೇಳಿದರು. ತಾಯಿಯ ಎದೆಹಾಲಿನಲ್ಲಿ ರೋಗ ನಿರೋಧಕ ಶಕ್ತಿಯಿದ್ದು, ಸ್ತನ್ಯಪಾನ ನವಜಾತ ಶಿಶುವನ್ನು ಸಾಂಕ್ರಾಮಿಕ ರೋಗಗಳಿಂದ ರಕ್ಷಿಸುತ್ತದೆ. ಮಗುವಿನ ಆರೋಗ್ಯಕರ ಬೆಳವಣಿಗೆಗೆ ಅಗತ್ಯವಿರುವ ಪೋಷಕಾಂಶಗಳು ಮತ್ತು ಖನಿಜಾಂಶಗಳು ತಾಯಿಯ ಎದೆಹಾಲಿನಲ್ಲಿರುತ್ತವೆ. ಇದನ್ನು ಪ್ರತಿಯೊಬ್ಬ ತಾಯಿ ಗಮನದಲ್ಲಿಟ್ಟುಕೊಂಡು ಶಿಶು ರಕ್ಷಣೆಗೆ ಮುಂದಾಗಬೇಕು ಎಂದು ಮಾಚಾ ಹೇಳಿದರು. ಪ್ರಾಥಮಿಕ ಆರೋಗ್ಯ ಕೇಂದ್ರದ ಪ್ರಾಥಮಿಕ ಸುರಕ್ಷತಾಧಿಕಾರಿ ಸಾವಿತ್ರಿ ಕಡ್ಲಿಮಟ್ಟಿ ಮಾತನಾಡಿ, ತಾಯಿಯ ಎದೆಹಾಲಿನಲ್ಲಿ ಶಿಶುವಿನ ಸದೃಢ ಬೆಳವಣಿಗೆಗೆ ಅಗತ್ಯ ವಿಟಮಿನ್ ದೊರೆಯುತ್ತದೆ. ಶಿಶುವಿನಲ್ಲಿ ರೋಗನಿರೋಧಕ ಶಕ್ತಿಯನ್ನು ಹೆಚ್ಚಿಸಿ ಅನಾರೋಗ್ಯಕ್ಕೆ ಒಳಗಾಗದಂತೆ ರಕ್ಷಿಸುತ್ತದೆ ಎಂದರು. ಆರೋಗ್ಯ ಸುರಕ್ಷತಾಧಿಕಾರಿಗಳಾದ ಸುಮಾ ಅಸಗಳ್ಳಿ, ಪುಷ್ಪಾವತಿ ಶೆಟ್ಟರ, ಗ್ರಾಮದ ಎಲ್ಲ ಅಂಗನವಾಡಿ ಕಾರ್ಯಕರ್ತರು, ಆರೋಗ್ಯ ಇಲಾಖೆಯ ಸಿಬ್ಬಂದಿ, ತಾಯಂದಿರು, ಮಕ್ಕಳು ಇದ್ದರು. ಅಂಗನವಾಡಿ ಕಾರ್ಯಕರ್ತೆ ಸರೋಜಾ ತುರಡಗಿ ನಿರೂಪಿಸಿ ವಂದಿಸಿದರು.

# ಶೀಘ್ರ ವರದಿ ಸಲ್ಲಿಕೆಗೆ ಸಚಿವ ಬಿ.ನಾಗೇಂದ್ರ ಅಧಿಕಾರಿಗಳಿಗೆ ಸೂಚನೆ

• ಮಲ್ಲಮ್ಮ ನುಡಿ ವಾರ್ತೆ ಬಳ್ಳಾರಿ

ಜಿಲ್ಲೆಯಾದ್ಯಂತ ಮಳೆ ಅಭಾವ ಮತ್ತು ಬೆಳೆ ಹಾನಿಯ ಕುರಿತು ತಕ್ಷಣವೇ ಸಮಗ್ರ ಜಂಟಿ ಸಮೀಕ್ಷೆ ನಡೆಸಿ ಶೀಘ್ರ ವರದಿ ಸಲ್ಲಿಸುವಂತೆ ಬಳ್ಳಾರಿ ಜಿಲ್ಲೆ ಬರ ಪರಿಸ್ಥಿತಿ ವೀಕ್ಷಣೆಗೆ ನಿಯೋಜಿಸಲಾಗಿರುವ ಸಚಿವರಾದ ಬಿ.ನಾಗೇಂದ್ರ ಅವರು ಕೃಷಿ ಮತ್ತು ಕಂದಾಯ ಇಲಾಖೆಯ ಅಧಿಕಾರಿಗಳಿಗೆ ಸೂಚಿಸಿದರು.

ಗುರುವಾರ, ಬಳ್ಳಾರಿ ತಾಲ್ಲೂಕಿನ ಹಲಕುಂದಿ, ಮಿಂಚೇರಿ ಗ್ರಾಮದಲ್ಲಿ ಬರಪರಿಸ್ಥಿತಿ ಹಿನ್ನಲೆಯಲ್ಲಿ ಬೆಳೆಹಾನಿ ಪರಿವೀಕ್ಷಣೆ ನಡೆಸಿ ಅವರು ಮಾತನಾಡಿದರು.

ಜಿಲ್ಲೆಯಲ್ಲಿ ಸಕಾಲಕ್ಕೆ ಮಳೆಯಾಗದೆ ಕೃಷಿ ವಲಯ ತೀವ್ರ ಸಂಕಷ್ಟಕ್ಕೆ ಸಿಲುಕಿದೆ. ಜಿಲ್ಲೆಯಲ್ಲಿ ರೈತರು ಬಿತ್ತನೆ ಕಾರ್ಯ ಮಾಡಿದ್ದರೂ, ಕಳೆದ ಎರಡು ತಿಂಗಳಿಂದ ಹನಿ ಮಳೆಯೂ ಬಾರದೆ ಬೆಳೆಗಳು ಜಮೀನಿನಲ್ಲೇ ಒಣಗಿ ನಶಿಸುತ್ತಿವೆ. ಕಂದಾಯ ಮತ್ತು ಕೃಷಿ ಇಲಾಖೆಗಳ ಅಧಿಕಾರಿಗಳು ಜಂಟಿಯಾಗಿ ಪ್ರತಿಯೊಂದು ತಾಲೂಕಿನ ಬೆಳೆ ಹಾನಿ ಪ್ರದೇಶಗಳಿಗೆ ಭೇಟಿ ನೀಡಿ, ನೈಜ ಪರಿಸ್ಥಿತಿಯ ಆಧಾರದ ಮೇಲೆ ನಿಖರ ವರದಿ ಸಿದ್ಧಪಡಿಸಬೇಕು ಎಂದು ನಿರ್ದೇಶನ ನೀಡಿದರು.

ತೊಗರಿ, ಹತ್ತಿ, ಮೆಕ್ಕೆಜೋಳ ಹಾಗೂ ಸಜ್ಜೆ ಸೇರಿದಂತೆ ಪ್ರಮುಖ ಬೆಳೆಗಳು ನೀರಿನ ಅಭಾವದಿಂದ ಬಾಡಿಹೋಗುತ್ತಿದ್ದು, ರೈತರಿಗೆ ಭಾರಿ ನಷ್ಟ ಉಂಟಾಗುವ ಭೀತಿ ಎದುರಾಗಿದೆ. ಅಧಿಕಾರಿಗಳು ನೀಡುವ ಸಮೀಕ್ಷಾ ವರದಿಯ ಆಧಾರದ ಮೇಲೆ ಬರಪೀಡಿತ ಪ್ರದೇಶಗಳ ಘೋಷಣೆ ಹಾಗೂ ರೈತರಿಗೆ ಪರಿಹಾರ ಒದಗಿಸುವ ಕುರಿತು ಮುಖ್ಯಮಂತ್ರಿಗಳ ಜೊತೆ ಚರ್ಚಿಸಿ ಸೂಕ್ತ ಕ್ರಮ ಕೈಗೊಳ್ಳಲಾಗುವುದು ಎಂದು ಸಚಿವರು ಭರವಸೆ ನೀಡಿದರು.



**ಮಳೆ ಬಂದರೂ ಶೇ. 50ರಷ್ಟು ಇಳುವರಿಯೂ ಸಿಗಲಾರದು:** ಬಿತ್ತನೆಯಾಗಿ 50ರಿಂದ 60 ದಿನಗಳು ಕಳೆದಿವೆ. ಬೆಳೆ ಬೆಳವಣಿಗೆಯ ಹಂತದಲ್ಲೇ ಮಳೆ ಇಲ್ಲದೆ ಗಿಡಗಳ ಬೆಳವಣಿಗೆ ಸಂಪೂರ್ಣ ಕುಂಠಿತಗೊಂಡಿದೆ ಇನ್ನು ಮುಂದಿನ 10 ದಿನಗಳಲ್ಲಿ ಮಳೆ ಬಂದರೂ ಸಹ ಶೇ. 50ರಷ್ಟು ಕೂಡ ಇಳುವರಿ ಪಡೆಯಲು ಸಾಧ್ಯವಿಲ್ಲ, ಬೆಳೆಗಳು ಈಗಾಗಲೇ ಹಾನಿಗೊಳಗಾಗಿವೆ ಎಂದು ಕೃಷಿ ಅಧಿಕಾರಿಗಳು ಸ್ಪಷ್ಟಪಡಿಸಿದ್ದಾರೆ ಎಂದು ಜಿಲ್ಲಾಧಿಕಾರಿ ನಾಗೇಂದ್ರ ಪ್ರಸಾದ್.ಕೆ ಅವರು ಸಚಿವರಿಗೆ ಮನವರಿಕೆ ಮಾಡಿಕೊಟ್ಟರು.

**ಶನಿವಾರದೊಳಗೆ ವರದಿ ಸಲ್ಲಿಕೆಗೆ ಸೂಚನೆ:** ಸರ್ಕಾರದ ನಿಗದಿತ ಮಾನದಂಡಗಳ ಆಧಾರದ ಮೇಲೆ ಕಂದಾಯ ಸಚಿವರೊಂದಿಗೆ ಚರ್ಚಿಸಿ, ಮುಂದಿನ ಸೂಕ್ತ ಕ್ರಮ ಹಾಗೂ ಪರಿಹಾರ ಘೋಷಣೆ ಕುರಿತು ತೀರ್ಮಾನ ಕೈಗೊಳ್ಳಲಾಗುವುದು. ಹಾಗಾಗಿ ಜಿಲ್ಲೆಯ ತಾಲ್ಲೂಕುವಾರು ಬೆಳೆ ಹಾನಿ ಹಾಗೂ ಕೃಷಿ ಸ್ಥಿತಿಗತಿಯ ಸಮಗ್ರ ವರದಿಯನ್ನು ಶನಿವಾರದೊಳಗೆ ಸಿದ್ಧಪಡಿಸಿ ಸಲ್ಲಿಸುವಂತೆ ಸಚಿವ ಬಿ. ನಾಗೇಂದ್ರ ಅವರು ಕೃಷಿ ಮತ್ತು ಕಂದಾಯ ಇಲಾಖೆಯ ಅಧಿಕಾರಿಗಳಿಗೆ ನಿರ್ದೇಶನ ನೀಡಿದರು.

**ಬಳ್ಳಾರಿ ಜಿಲ್ಲೆಯ ಅಭಿವೃದ್ಧಿಗೆ ಕಟಿಬದ್ಧ:** ಸಂಪುಟ ವಿಸ್ತರಣೆಯ ನಂತರ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರ ನಿರ್ದೇಶನದಂತೆ, ರಾಜ್ಯದಾದ್ಯಂತ ಅತಿಯಾದ ಮಳೆ ಅಥವಾ ಮಳೆ ಅಭಾವದಿಂದ ತೊಂದರೆಗೊಳಗಾದ ರೈತರ ನೆರವಿಗೆ ಧಾವಿಸುವುದು ಸರ್ಕಾರದ ಪ್ರಮುಖ ಕರ್ತವ್ಯವಾಗಿದೆ ಎಂದು ಸಚಿವ ಬಿ.ನಾಗೇಂದ್ರ ಮಾಧ್ಯಮದವರ ಪ್ರಶ್ನೆಗೆ ಉತ್ತರಿಸಿದರು.

ಮಳೆಯ ಅಭಾವದಿಂದಾಗಿ ಎಕರೆಗೆ ಸಾವಿರಾರು ರೂಪಾಯಿ ವೆಚ್ಚ ಮಾಡಿ ತೊಗರಿ, ಹತ್ತಿ, ಸೂರ್ಯಕಾಂತಿ ಮತ್ತು ಜೋಳ ಬೆಳೆದ ಸಣ್ಣ ಹಾಗೂ ಬಡ ರೈತರಿಗೆ ಭಾರಿ ನಷ್ಟ ಉಂಟಾಗಿದೆ. ಜಿಲ್ಲಾಧಿಕಾರಿಗಳು, ಜಂಟಿ ಕೃಷಿ ನಿರ್ದೇಶಕರು ಹಾಗೂ ಜಿಲ್ಲಾ ಪಂಚಾಯತ್ ಸಿಇಒ ಸೇರಿದಂತೆ ಎಲ್ಲಾ ಅಧಿಕಾರಿಗಳು ಈಗಾಗಲೇ ಬೆಳೆ ನಷ್ಟದ ಸರ್ವೇ ಕಾರ್ಯದಲ್ಲಿ ತೊಡಗಿದ್ದು, ರೈತರ ಬೆನ್ನಲುಬಾಗಿ ನಿಲ್ಲಲು ಸರ್ಕಾರ ಬದ್ಧವಾಗಿದೆ ಎಂದರು.

**ತುಂಗಭದ್ರಾ ಜಲಾಶಯ ಹಾಗೂ ನೀರಿನ ಸ್ಥಿತಿಗತಿ:** ಬಳ್ಳಾರಿ ಜಿಲ್ಲೆಯ ಕೃಷಿ ಹಾಗೂ ಕುಡಿಯುವ ನೀರಿನ ಪ್ರಮುಖ ಆಸರೆಯಾಗಿರುವ ತುಂಗಭದ್ರಾ ಜಲಾಶಯದಲ್ಲಿ 65 ರಿಂದ 70 ಟಿಎಂಸಿ ನೀರು ತಲುಪುವ ನಿರೀಕ್ಷೆಯಿದೆ. ಜಲಾಶಯದಲ್ಲಿ ಕನಿಷ್ಠ 80 ಟಿಎಂಸಿ ನೀರು ಶೇಖರಣೆ–ಯಾದ ನಂತರವೇ ಸಲಹಾ ಸಮಿತಿಯ ಸಭೆ ನಡೆಸಿ, ಕುಡಿಯುವ ನೀರು ಹಾಗೂ ಕೃಷಿ ಕಾಲುವೆಗಳಿಗೆ ನೀರು ಹರಿಸುವ ಬಗ್ಗೆ ತೀರ್ಮಾನ ಕೈಗೊಳ್ಳಲಾಗುತ್ತದೆ. ಮುಂದಿನ 10 ದಿನಗಳಲ್ಲಿ ಮಲೆನಾಡು ಮತ್ತು ಪಶ್ಚಿಮ ಘಟ್ಟಪ್ರದೇಶಗಳಲ್ಲಿ ಉತ್ತಮ ಮಳೆಯಾಗುವ ಮುನ್ಸೂಚನೆ ಇದ್ದು, ಜಲಾಶಯ ಭರ್ತಿಯಾಗುವ ಭರವಸೆಯಿದೆ ಎಂದು ತಿಳಿಸಿದರು.

ಜಿಲ್ಲೆಯನ್ನು ಬರ ಪೀಡಿತ ಪ್ರದೇಶವೆಂದು ಘೋಷಣೆ ಮಾಡುವಂತೆ ರೈತರಿಂದ ಕೇಳಿಬರುತ್ತಿರುವ ಆಗ್ರಹಕ್ಕೆ ಸ್ಪಂದಿಸಿದ ಸಚಿವರು, ಬರ ಘೋಷಣೆ ಮಾಡಲು ಮಳೆಯ ಪ್ರಮಾಣದ ಕುರಿತು ಕೆಲವು ನಿರ್ದಿಷ್ಟ ಮಾನದಂಡಗಳಿವೆ. ಮುಂದಿನ 10 ದಿನಗಳ ಪರಿಸ್ಥಿತಿಯನ್ನು ವೀಕ್ಷಿಸಿ, ಮಾನದಂಡಗಳಿಗೆ ಒಳಪಟ್ಟರೆ ಬಳ್ಳಾರಿ ಜಿಲ್ಲೆಯನ್ನು ಬರ ಪೀಡಿತ ಎಂದು ಘೋಷಿಸಲು ಸರ್ಕಾರ ಸೂಕ್ತ ತೀರ್ಮಾನ ಕೈಗೊಳ್ಳಲಿದೆ ಎಂದರು.

# ರೈತರಿಗೆ ಪರ್ಯಾಯ ಬೆಳೆಗಳ ಮಾಹಿತಿ ನೀಡಲು ಸಚಿವರ ಸೂಚನೆ

• ಮಲ್ಲಮ್ಮ ನುಡಿ ವಾರ್ತೆ ಬಾಗಲಕೋಟೆ

ಜಿಲ್ಲೆಯಲ್ಲಿ ಬರ ಪರಿಸ್ಥಿತಿಯ ಅಧ್ಯಯನ ಮುಂದುವರಿಸಿದ ಸಚಿವ ವಿಜಯಾನಂದ ಕಾಶಪ್ಪನವರ ಗುರುವಾರ ಬಾಗಲಕೋಟೆ ತಾಲೂಕಿನ ಚಿಟಗಿನಕೊಪ್ಪ ಗ್ರಾಮಕ್ಕೆ ಭೇಟಿ ನೀಡಿ ಹಾನಿಗೊಳಗಾದ ವಿವಿಧ ಬೆಳೆಗಳನ್ನು ಪರಿಶೀಲಿಸಿದರು.

ಗ್ರಾಮದ ರೈತ ಶೇಖರಪ್ಪ ಹಾವರಗಿ ಅವರ 9.28 ಎಕರೆ ಜಮೀನಿನಲ್ಲಿ ಬೆಳೆಯಲಾದ ತೊಗರಿ ಬೆಳೆ ಹಾಗೂ ರುಕ್ಮಿನಿಬಾಯಿ ನಾಯಕ ಅವರ ಜಮೀನಿನಲ್ಲಿ ಬೆಳೆಯಲಾದ ಉಳ್ಳಾಗಡ್ಡಿ ಮತ್ತು ಸೂರ್ಯಕಾಂತಿ ಬೆಳೆ ಹಾನಿಯನ್ನು ಸಚಿವರು ಪರಿವೀಕ್ಷಣೆ ನಡೆಸಿ, ರೈತರಿಂದ ಮಾಹಿತಿ ಪಡೆದು–ಕೊಂಡರು.

ನಂತರ ಮುಧೋಳ ತಾಲೂಕಿನ ಜಾಡರ ಅರಳಿಕಟ್ಟಿ ಗ್ರಾಮದ ಪತ್ರಪ್ಪ ಹೊಸಕೋಟೆ ಅವರ ಜಮೀನಿನಲ್ಲಿ ಬೆಳೆದ ಹೆಸರು ಬೆಳೆ, ಮಲ್ಲಾಪೂರ ಗ್ರಾಮದ ರೈತ ಮೌಲಾಸಾಬ ಮುಲ್ಲಾ ಅವರ ಜಮೀನಿನಲ್ಲಿ ಬೆಳೆದ ಈರುಳ್ಳಿ ಬೆಳೆ ವೀಕ್ಷಣೆ ಮಾಡಿದರು. ಈ ವೇಳೆ ಅಧಿಕಾರಿಗಳಿಂದ ಬೆಳೆ ಹಾನಿಯ ಕುರಿತು ಮಾಹಿತಿ ಪಡೆದ ಸಚಿವರು, ಮಳೆಯ ಅಭಾವ ಉಂಟಾದ ಸಂದರ್ಭದಲ್ಲಿ ರೈತರಿಗೆ ಪರ್ಯಾಯ ಬೆಳೆಗಳ ಆಯ್ಕೆ, ಬಿತ್ತನೆ ಸಮಯ ಹಾಗೂ ಬೆಳೆ ವಿಮೆ ಯೋಜನೆಗಳ ಕುರಿತು ಕೃಷಿ ಇಲಾಖೆಯ ಅಧಿಕಾರಿಗಳು ಗ್ರಾಮ ಮಟ್ಟದಲ್ಲೇ ಸಮರ್ಪಕವಾಗಿ ಮಾಹಿತಿ ನೀಡಬೇಕು ಎಂದು ಸೂಚಿಸಿದರು.



ತಡವಾಗಿ ತೊಗರಿ ಬಿತ್ತನೆ ಮಾಡುವ ಮುನ್ನ ರೈತರು ಕೃಷಿ ಇಲಾಖೆಯ ಅಧಿಕಾರಿಗಳನ್ನು ಸಂಪರ್ಕಿಸಿ ಅಗತ್ಯ ಸಲಹೆ ಪಡೆಯಬೇಕು. ಈಗ ತಡವಾಗಿ ಬಿತ್ತನೆ ಮಾಡಿರುವ ತೊಗರಿ ಬೆಳೆಯನ್ನು ಬೆಳೆ ವಿಮೆ ಒಳಪಡಿಸಲು ಅವಕಾಶ ಇಲ್ಲದಂತಾಗಿದೆ. ಇಂತಹ ಪರಿಸ್ಥಿತಿ ಮರುಕಳಿಸದಂತೆ ಸ್ಥಳೀಯ ಅಧಿಕಾರಿಗಳು ರೈತರಿಗೆ ಸಮಯೋಚಿತ ಮಾಹಿತಿ ನೀಡಿ, ಜಾಗೃತಿ ಮೂಡಿಸುವ ಕೆಲಸ ಮಾಡಬೇಕು ಎಂದು ಕಾಶಪ್ಪನವರ ತಿಳಿಸಿದರು.

ಈ ಸಂದರ್ಭದಲ್ಲಿ ಜಂಟಿ ಕೃಷಿ ನಿರ್ದೇಶಕ ಟಿ.ಎಸ್. ರುದ್ರೇಶಪ್ಪ, ತೋಟಗಾರಿಕೆ ಜಂಟಿ ನಿರ್ದೇಶಕ ರವೀಂದ್ರ ಹಕಾಟಿ ಹಾನಿಗೊಳಗಾದ ಬೆಳೆಗಳ ವಿವರವನ್ನು ಸಚಿವರಿಗೆ ನೀಡಿದರು. ಬಾಗಲಕೋಟೆ ಶಾಸಕ ಉಮೇಶ ಮೇಟಿ, ಉಪವಿಭಾಗಾಧಿಕಾರಿ ಮಹೇಶಕುಮಾರ ಮಾಲಗಿತ್ತಿ, ಕೃಷಿ ಇಲಾಖೆಯ ಉಪನಿರ್ದೇಶಕ ಶಿವಾನಂದ ಅಗಸನಾಳ, ಉಪತಹಶೀಲ್ದಾರ ನೀಲೇಶ ಕರಡಿ, ಕಂದಾಯ ನಿರೀಕ್ಷಕ ಅಳವಂಡಿ, ಗ್ರಾಮ ಲೆಕ್ಕಾಧಿಕಾರಿ ಕೆ.ಆರ್.ಯಲ್ಲಪ್ಪ ಸೇರಿದಂತೆ ವಿವಿಧ ಇಲಾಖೆಗಳ ಅಧಿಕಾರಿಗಳು ಉಪಸ್ಥಿತರಿದ್ದರು.

# ಬರ ಘೋಷಣೆ ಮಾಡಲು ರವಿಕುಮಾರ ಒತ್ತಾಯ..!

• ಮಲ್ಲಮ್ಮ ನುಡಿ ವಾರ್ತೆ ಬಾಗಲಕೋಟೆ

ರಾಜ್ಯದಲ್ಲಿ ಮಳೆಯಿಲ್ಲದ ಕಾರಣ ರೈತರು ಸಂಕಷ್ಟಕ್ಕೀಡಾಗಿದ್ದು ತಕ್ಷಣ 'ಬರಗಾಲ' ಎಂದು ಘೋಷಿಸಿ ಪರಿಹಾರ ಕ್ರಮ ಕೈಗೊಳ್ಳಬೇಕು ಎಂದು ಬಿಜೆಪಿ ಮುಖ್ಯ ಸಚೇತಕ ಎನ್.ರವಿಕುಮಾರ್ ಸರ್ಕಾರವನ್ನು ಒತ್ತಾಯಿಸಿದ್ದಾರೆ.

ನಗರದಲ್ಲಿ ಗುರುವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಮಳೆ ಇಲ್ಲದೇ ಬಿತ್ತನೆ ಆಗಿಲ್ಲ. ಕೆಲವು ಕಡೆಗಳಲ್ಲಿ ಬಿತ್ತನೆಯಾಗಿದ್ದರೂ ತೇವಾಂಶದ ಕೊರತೆಯಿಂದ ಬೆಳೆಗಳು ಹಾನಿಯಾಗಿದ್ದು ಸರ್ಕಾರ ಕೂಡಲೇ ಎಚ್ಚೆತ್ತು ರೈತರ ರಕ್ಷಣೆಗೆ ಮುಂದಾಗಬೇಕು ಎಂದರು.

ಕರಾವಳಿ ಭಾಗ ಬಿಟ್ಟು ಇಡೀ ರಾಜ್ಯದಲ್ಲಿ ಮಳೆಯ ಕೊರತೆಯಾಗಿದೆ. ಈ ಹಿನ್ನೆಲೆಯಲ್ಲಿ ಸರಕಾರ ಬರಗಾಲ ಘೋಷಣೆ ಮಾಡಿ ರೈತರಿಗೆ ಎಕರೆಗೆ 50 ಸಾವಿರ ರೂ.ಪರಿಹಾರ ಪ್ರಕಟಿಸಿ, ತಕ್ಷಣವೇ 25 ಸಾವಿರ ರೂ. ಬಿಡುಗಡೆ ಮಾಡಬೇಕು ಎಂದು ಅವರು ಆಗ್ರಹಿಸಿದರು.



ಅನೇಕ ಕಡೆಗಳಲ್ಲಿ ಕುಡಿಯುವ ನೀರಿಗೆ ತೊಂದರೆಯಾಗಿದೆ. ಜಾನುವಾರುಗಳಿಗೆ ಮೇವಿನ ಕೊರತೆಯುಂಟಾಗಿದ್ದು, ಮೇವು ಬ್ಯಾಂಕ ಸ್ಥಾಪನೆ ಮಾಡಬೇಕು ಎಂದ ರವಿಕುಮಾರ, ಕಾಂಗ್ರೆಸ್ ಸರಕಾರ ಇದನ್ನು ಗಮನಿಸದೇ ಬರೀ ಅಧಿಕಾರಕ್ಕೆ ಎಲ್ಲ ಶಾಸಕರು ಬೆಂಗಳೂರು, ದೆಹಲಿ ಯಾತ್ರೆ ನಡೆಸಿದ್ದಾರೆ ಎಂದರು.

ಬಿಜೆಪಿ ರಾಜ್ಯದಲ್ಲಿ ಉಂಟಾಗಿರುವ ಬರಸ್ಥಿತಿಯನ್ನು ಅಧ್ಯಯನ ಮಾಡಲು ಆರು ತಂಡಗಳನ್ನು ರಚನೆ ಮಾಡಿದ್ದು ರಾಜ್ಯಾದ್ಯಂತ ಪ್ರವಾಸ ಮಾಡಿ, ಸರ್ಕಾರ–ಕ್ಕೆ ವರದಿಯನ್ನು ನೀಡಲಾಗುತ್ತದೆ. ಇಷ್ಟಾಗಿಯೂ ಸರ್ಕಾರ ಎಚ್ಚೆತ್ತುಕೊಳ್ಳದೆಯಿದ್ದಲ್ಲಿ ಮುಂಬರುವ ದಿನಗಳಲ್ಲಿ ಅಧಿವೇಶನ ನಡೆಸಲು ಬಿಡುವುದಿಲ್ಲ ಎಂದು ಅವರು ಹೇಳಿದರು.

ಮಾಜಿ ಸಚಿವ ಆರ್.ಬಿ.ತಿಮ್ಮಾಪೂರ ಹಾಗೂ ಕಾಂಗ್ರೆಸ್ ಜಿಲ್ಲಾಧ್ಯಕ್ಷ ಎಸ್.ಜಿ.ನಂಜಯ್ಯನಮಠ ಅವರ ಆಡಿಯೋ ವೈರಲ್ ವಿಚಾರದ ಕುರಿತು ಮಾತನಾಡಿದ ಎನ್.ರವಿಕುಮಾರ್, ಕಾಂಗ್ರೆಸ್ ಪಕ್ಷದವರೇ ದುಡ್ಡು ಕೊಟ್ಟು ಸಚಿವರಾಗಿದ್ದಾರೆ ಎಂದು ಹೇಳುತ್ತಿದ್ದಾರೆ. ಈ ಬಗ್ಗೆ ರಾಜ್ಯಪಾಲರು ವಿಷಯದ ಕುರಿತು ಸಿಬಿಐ ಇಲ್ಲವೇ ನ್ಯಾಯಾಂಗ ತನಿಖೆಗೆ ಆದೇಶಿಸಬೇಕು ಎಂದರು.

ಸುದ್ದಿಗೋಷ್ಠಿಯಲ್ಲಿ ಶಾಸಕರಾದ ಸಿದ್ದು ಸವದಿ, ಪಿ.ಎಚ್.ಪೂಜಾರ, ಹಣಮಂತ ನಿರಾಣಿ, ದುರ್ಯೋಧನ ಐಹೊಳೆ, ಮಾಜಿ ಶಾಸಕರಾದ ಎ.ಎಸ್.ಪಾಟೀಲ ನಡಹಳ್ಳಿ, ದೊಡ್ಡನಗೌಡ ಪಾಟೀಲ, ಬಿಜೆಪಿ ಜಿಲ್ಲಾಧ್ಯಕ್ಷ ಶಾಂತಗೌಡ ಪಾಟೀಲ, ಬಸವರಾಜ ಯಂಕಂಚಿ, ಮಲ್ಲಯ್ಯ ಮೂಗನೂರಮಠ, ಸತ್ಯನಾರಾಯಣ ಹೇಮಾದ್ರಿ ಮತ್ತಿತರರು ಇದ್ದರು.

# ಜಿಲ್ಲೆಯಲ್ಲಿನ ಬರ ಪರಿಸ್ಥಿತಿಯನ್ನು ಅವಲೋಕಿಸಿದ ಸಚಿವರು

• ಮಲ್ಲಮ್ಮ ನುಡಿ ವಾರ್ತೆ ಕೊಪ್ಪಳ

ಕರ್ನಾಟಕ ಸರ್ಕಾರದ ಸಂಪುಟ ದರ್ಜೆ ಸಚಿವರಾಗಿ ತವರು ಜಿಲ್ಲೆಗೆ ಆಗಮಿಸಿರುವ ಸಚಿವರಾದ ಶಿವರಾಜ ಎಸ್. ತಂಗಡಗಿ ಹಾಗೂ ಬಸವರಾಜ ರಾಯರೆಡ್ಡಿ ಅವರು ಆಗಸ್ಟ್ 6ರಂದು ವಿವಿಧೆಡೆ ಸಂಚರಿಸಿ ಜಂಟಿಯಾಗಿ ಬರ ಪರಿಸ್ಥಿತಿಯನ್ನು ಅವಲೋಕಿಸಿದರು.

ಮಾಜಿ ಸಂಸದರಾದ ಸಂಗಣ್ಣ ಕರಡಿ, ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿ ಕೆ ಪಿ ಮೋಹನರಾಜ್, ಜಿಲ್ಲಾಧಿಕಾರಿಗಳಾದ ಡಾ.ಸುರೇಶ ಇಟ್ನಾಳ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಡಾ.ರಾಮ್ ಎಲ್ ಅರಸಿದ್ದಿ, ಜಿಪಂ ಮುಖ್ಯ ಕಾರ್ಯನಿರ್ವಹಣಾಧಿಕಾರಿ ವರ್ಣಿತ್ ನೇಗಿ ಅವರ ಸಮ್ಮುಖದಲ್ಲಿ ಹಾಗೂ ಕೃಷಿ, ತೋಟಗಾರಿಕಾ, ಪಶುಪಾಲನೆ, ಮೀನುಗಾರಿಕೆ ಇಲಾಖೆಗಳ ಅಧಿಕಾರಿಗಳ ತಂಡದೊಂದಿಗೆ ಕುಷ್ಟಗಿ, ಕುಕನೂರ, ಯಲಬುರ್ಗಾ ಮತ್ತು ಕೊಪ್ಪಳ ತಾಲೂಕುಗಳಲ್ಲಿ ಬಿರುಸಿನ ಸಂಚಾರ ನಡೆಸಿದ ಸಚಿವರು ಬೆಳೆಹಾನಿಗೀಡಾದ ಜಮೀನಿಗೆ ತೆರಳಿ ಬೆಳೆಹಾನಿಯನ್ನು ಖುದ್ದು ವೀಕ್ಷಿಸಿದರು.

**ಕುಷ್ಟಗಿ ತಾಲೂಕಿನಲ್ಲಿ ಪರಿಶೀಲನೆ:** ಆಗಸ್ಟ್ 5ರಂದು ಬೆಳಗ್ಗೆಯಿಂದ ಸಂಜೆವರೆಗೆ ಗಂಗಾವತಿ, ಕಾರಟಗಿ ಮತ್ತು ಕನಕಗಿರಿ ತಾಲೂಕುಗಳಲ್ಲಿ ಸಂಚರಿಸಿ ಬೆಳೆ ಹಾನಿ ವೀಕ್ಷಣೆ ನಡೆಸಿದ ಸಚಿವರಾದ ಶಿವರಾಜ ತಂಗಡಗಿ ಅವರು ಆಗಸ್ಟ್ 6ರ ಬೆಳಗ್ಗೆ ಪೂರ್ವ ನಿಗದಿಯಂತೆ ಕುಷ್ಟಗಿ ತಾಲೂಕಿನ ನವಲಹಳ್ಳಿಗೆ ಭೇಟಿ ನೀಡಿ ಮೆಕ್ಕೆಜೋಳ, ತೊಗರಿ, ಸಜ್ಜೆ ಬೆಳೆ ಹಾನಿಯ ವೀಕ್ಷಣೆ ನಡೆಸಿದರು.

**ಯಲಬುರ್ಗಾ, ಕುಕನೂರ ತಾಲೂಕುಗಳಲ್ಲಿ ಪರಿಶೀಲನೆ:** ಕುಕನೂರ ತಾಲೂಕಿನ ಸಂಗನಹಾಳ ಗ್ರಾಮದ ರೈತ ಸೋಮಶೇಖರಯ್ಯ ಗಣಾಚಾರಿ ಅವರು (ಸರ್ವೆ ನಂ 47/3) ತಮ್ಮ 2 ಎಕರೆ 8 ಗುಂಟೆನಲ್ಲಿ ಬೆಳೆದ ಹೆಸರು ಬೆಳೆ ಹಾಗೂ ರೈತ ಸಂಗಪ್ಪ ಶಿವರೆಡ್ಡಿ ಅವರು (ಸರ್ವೆ ನಂ.48/2) ತಮ್ಮ 2 ಎಕರೆನಲ್ಲಿ ಬೆಳೆದ ಸೂರ್ಯಕಾಂತಿ ಬೆಳೆ, ರಾಜೂರ ಗ್ರಾಮದಲ್ಲಿನ ಸರ್ವೆ ನಂ.49/1ರಲ್ಲಿನ ಮೂರು ಎಕರೆ 6 ಗುಂಟೆ ವಿಸ್ತೀರ್ಣದಲ್ಲಿ ಸಫಿಯಾಬೇಗಂ ನದಾಫ ಅವರು ಬಿತ್ತಿದ ಹೆಸರು ಬೆಳೆಗಳು ಮಳೆಯಿಲ್ಲದೇ ಹಾಳಾಗಿರುವುದನ್ನು ಸಚಿವರು ಜಂಟಿಯಾಗಿ ವೀಕ್ಷಣೆ ನಡೆಸಿದರು.



ಯಲಬುರ್ಗಾ, ಕುಕನೂರ ತಾಲೂಕುಗಳ ಪ್ರವೇಶಿಸಿದ ವೇಳೆ ಸಚಿವರು ರಾಜೂರ ಗ್ರಾಮದಲ್ಲಿ ರೈತರೊಂದಿಗೆ ಸಮಾಲೋಚನಾ ಸಭೆ ನಡೆಸಿದರು.

**ರೈತರಿಗೆ ನ್ಯಾಯಯುತ ಪರಿಹಾರ:** ಕುಕನೂರ ತಾಲೂಕಿನ ರಾಜೂರ ಗ್ರಾಮದಲ್ಲಿ ನಡೆದ ಕಾರ್ಯಕ್ರಮದಲ್ಲಿ ಸಚಿವರಾದ ಬಸವರಾಜ ರಾಯರಡ್ಡಿ ಅವರು ಮಾತನಾಡಿ, ಮಳೆಯಾಗದೇ ಬರ ಬೀಳುವುದು ಈ ಭಾಗದಲ್ಲಿ ಹೊಸತಲ್ಲ. ವಾಡಿಕೆಯ ಮಳೆಯು

ರಾಜ್ಯದಲ್ಲಿ ಶೆ.32ರಷ್ಟು ಹಾಗೂ ಕೊಪ್ಪಳ ಜಿಲ್ಲೆಯಲ್ಲಿ 40ರಷ್ಟು ಕೊರತೆಯಾಗಿದೆ. 100 ಎಕರೆ ಬದಲು ಕೇವಲ 66 ಎಕರೆ ಪ್ರದೇಶದಲ್ಲಿ ಮಾತ್ರ ಬಿತ್ತನೆಯಾದ ಪರಿಸ್ಥಿತಿ ಎಲ್ಲೆಡೆ ಕಾಣುತ್ತಿದೆ. ಯಲಬುರ್ಗಾ ಮತ್ತು ಕುಕನೂರ ಭಾಗದಲ್ಲಿ ಬಿತ್ತನೆ ಪ್ರಮಾಣ ಕಡಿಮೆಯಾಗಿದೆ. ಈ ಬಗ್ಗೆ ನಾವು ಖುದ್ದು ಪರಿಶೀಲಿಸುತ್ತಿದ್ದೇವೆ. ರೈತರಿಗೆ ನ್ಯಾಯಯುತವಾದ ಪರಿಹಾರ ಕಲ್ಪಿಸುತ್ತೇವೆ.

ರೈತರು ಚಿಂತೆಗೀಡಾಗಬಾರದು. ಸರ್ಕಾರ ರೈತರಿಗೆ ಸ್ಪಂದನೆ ನೀಡಲಿದೆ ಎಂದು ತಿಳಿಸಿದರು.

**ಕ್ಯಾಬಿನೆಟದಲ್ಲಿ ಚರ್ಚೆ ಮಾಡುತ್ತೇವೆ:** ಸಚಿವರಾದ ಶಿವರಾಜ ತಂಗಡಗಿ ಅವರು ಮಾತನಾಡಿ, ತೊಗರಿ, ಹೆಸರು, ಸಜ್ಜೆ ಸೇರಿದಂತೆ ನಾನಾ ಬೆಳೆಗಳು ಹಾಳಾಗಿರುವುದನ್ನು ನಾವು ಖುದ್ದು ನೋಡಿದ್ದೇವೆ. ಈ ಬಗ್ಗೆ ಜಿಲ್ಲೆಯಿಂದ ವರದಿ ಕಳಿಸುತ್ತೇವೆ. ಕ್ಯಾಬಿನೆಟನಲ್ಲಿ ಈ ಬಗ್ಗೆ ಚರ್ಚೆ ಮಾಡುತ್ತೇವೆ. ವಾಸ್ತವ ಪರಿಸ್ಥಿತಿ ಅರಿತು ಬರ ಘೋಷಣೆಯ ಬಗ್ಗೆ ಕ್ರಮ ವಹಿಸುತ್ತೇವೆ. ಬಡವರ ಬಗ್ಗೆ ನಮಗೆ ಕಾಳಜಿ ಇದೆ. ಬಡವರಿಗಾಗಿ ಈಗಾಗಲೇ ಹತ್ತಾರು ಯೋಜನೆಗಳನ್ನು ಜಾರಿ ಮಾಡಿದ್ದೇವೆ ಎಂದರು.

**ಜಿಲ್ಲೆಯಲ್ಲಿ 40ರಷ್ಟು ಮಳೆಕೊರತೆ:** ಪ್ರಾಸ್ತಾವಿಕ ಮಾತನಾಡಿದ ಜಿಲ್ಲಾಧಿಕಾರಿಗಳಾದ ಡಾ.ಸುರೇಶ ಇಟ್ನಾಳ ಅವರು, ಜಿಲ್ಲೆಯಲ್ಲಿ ಇದುವರೆಗೆ ಶೇ.40ರಷ್ಟು ಮಳೆ ಕೊರತೆಯಾಗಿದೆ. ಇದ–ರಿಂದಾಗಿ ಶೇ.63ರಷ್ಟು ಮಾತ್ರ ಬಿತ್ತನೆಯಾಗಿದೆ. ಬಿತ್ತಿದ ಬೆಳೆಗಳು ಬಾಡುತ್ತಿರುವ ಬಗ್ಗೆ ಕ್ಷೇತ್ರ ಭೇಟಿ ಮಾಡಿ ಫೋಟೊ ಮತ್ತು ವಿಡಿಯೋ ಸಂಗ್ರಹಿಸಿ ಸಚಿವರೊಂದಿಗೆ ಚರ್ಚಿಸಿ ವಸ್ತುನಿಷ್ಠ ವರದಿಯನ್ನು ಸರ್ಕಾರಕ್ಕೆ ಕಳುಹಿಸುತ್ತೇವೆ. ಈಗಾಗಲೇ ಜಿಲ್ಲೆಯ 1.56 ಲಕ್ಷ ರೈತರು ಬೆಳೆ ವಿಮೆಯ ಪ್ರಿಮಿಯಂ ಕಟ್ಟಿದ್ದಾರೆ. ಬರದ ವೇಳೆಯಲ್ಲಿ ರೈತರು ಪರ್ಯಾಯ ಕೃಷಿಯತ್ತ ಹೊರಳಲು ತೋಟಗಾರಿಕೆ, ಕೃಷಿ ಇಲಾಖೆಗಳು ರೈತರಲ್ಲಿ ಜಾಗೃತಿ ಮೂಡಿಸುತ್ತಿವೆ ಎಂದು ತಿಳಿಸಿದರು.

**ವಾಡಿಕೆಗಿಂತ ಕಡಿಮೆ ಮಳೆ:** ಕೊಪ್ಪಳ ಜಿಲ್ಲೆಯಲ್ಲಿ ಇದುವರೆಗೆ 158 ಮಿಮೀ ನಷ್ಟು ವಾಡಿಕೆ ಮಳೆಯಾಗಬೇಕಿತ್ತು. ಬದಲಾಗಿ 98 ಮೀ. ಮೀಟರ್ ಮಾತ್ರ ಮಳೆಯಾಗಿದೆ. ಯಲಬುರ್ಗಾ ತಾಲೂಕಿನಲ್ಲಿ ಶೆ.35ರಷ್ಟು ಹಾಗೂ ಕುಕನೂರ ತಾಲೂಕಿನಲ್ಲಿ ಶೆ.24ರಷ್ಟು ಮಳೆಯ ಕೊರತೆಯಾಗಿದೆ ಎಂದು ಜಂಟಿ ಕೃಷಿ ನಿರ್ದೇಶಕರು ಸಭೆಗೆ ತಿಳಿಸಿದರು.

ಈ ಸಂದರ್ಭದಲ್ಲಿ ಜಿಲ್ಲಾ ಮಟ್ಟದ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರದ ಅಧ್ಯಕ್ಷರಾದ ರೆಡ್ಡಿ ಶ್ರೀನಿವಾಸ, ಕೊಪ್ಪಳ ಸಹಾಯಕ ಆಯುಕ್ತರಾದ ಮೆಹಬೂಬ ಜಿಲಾನಿ, ಜಿಪಂ ಉಪ ಕಾರ್ಯದರ್ಶಿ ಕೃಷ್ಣಮೂರ್ತಿ, ಜಂಟಿ ತೋಟಗಾರಿಕಾ ನಿರ್ದೇಶಕರಾದ ಕೃಷ್ಣ ಉಕ್ಕುಂದ, ಮೀನುಗಾರಿಕಾ ಇಲಾಖೆಯ ಉಪ ನಿರ್ದೇಶಕರಾದ ಶ್ರೀನಿವಾಸ ಕುಲಕರ್ಣಿ, ಪಶುಪಾಲನಾ ಇಲಾಖೆಯ ಉಪ ನಿರ್ದೇಶಕರಾದ ಮಲ್ಲಯ್ಯ, ಕೃಷಿ ಇಲಾಖೆಯ ತಾಲೂಕು ಅಧಿಕಾರಿಗಳಾದ ಪ್ರಮೋದ ತುಂಬಳ, ಶಿವಪ್ಪ ಕೊಂಡಗುರಿ, ಎಸ್ ಸಿ ಚಿಂಚಲಿ ಸೇರಿದಂತೆ ಇತರರು ಇದ್ದರು.

## ನಶಾಮುಕ್ತ ಬದುಕಿನಿಂದ ಸುಂದರ ಜೀವನ ನಿರ್ಮಾಣ



**ಹಳಿಯಾಳ:** ನಶಾಮುಕ್ತ ಬದುಕು ವ್ಯಕ್ತಿಯ ಜೀವನವನ್ನು ಸುಂದರಗೊಳಿಸುವುದಲ್ಲದೆ, ಉತ್ತಮ ಸಂಸ್ಕಾರ, ಸದ್ಭಾವನೆ ಮತ್ತು ಸಾತ್ವಿಕ ವರ್ತನೆಯನ್ನು ಬೆಳೆಸುತ್ತದೆ. ವ್ಯಕ್ತಿಯ ವರ್ತನೆಯಲ್ಲಿ ಸಕಾರಾತ್ಮಕ ಪರಿವರ್ತನೆ ಉಂಟಾದಾಗ ಮಾತ್ರ ಜೀವನ ಪಾವನವಾಗುತ್ತದೆ ಎಂದು ಹಳಿಯಾಳದ ಪ್ರಜಾಪಿತ ಬ್ರಹ್ಮಕುಮಾರಿ ಈಶ್ವರೀಯ ವಿಶ್ವವಿದ್ಯಾಲಯದ ಸಂಚಾಲಕಿ ರಾಜಯೋಗಿನಿ ಡಾ. ಬಿ.ಕೆ. ಪದ್ಮಕ್ಕ ಹೇಳಿದರು.

ಹಳಿಯಾಳದ ಶಿವಾನುಭೂತಿ ಭವನದಲ್ಲಿ ಪ್ರಜಾಪಿತ ಬ್ರಹ್ಮಕುಮಾರಿ ಈಶ್ವರೀಯ ವಿಶ್ವವಿದ್ಯಾಲಯ ಹಾಗೂ ಹೊಂಗಿರಣ ಸಾಂಸ್ಕೃತಿಕ ಮತ್ತು ಸಾಮಾಜಿಕ ಸಂಸ್ಥೆ ಸಹಯೋಗದಲ್ಲಿ ಆಯೋಜಿಸಿದ್ದ ನಶಾ ಮುಕ್ತ ಭಾರತ ಅಭಿಯಾನ ಹಾಗೂ ಮಿಷನ್ ಸ್ಪಂದನ ಅಡಿಯಲ್ಲಿ ವಿಕಸಿತ ಭಾರತದ ಒಂದು ಸಬಲ ಹೆಜ್ಜೆ–ದಾದಿ ಪ್ರಕಾಶ್ ಮಣಿಜಿಯವರ ಪುಣ್ಯಸ್ಮರಣೆಯ ನಿಮಿತ್ತ 10 ಕೋಟಿ ನಶಾಮುಕ್ತ ಪ್ರತಿಜ್ಞೆಗಳ ಮಹಾ ಅಭಿಯಾನ ಉದ್ಘಾಟನಾ ಕಾರ್ಯಕ್ರಮದಲ್ಲಿ ಮಾತನಾಡಿದರು.

ಕಾರ್ಯಕ್ರಮವನ್ನು ಗಣ್ಯರು ದೀಪ ಬೆಳಗಿಸುವ ಮೂಲಕ ಉದ್ಘಾಟಿಸಿದರು. ಬಳಿಕ 'ನಶಾ ಮುಕ್ತ ಭಾರತ ಅಭಿಯಾನ' ಪೋಸ್ಟರ್ ಅನ್ನು ಅನಾವರಣಗೊಳಿಸಿ, ಸಮಾಜದಲ್ಲಿ ವ್ಯಸನಮುಕ್ತ ಜೀವನದ ಬಗ್ಗೆ ವ್ಯಾಪಕ ಜಾಗೃತಿ ಮೂಡಿಸುವ ಸಂಕಲ್ಪವನ್ನು ವ್ಯಕ್ತಪಡಿಸಿದರು.

ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಗಳಾಗಿ ಪಿ.ಎಸ್.ಐ ಕೃಷ್ಣ ಅರಕೇರಿ ಕೆಇಬಿ ಶಾಖಾಧಿಕಾರಿ ಗಣಪತಿ ಹಳಿಯಾಳಕರ, ವೈದ್ಯರಾದ ಡಾ. ವಿದ್ಯಾರಣ್ಯ ಐತಾಳ, ಪ್ರಕಾಶ್ ಹಣಮಸೇಟ್, ವಕೀಲರಾದ ಚಂದ್ರಶೇಖರ ನುಚ್ಚಂಬ್ಲಿ , ರಾಜಯೋಗಿನಿ ಲಕ್ಷ್ಮಿ ಅಕ್ಕ, ಶಿಕ್ಷಕರಾದ ಸಿದ್ದಪ್ಪ ಬಿರಾದಾರ ಸೇರಿದಂತೆ ಅನೇಕ ಗಣ್ಯರು ಬ್ರಹ್ಮಕುಮಾರಿಯರ ಸದಸ್ಯರು ವಿವಿಧ ಸಂಘ ಸಂಸ್ಥೆಯವರು ಮಹಿಳೆಯರು ಸಾರ್ವಜನಿಕರು ಉಪಸ್ಥಿತರಿದ್ದರು.

## ಪಡಿತರ ಅಕ್ಕಿ ಕಳ್ಳತನ ತಡೆಗೆ ಆಗ್ರಹಿಸಿ ತಹಶೀಲ್ದಾರರಿಗೆ ಮನವಿ



**ಇಂಡಿ:** ನಗರದಲ್ಲಿ ದಿನೇ ದಿನೇ ಹೆಚ್ಚುತ್ತಿರುವ ಅಕ್ರಮ ಬಡ್ಡಿ ದಂಧೆ ಹಾಗೂ ಬಡವರ ಪಡಿತರ ಅಕ್ಕಿ ಕಳ್ಳತನ ಪ್ರಕಣಗಳನ್ನು ತಕ್ಷಣವೇ ತಡೆಯಬೇಕು ಎಂದು ಆಗ್ರಹಿಸಿ ಭೀಮ್ ಆರ್ಮಿ ತಾಲೂಕು ಅಧ್ಯಕ್ಷ ರಸೂಲ್ ಮಾಶ್ಯಾಳಕರ ಅವರ ನೇತೃತ್ವದಲ್ಲಿ ಇಂಡಿ ತಾಲೂಕು ತಹಶೀಲ್ದಾರರಿಗೆ ಮಂಗಳವಾರ ಮನವಿ ಪತ್ರ ಸಲ್ಲಿಸಲಾಯಿತು.

ಈ ವೇಳೆ ಮಾತನಾಡಿದ ಭೀಮ್ ಆರ್ಮಿ ತಾಲೂಕು ಅಧ್ಯಕ್ಷ ರಸೂಲ್ ಮಾಶ್ಯಾಳಕರ, ನಗರದಲ್ಲಿ ಯಾವುದೇ ಅಧಿಕೃತ ಪರವಾನಗಿ ಇಲ್ಲದೆ ಅಕ್ರಮವಾಗಿ ಮೀಟರ್ ಬಡ್ಡಿ ಹಾಗೂ ಚಕ್ರಬಡ್ಡಿ ದಂಧೆ ನಡೆಸಲಾಗುತ್ತಿದ್ದು, ಇದರಿಂದ ಬಡ ಮತ್ತು ಮಧ್ಯಮ ವರ್ಗದ ಕುಟುಂಬಗಳು ತೀವ್ರ ತೊಂದರೆ ಅನುಭವಿಸುತ್ತಿವೆ. ಸಾಲ ನೀಡಿದವರು ಸಾರ್ವಜನಿಕರಿಗೆ ಕಿರುಕುಳ ನೀಡುತ್ತಿದ್ದು, ಈ ದಂಧೆಗೆ ತಕ್ಷಣವೇ ಕಡಿವಾಣ ಹಾಕಬೇಕು ಎಂದು ಒತ್ತಾಯಿಸಿದರು. ಇದಲ್ಲದೆ, ಸರ್ಕಾರದ ಉಚಿತ ಪಡಿತರ ಅಕ್ಕಿ ಬಡವರಿಗೆ ತಲುಪದೆ ಕಾಳಸಂತೆಯಲ್ಲಿ ಮಾರಾಟವಾಗುತ್ತಿದೆ. ಪಡಿತರ ಅಕ್ಕಿ ಕಳ್ಳತನದ ಜಾಲ ಸಕ್ರಿಯವಾಗಿದ್ದು, ಇಂತಹ ಅಕ್ರಮ ಚಟುವಟಿಕೆಗಳಲ್ಲಿ ತೊಡಗಿರುವವರ ವಿರುದ್ಧ ಖಡಕ್ ಕಾನೂನು ಕ್ರಮ ಜರುಗಿಸಬೇಕು. ಇಲ್ಲದಿದ್ದರೆ ಮುಂಬರುವ ದಿನಗಳಲ್ಲಿ ತಾಲೂಕು ಆಡಳಿತದ ವಿರುದ್ಧ ಉಗ್ರ ಹೋರಾಟ ರೂಪಿಸಲಾಗುವುದು ಎಂದು ಎಚ್ಚರಿಸಿದರು. ಈ ಸಂದರ್ಭದಲ್ಲಿ ಭೀಮ್ ಆರ್ಮಿ ಸಂಘಟನೆಯ ವಿವಿಧ ಪದಾಧಿಕಾರಿಗಳು ಹಾಗೂ ಕಾರ್ಯಕರ್ತರು ಉಪಸ್ಥಿತರಿದ್ದರು.

# ಜನರ ಒತ್ತಾಯಕ್ಕೆ ವಾಪಸ್ ಪಡೆದಿದ್ದೇನೆ: ಶಾಸಕ

• ಮಲ್ಲಮ್ಮ ನುಡಿ ವಾರ್ತೆ ವಿಜಯಪುರ



ಕ್ಷೇತ್ರದ ಜನರ ಭಾವನೆಗಳಿಗೆ ಬೆಲೆ ನೀಡಿ ಹಾಗೂ ಹಿರಿಯ ನಾಯಕರ ಮನವಿಯ ಮೇರೆಗೆ ಶಾಸಕ ಸ್ಥಾನಕ್ಕೆ ನೀಡಿದ್ದ ರಾಜೀನಾಮೆಯನ್ನು ಹಿಂಪಡೆದಿದ್ದೇನೆ. ಮುಂದೆ ಯಾವುದೇ ಹುದ್ದೆ ಅಥವಾ ಸಚಿವ ಸ್ಥಾನಕ್ಕಾಗಿ ಯಾರ ಬಾಗಿಲಿಗೂ ಹೋಗುವುದಿಲ್ಲ ಎಂದು ಇಂಡಿ ಕ್ಷೇತ್ರದ ಶಾಸಕ ಯಶವಂತರಾಯಗೌಡ ಪಾಟೀಲ ವಿಜಯಪುರ ನಗರದಲ್ಲಿ ಪತ್ರಿಕಾಗೋಷ್ಠಿಯನ್ನುದ್ದೇಶಿ ಮಾತನಾಡಿ ಸ್ಪಷ್ಟಪಡಿಸಿದ್ದಾರೆ.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ತಮ್ಮ ರಾಜೀನಾಮೆ ಪ್ರಹಸನ ಹಾಗೂ ಸಚಿವ ಸಂಪುಟ ಸೇರ್ಪಡೆ ಕುರಿತು ಮುಕ್ತವಾಗಿ ಮಾತನಾಡಿದರು.

**ರಾಜೀನಾಮೆ ವಾಪಸಾತಿಯ ಹಿನ್ನೆಲೆ**

2023ರಲ್ಲಿ ರಾಜ್ಯದ ಜನತೆ ಕಾಂಗ್ರೆಸ್‌ಗೆ 136 ಸ್ಥಾನಗಳನ್ನು ನೀಡಿ ಅಭೂತಪೂರ್ವ ಗೆಲುವು ತಂದಿತ್ತರು. ಚುನಾವಣಾ ಪೂರ್ವದಲ್ಲಿ ನಡೆದ ಮಾತುಕತೆಯಂತೆ ಅಧಿಕಾರ ಹಂಚಿಕೆಯಾಗಬೇಕಿತ್ತು. ಅದರಂತೆ ನನಗೂ ಸಚಿವ ಸ್ಥಾನ ನೀಡುವಂತೆ ಮನವಿ ಮಾಡಿದ್ದೆ. ಕೊನೆಯ ಕ್ಷಣದವರೆಗೂ ಸಕಾರಾತ್ಮಕ ಸ್ಪಂದನೆ ಸಿಕ್ಕಿ, ಅಂತಿಮ ಹಂತದಲ್ಲಿ ಕೈಬಿಟ್ಟಿದ್ದು ನನಗೆ ತೀವ್ರ ನೋವುಂಟುಮಾಡಿತು. ಹೀಗಾಗಿ ವಿಧಾನಸಭೆಯ ಉಪಸಭಾಪತಿ ರುದ್ರಪ್ಪ ಲಮಾಣಿ ಅವರಿಗೆ ರಾಜೀನಾಮೆ ಸಲ್ಲಿಸಿದ್ದೆ" ಎಂದರು.

ಆದರೆ, ಕಾಂಗ್ರೆಸ್ ಉಸ್ತುವಾರಿ ರಣದೀಪ್ ಸಿಂಗ್ ಸುರ್ಜೇವಾಲಾ, ಅನೇಕ ಶಾಸಕರು, ಮಠಾಧೀಶರು ಹಾಗೂ ಹಿರಿಯರು ಮನೆಗೆ ಬಂದು ಮತ್ತು ಕರೆ ಮಾಡಿ ರಾಜೀನಾಮೆ ಹಿಂಪಡೆಯುವಂತೆ ಮನವಿ ಮಾಡಿದರು. ಮುಖ್ಯಮಂತ್ರಿಗಳು ಸಹ ಮಾತನಾಡಿ ಸಮಾಧಾನಪಡಿಸಿದರು. ಅಷ್ಟೇ ಅಲ್ಲದೆ, ನಾಯಕ ಲಕ್ಷ್ಮಣ ಸವದಿ ಅವರು ತಮ್ಮ ಕೋಟಾದಡಿ ಸಿಗುವ ಸಚಿವ ಸ್ಥಾನವನ್ನು ನನಗಾಗಿ ಬಿಟ್ಟುಕೊಡುವುದಾಗಿ ಹೇಳಿದರು. ಅಂತಿಮವಾಗಿ ನನ್ನ ಮತಕ್ಷೇತ್ರದ ಜನರ ಅಭಿಪ್ರಾಯಕ್ಕೆ ಮನ್ನಣೆ ನೀಡಿ ರಾಜೀನಾಮೆ ವಾಪಸ್ ಪಡೆದಿದ್ದೇನೆ ಎಂದು ತಿಳಿಸಿದರು.

**ಉಸಿರಿರುವವರೆಗೆ ಕಾಂಗ್ರೆಸ್‌ನಲ್ಲೇ ಇರುವೆ**

ಮಂತ್ರಿ ಸ್ಥಾನ ಕೈತಪ್ಪಲು ಯಾರು ಕಾರಣ ಎಂಬುದು ಎಲ್ಲರಿಗೂ ಗೊತ್ತಿದೆ. ಆದರೆ, ಈಗ ಅದರ ಬಗ್ಗೆ ಮಾತನಾಡುವುದಿಲ್ಲ. ಮನುಷ್ಯನಿಗೆ ಜೀವನದಲ್ಲಿ ಆತ್ಮಗೌರವವೇ ಮುಖ್ಯ. ನನ್ನ ಉಸಿರಿರುವವರೆಗೆ ನಾನು ಕಾಂಗ್ರೆಸ್ ಪಕ್ಷದಲ್ಲೇ ಇರುತ್ತೇನೆ, ಕಾಂಗ್ರೆಸ್‌ನಲ್ಲೇ ಸಾಯುತ್ತೇನೆ ಎಂದು ಶಾಸಕರು ಶಪಥ ಮಾಡಿದರು.

**ಸಚಿವ ಸಂಪುಟ ವಿಸ್ತರಣೆಗೆ ತಡ ಮಾಡದಿರಿ**

ಸರ್ಕಾರ ಸಚಿವ ಸಂಪುಟ ವಿಸ್ತರಣೆಯನ್ನು ತಿಂಗಳುಗಟ್ಟಲೆ ಎಳೆದಾಡದೆ ತಕ್ಷಣವೇ ಪೂರ್ಣಗೊಳಿಸಬೇಕು. ರಾಜ್ಯದಲ್ಲಿ ಬರ ಪರಿಸ್ಥಿತಿ ಭೀಕರವಾಗಿದ್ದು, ಜನಸಾಮಾನ್ಯರ ಹಾಗೂ ರೈತರ ಸಂಕಷ್ಟಕ್ಕೆ ಸ್ಪಂದಿಸುವ ಕೆಲಸ ಆಗಬೇಕಿದೆ. ಸಚಿವರಿಗೆ ಸಿಗುವ ಅನುದಾನಕ್ಕಿಂತ ಹೆಚ್ಚಿನ ಅನುದಾನ ನನ್ನ ಕ್ಷೇತ್ರದ ಅಭಿವೃದ್ಧಿಗೆ ಸಿಕ್ಕಿದೆ, ಮುಂದೆ ಯಾವುದೇ ನಿರೀಕ್ಷೆಗಳಿಲ್ಲ ಎಂದರು.

**ಯತ್ನಾಳ್‌ಗೆ ತಿರುಗೇಟು ನೀಡಿದ ಶಾಸಕ ಯಶವಂತರಾಯಗೌಡ ಪಾಟೀಲ್**

ಇದು ಗುಂಡಾಗಳ ಸಚಿವ ಸಂಪುಟ ಎಂಬ ಶಾಸಕ ಬಸನಗೌಡ ಪಾಟೀಲ್ ಯತ್ನಾಳ್ ಅವರ ಹೇಳಿಕೆಗೆ ತಿರುಗೇಟು ನೀಡಿದ ಯಶವಂತರಾಯಗೌಡರು, ಯತ್ನಾಳ್ ಅವರ ರಾಜಕಾರಣ ಎಂತಹದ್ದು ಎಂಬುದು ಎಲ್ಲರಿಗೂ ಗೊತ್ತು. ಹೀಗೆ ಮಾತನಾಡಿಯೇ ಅವರು ಇಂದು ಎಲ್ಲಿದ್ದಾರೆ ಎಂಬುದನ್ನು ನೋಡಿಕೊಳ್ಳಲಿ. ನನಗೆ ಅವರಿಂದ ಪಾಠ ಕಲಿಯುವ ಅಗತ್ಯವಿಲ್ಲ. ಅವರಿಗೆ ಅಧಿಕಾರ ಕೊಟ್ಟ ನಾಯಕರ ಬಗ್ಗೆಯೇ ಗೌರವವಿಲ್ಲ. ನಾನು ಕಾಂಗ್ರೆಸ್‌ನಲ್ಲಿ ಕೊನೆಯವರೆಗೆ ಇರುತ್ತೇನೆ ಎಂದು ಹೇಳುತ್ತೇನೆ, ಇದನ್ನು ಹೇಳುವ ಧೈರ್ಯ ಯತ್ನಾಳ್‌ಗೆ ಇದೆಯಾ? ಎಂದು ಪ್ರಶ್ನಿಸಿದರು.

**ಇಂಡಿ ನೂತನ ಜಿಲ್ಲೆ ಮಾಡಲು ಆಗ್ರಹ**

ರಾಜ್ಯದಲ್ಲಿ ನೂತನ ಜಿಲ್ಲೆಗಳ ರಚನೆ ವಿಚಾರ ಬಂದಾಗ ಮೊದಲ ಆದ್ಯತೆಯನ್ನು 'ಇಂಡಿ'ಗೆ ನೀಡಬೇಕು. ಇಂಡಿಯನ್ನು ಹೊಸ ಜಿಲ್ಲೆಯನ್ನಾಗಿ ಮಾಡಲು ನನ್ನ ಪ್ರಯತ್ನ ನಿರಂತರವಾಗಿ ಮುಂದುವರಿಯಲಿದೆ ಎಂದು ಅವರು ಈ ಸಂದರ್ಭದಲ್ಲಿ ಪುನರುಚ್ಚರಿಸಿದರು.

## ಮಾತಾಜಿ ಸಾವಿನ ತನಿಖೆಗೆ ಕೇಂದ್ರದ ಮೊರೆ

• ಮಲ್ಲಮ್ಮ ನುಡಿ ವಾರ್ತೆ ಸೇಡಂ

ಯಾನಾಗುಂದಿ ಕ್ಷೇತ್ರದ ಪೂಜ್ಯ ಮಾತಾ ಮಾಣಿಕೇಶ್ವರಿ ಅಮ್ಮನವರ ಸಾವಿನ ಕುರಿತು ಪಾರದರ್ಶಕ ಹಾಗೂ ಸಮಗ್ರ ತನಿಖೆ ನಡೆಸಬೇಕು ಎಂದು ಒತ್ತಾಯಿಸಿ, ಪ್ರಧಾನಿ, ರಾಷ್ಟ್ರಪತಿ ಹಾಗೂ ಕೇಂದ್ರ ಗೃಹ ಸಚಿವರಿಗೆ ಭಕ್ತರು ಮನವಿ ಸಲ್ಲಿಸಿದ್ದಾರೆ ಎಂದು ನಲ್ಗೊಂಡ ಆನಂದ ಆಶ್ರಮದ ಈಶ್ವರಿ ಮಾತಾ ಪತ್ರಿಕಾಗೋಷ್ಠಿಯಲ್ಲಿ ತಿಳಿಸಿದರು.

ಮಾತಾಮಾಣಿಕೇಶ್ವರಿಅಮ್ಮನವರುಯೋಗನಿದ್ರೆಯಲ್ಲಿದ್ದಾಗ ಉದ್ದೇಶಪೂರ್ವಕವಾಗಿ ಸಮಾಧಿ ಮಾಡಲಾಗಿದೆ ಎಂಬ ಅನುಮಾನ ವ್ಯಕ್ತಪಡಿಸಿದ ಅವರು, ಆಶ್ರಮದ ಟ್ರಸ್ಟ್ ಸದಸ್ಯರನ್ನು ಕಡೆಗಣಿಸಿ ರಾಜಕೀಯ ಹಾಗೂ ಆಡಳಿತಾತ್ಮಕ ಪ್ರಭಾವ ಬಳಸಿಕೊಂಡು ಶಿವಯ್ಯ ಸ್ವಾಮಿ ಏಕಪಕ್ಷೀಯವಾಗಿ ಆಶ್ರಮದ ಆಡಳಿತ ನಡೆಸುತ್ತಿದ್ದಾರೆ ಎಂದು ಆರೋಪಿಸಿದರು. ಆಶ್ರಮದ ಆಸ್ತಿ ಕಬಳಿಸುವ ಉದ್ದೇಶದಿಂದ ಕುತಂತ್ರ ನಡೆದಿದೆ ಎಂದು ಆರೋಪಿಸಿದ ಅವರು, ಟ್ರಸ್ಟ್ ಸದಸ್ಯರು ಹಾಗೂ ಆಶ್ರಮದ ಆಡಳಿತವನ್ನು ಪ್ರಶ್ನಿಸುವವರನ್ನು ಹೊರಗಿಡುವುದು, ರಾಜಕೀಯ ಒತ್ತಡ ಹೇರುವುದು ಮತ್ತು ಅಧಿಕಾರಿಗಳ ಮೂಲಕ ಬೆದರಿಕೆ ಹಾಕುವ ಪ್ರಯತ್ನಗಳು ನಡೆಯುತ್ತಿವೆ ಎಂದು ದೂರಿದರು.

ಸುಮಾರು ಏಳು ತಿಂಗಳ ಹಿಂದೆ ಸಲ್ಲಿಸಿದ್ದ ದೂರಿನ ಕುರಿತು ಕರ್ನಾಟಕ ಪೊಲೀಸ್ ಇಲಾಖೆ ಯಾವುದೇ ಪರಿಣಾಮಕಾರಿ ಕ್ರಮ ಕೈಗೊಂಡಿಲ್ಲ ಎಂದು ಅಸಮಾಧಾನ ವ್ಯಕ್ತಪಡಿಸಿದ ಅವರು, ಬಳಿಕ ಭಕ್ತರು ಪ್ರಧಾನಿ, ರಾಷ್ಟ್ರಪತಿ ಹಾಗೂ ಕೇಂದ್ರ ಗೃಹ ಸಚಿವರಿಗೆ ಮನವಿ ಸಲ್ಲಿಸಿದ್ದಾರೆ. ಅದರ ಹಿನ್ನೆಲೆಯಲ್ಲಿ ಕೇಂದ್ರ ಗೃಹ ಸಚಿವಾಲಯವು ಕರ್ನಾಟಕ ಪೊಲೀಸ್ ಇಲಾಖೆಗೆ ತನಿಖೆ ನಡೆಸುವಂತೆ ಸೂಚನೆ ನೀಡಿದೆ ಎಂದು ಹೇಳಿದರು. ದೂರು ಸಲ್ಲಿಸಿರುವ ಭಕ್ತರಿಗೆ ಜೀವ ಬೆದರಿಕೆ ಇರುವ ಸಾಧ್ಯತೆ ಇರುವುದರಿಂದ ಅವರಿಗೆ ಸೂಕ್ತ ಪೊಲೀಸ್ ಭದ್ರತೆ ಒದಗಿಸಬೇಕು. ಯಾವುದೇ ರಾಜಕೀಯ ಅಥವಾ ಆಡಳಿತಾತ್ಮಕ ಹಸ್ತಕ್ಷೇಪವಿಲ್ಲದೆ ನಿಷ್ಪಕ್ಷಪಾತ ಹಾಗೂ ಪಾರದರ್ಶಕ ತನಿಖೆ ನಡೆಸಿ, ತಪ್ಪಿತಸ್ಥರ ವಿರುದ್ಧ ಕಾನೂನು ಕ್ರಮ ಕೈಗೊಳ್ಳಬೇಕು ಎಂದು ಆಗ್ರಹಿಸಿದರು. ಶಿವಯ್ಯ ಸ್ವಾಮಿ ಹಾಗೂ ಅವರ ಪುತ್ರ ಸುಮನ್ ಆಶ್ರಮದ ನಿಯಮಗಳಿಗೆ ವಿರುದ್ಧವಾದ ಚಟುವಟಿಕೆಗಳಲ್ಲಿ ತೊಡಗಿದ್ದಾರೆ, ಆಶ್ರಮದಲ್ಲೇ ಮದ್ಯ ಸೇವನೆ ನಡೆಯುತ್ತಿದೆ ಹಾಗೂ ಸೇವಾರ್ಥಿಗಳನ್ನು ಬೆದರಿಸಿ ಹೊರಹಾಕಲಾಗುತ್ತಿದೆ ಎಂದು ಸಹ ಅವರು ಆರೋಪಿಸಿದರು. ಈ ಆರೋಪಗಳ ಬಗ್ಗೆಯೂ ಸಮಗ್ರ ತನಿಖೆ ನಡೆಸಬೇಕು ಎಂದು ಒತ್ತಾಯಿಸಿದರು.

## ಬಿಜೆಪಿ ಪಕ್ಷದಲ್ಲಿಯೇ ಆಂತರಿಕ ಗೊಂದಲ..!

• ಮಲ್ಲಮ್ಮ ನುಡಿ ವಾರ್ತೆ ಬಳ್ಳಾರಿ



ಬಿಜೆಪಿ ಪಕ್ಷದಲ್ಲಿ ಆಂತರಿಕ ಗೊಂದಲ ತೀವ್ರವಾಗಿದ್ದು, ರಾಜ್ಯಾಧ್ಯಕ್ಷರ ನೇಮಕ ವಿಚಾರದಲ್ಲೇ ಹಲವು ಬಣಗಳು ಪರಸ್ಪರ ಪೈಪೋಟಿ ನಡೆಸುತ್ತಿವೆ ಎಂದು ಸಚಿವ ಬಿ. ನಾಗೇಂದ್ರ ಆರೋಪಿಸಿದರು.

ಗುರುವಾರ ಬಳ್ಳಾರಿ ಗ್ರಾಮಾಂತರ ಕ್ಷೇತ್ರದ ಚೇಳಗುರ್ಕಿ ಗ್ರಾಮದಲ್ಲಿ ಮಾಧ್ಯಮ ಪ್ರತಿನಿಧಿಗಳೊಂದಿಗೆ ಮಾತನಾಡಿದ ಅವರು, ಬಿಜೆಪಿ ಮುಖಂಡ ಗಾಳಿ ಜನಾರ್ದನ ರೆಡ್ಡಿ ವಿರುದ್ಧವೂ ವಾಗ್ದಾಳಿ ನಡೆಸಿದರು.

"ಗಾಳಿ ಜನಾರ್ದನ ರೆಡ್ಡಿ ಅವರಿಗೆ ಬೇರೆಯವರ ಮೇಲೆ ಗೂಬೆಕೂರಿಸುವುದೇ ಸಂಸ್ಕೃತಿ ಮತ್ತು ಭಾಷೆಯಾಗಿದೆ. ದಲಿತ ಸಮುದಾಯದವರು, ಶೋಷಿತ ವರ್ಗದವರು ಮಂತ್ರಿಯಾಗಿದ್ದರೆ ಅವರಿಗೆ ಹೊಟ್ಟೆಕಿಚ್ಚು. ಅವರು 'ಅವನು, ಇವನು' ಎಂದು ಏಕವಚನದಲ್ಲಿ ಮಾತನಾಡುತ್ತಾರೆ. ನಾನೂ ಸಹ ಹಾಗೆ ಮಾತನಾಡಬಹುದು. ಎಲುಬು ಇಲ್ಲದ ನಾಲಿಗೆ ಏನು ಬೇಕಾದರೂ ಮಾತನಾಡಬಹುದು," ಎಂದು ತಿರುಗೇಟು ನೀಡಿದರು.

ಬಿಜೆಪಿಯ ಆಂತರಿಕ ಬೆಳವಣಿಗೆಗಳ ಕುರಿತು ಮಾತನಾಡಿದ ಅವರು, "ಕೇಂದ್ರ ನಾಯಕತ್ವ ರಾಜ್ಯಾಧ್ಯಕ್ಷರನ್ನು ನೇಮಕ ಮಾಡಿದರೆ, ಅವರ ಪರ ಒಂದು ನಿಯೋಗ, ವಿರೋಧವಾಗಿ ಮತ್ತೊಂದು ನಿಯೋಗ ತೆರಳಬೇಕು ಎನ್ನುವ ಮಟ್ಟಿಗೆ ಪಕ್ಷದಲ್ಲಿ ಭಾರಿ ಗೊಂದಲ ಮತ್ತು ಬಣ ರಾಜಕೀಯ ಇದೆ. ಅಂತಹ ಪರಿಸ್ಥಿತಿಯಲ್ಲಿರುವ ಬಿಜೆಪಿ ನಮ್ಮ ಕಾಂಗ್ರೆಸ್ ಪಕ್ಷದ ಸಮಸ್ಯೆಗಳ ಬಗ್ಗೆ ಮಾತನಾಡುವ ಅಗತ್ಯವೇ ಇಲ್ಲ," ಎಂದು ಹೇಳಿದರು.

ಕಾಂಗ್ರೆಸ್ ಪಕ್ಷಕ್ಕೆ ಸಂಬಂಧಿಸಿದ ಪ್ರಕರಣದ ಕುರಿತು ಪ್ರತಿಕ್ರಿಯೆ ನೀಡಲು ನಿರಾಕರಿಸಿದ ಅವರು, "ಈಗಾಗಲೇ ಆ ವಿಷಯ ನ್ಯಾಯಾಲಯದ ವಿಚಾರಣೆಯಲ್ಲಿದೆ. ಆದ್ದರಿಂದ ಅದರ ಬಗ್ಗೆ ನಾನು ಯಾವುದೇ ಪ್ರತಿಕ್ರಿಯೆ ನೀಡುವುದಿಲ್ಲ," ಎಂದರು. ವಿಧಾನ ಪರಿಷತ್ ಸದಸ್ಯ ಛಲವಾದಿ ನಾರಾಯಣಸ್ವಾಮಿ ಅವರ ಹೇಳಿಕೆಗೂ ಪ್ರತಿಕ್ರಿಯಿಸಿದ ಸಚಿವರು, "ಅವರು ಹಿರಿಯರು, ಬುದ್ಧಿವಂತರು ಎಂಬ ಕಾರಣಕ್ಕೆ ಅವರನ್ನು ವಿಧಾನ ಪರಿಷತ್ ಸದಸ್ಯರನ್ನಾಗಿ ಮಾಡಲಾಗಿದೆ. ಅವರು ರಾಜಕೀಯವಾಗಿ ಮಾತನಾಡುತ್ತಿದ್ದಾರೆ ಎಂದರು.

## ಸರ್ಕಾರಿ ಶಾಲೆಗೆ ಬಿಎನ್‌ಆರ್ ಪಬ್ಲಿಕ್ ಸ್ಕೂಲ್‌ನಿಂದ ಡೆಸ್ಕ್ ವಿತರಣೆ

• ಮಲ್ಲಮ್ಮ ನುಡಿ ವಾರ್ತೆ ಪೀಣ್ಯ, ದಾಸರಹಳ್ಳಿ



ಸರ್ಕಾರಿ ಶಾಲೆಯಲ್ಲಿ ಓದುವ ಗ್ರಾಮೀಣ ಪ್ರದೇಶದ ಮಕ್ಕಳ ಶೈಕ್ಷಣಿಕ ಪ್ರಗತಿಗಾಗಿ ವಿದ್ಯಾರ್ಥಿಗಳಿಗೆ ಪ್ರತಿವರ್ಷದಂತೆ ಈ ವರ್ಷವೂ ಕೂಡ ಡೆಸ್ಕ್‌ಗಳನ್ನು ವಿತರಣೆ ಮಾಡಿದ್ದೇವೆ. ವಿದ್ಯಾರ್ಥಿಗಳು ಇದರ ಸೌಲಭ್ಯಗಳನ್ನು ಸದ್ಬಳಕೆ ಮಾಡಿಕೊಂಡು ಶೈಕ್ಷಣಿಕವಾಗಿ ಪ್ರಗತಿ ಸಾಧನೆ ಮಾಡಿ ಸಮಾಜಕ್ಕೆ ಉತ್ತಮ ಪ್ರಜೆಗಳಾಗಿ ಹೊರಹೊಮ್ಮಬೇಕು ಎಂದು ಬಿ ಎನ್ ಅರ್ ಪಬ್ಲಿಕ್ ಶಾಲೆಯ ಪ್ರಾಂಶುಪಾಲ ಭೂಷಣ್ ಎನ್ ಸಲಹೆ ನೀಡಿದರು.

ಸರ್ಕಾರಿ ಶಾಲಾ ಮಕ್ಕಳ ಶಿಕ್ಷಣಕ್ಕೆ ಪ್ರೋತ್ಸಾಹ ನೀಡುವ ಉದ್ದೇಶದಿಂದ ಕೆಂಗನಹಳ್ಳಿಯ ಕನ್ನಡ ಹಾಗೂ ಆಂಗ್ಲ ಮಾಧ್ಯಮ ಕಿರಿಯ ಪ್ರಾಥಮಿಕ ಶಾಲೆಗೆ ಬಿ ಎನ್ ಆರ್ ಪಬ್ಲಿಕ್ ಸ್ಕೂಲ್ ವತಿಯಿಂದ ಉಚಿತವಾಗಿ ಡೆಸ್ಕ್‌ಗಳನ್ನು ವಿತರಿಸಲಾಯಿತು.

ಈ ವೇಳೆ ಮಾತನಾಡಿದ ಬಿಎನ್‌ಆರ್ ಪಬ್ಲಿಕ್ ಸ್ಕೂಲ್ ಪ್ರಾಂಶುಪಾಲ ನಾಗಭೂಷಣ್, "ಸರ್ಕಾರಿ ಶಾಲೆಯಾಗಲಿ, ಖಾಸಗಿ ಶಾಲೆಯಾಗಲಿ ಎಲ್ಲ ಮಕ್ಕಳಿಗೂ ಗುಣಮಟ್ಟದ ಶಿಕ್ಷಣ ಸಿಗಬೇಕು. ಯಾವುದೇ ಮಗು ವಿದ್ಯೆಯಿಂದ ವಂಚಿತರಾಗಬಾರದು. ಉತ್ತಮ ಶಿಕ್ಷಣ ಪಡೆದು ದೇಶದ ಉತ್ತಮ ಪ್ರಜೆಗಳಾಗಿ ಬೆಳೆಯಬೇಕು" ಎಂದು ವಿದ್ಯಾರ್ಥಿಗಳಿಗೆ ಕಿವಿಮಾತು ಹೇಳಿದರು. ಪತ್ರಕರ್ತ ಪ್ರಶಾಂತ್ ಕೆ.ಸಿ ಮಾತನಾಡಿ, "ಕಳೆದ ಎರಡು ವರ್ಷಗಳಿಂದ ನಮ್ಮ ಗ್ರಾಮದ ಸರ್ಕಾರಿ ಶಾಲೆಯ ಅಭಿವೃದ್ಧಿಗೆ ಬಿ ಎನ್ ಆರ್ ಪಬ್ಲಿಕ್ ಸ್ಕೂಲ್ ಆಡಳಿತ ಮಂಡಳಿ ನೀಡುತ್ತಿರುವ ಸಹಕಾರ ಶ್ಲಾಘನೀಯ. ಮುಂದಿನ ದಿನಗಳಲ್ಲಿಯೂ ಇದೇ ರೀತಿಯ ಸಮಾಜಮುಖಿ ಕಾರ್ಯಗಳು ಮುಂದುವರಿಯಲಿ" ಎಂದು ಆಶಯ ವ್ಯಕ್ತಪಡಿಸಿದರು.

ಕಷ್ಟದಲ್ಲಿ ಜೀವನ ಮಾಡುತ್ತಿರುವ ಪೋಷಕರು ಮಕ್ಕಳನ್ನು ಸರ್ಕಾರಿ ಶಾಲೆಗೆ ಸೇರಿಸುತ್ತಾರೆ. ಆದರೆ ಕಡಿಮೆ ಫಲಿತಾಂಶ ಬಂದರೆ ಅವರ ಆಸೆಗಳೆಲ್ಲಾ ಕಮರಿಹೋಗುತ್ತವೆ. ಹಾಗಾಗಿ ಸರ್ಕಾರಿ ಶಾಲೆಯ ಶಿಕ್ಷಕರು ಮಕ್ಕಳು ಒಳ್ಳೆಯ ಫಲಿತಾಂಶ ಬರುವಂತೆ ಯೋಜನೆ ರೂಪಿಸಬೇಕು ಎಂದು ಹೇಳಿದರು.

ಇದೇ ಸಂದರ್ಭದಲ್ಲಿ ಗ್ರಾಮ ಪಂಚಾಯತಿ ಮಾಜಿ ಉಪಾಧ್ಯಕ್ಷ ರಮೇಶ್ ಕೆ ಹೆಚ್, ಶಾಲೆಯ ಅಧ್ಯಕ್ಷ ವಿಜಯಕುಮಾರ್, ಉಪಾಧ್ಯಕ್ಷ ರುದ್ರೇಶ್ ಕೆ ಎಸ್, ಕಾರ್ಯದರ್ಶಿ ರುದ್ರಮನಿ ಬಿ ಸಿ.ಎಸ್ ಡಿ ಎಂ ಸಿ ಅಧ್ಯಕ್ಷ ಸೋಮಶೇಖರ್, ಮಾಜಿ ಅಧ್ಯಕ್ಷ ನಾರಾಯಣ್ ಕೆ.ಬಿ, ಶಾಲೆಯ ಮುಖ್ಯೋಪಾಧ್ಯಾಯ ಮಂಜುನಾಥ್ , ಶಾಲೆಯ ಶಿಕ್ಷಕಿ ಸುನಿತಾ, ಶಾಲೆಯ ವಿದ್ಯಾರ್ಥಿಗಳು ಹೂರಿನ ಗ್ರಾಮಸ್ಥರು ಉಪಸ್ಥಿತರಿದ್ದರು.

# ರೀಲ್ಸ್‌ಗಳ ನಡುವೆ ಕಣ್ಮರೆಯಾಗುತ್ತಿರುವ ಪದವಿಯ ಜ್ಞಾನ



ರೀಲ್ಸ್ ಲೋಕ

● ವೀರಣ್ಣ ಕಲಕೇರಿ

ಕೆಂಭಾವಿ

ಇಂದಿನ ಪದವಿ ಮತ್ತು ಪದವಿ ಪೂರ್ವ ಶಿಕ್ಷಣ ವ್ಯವಸ್ಥೆಯು ಕೇವಲ ಅಂಕಪಟ್ಟಿ ಮತ್ತು ಪ್ರಮಾಣಪತ್ರಗಳನ್ನು ನೀಡುವ ಕಾರ್ಖಾನೆಯಾಗಿ ಮಾರ್ಪಡುತ್ತಿದೆಯೇ ಎಂಬ ಗಂಭೀರ ಆತಂಕ ಎದುರಾಗಿದೆ. ದಶಕಗಳ ಹಿಂದಿನ ಕಾಲೇಜು ಶಿಕ್ಷಣದ ಗುಣಮಟ್ಟ ಮತ್ತು ಶಿಸ್ತನ್ನು ಇಂದಿನ ಪರಿಸ್ಥಿತಿಗೆ ಹೋಲಿಸಿ ನೋಡಿದರೆ, ಈಗಿನ ಶಿಕ್ಷಣ ಕ್ರಮವು ಕೇವಲ ತಾಂತ್ರಿಕವಾಗಿ ತೇರ್ಗಡೆಯಾಗುವ ವಿದ್ಯಾರ್ಥಿಗಳನ್ನು ಸೃಷ್ಟಿಸುತ್ತಿರುವ ಯಾಂತ್ರಿಕ ಕೇಂದ್ರಗಳಂತೆ ಭಾಸವಾಗುತ್ತಿರುವುದು ಸುಳ್ಳಲ್ಲ.

ಗ್ರಾಮೀಣ ಭಾಗದ ಅದೆಷ್ಟೋ ಖಾಸಗಿ ಹಾಗೂ ಸರ್ಕಾರಿ ಕಾಲೇಜುಗಳಲ್ಲಿ ಇಂದು ಕೇವಲ ದಾಖಲಾತಿ (ಅಡ್ಮಿಷನ್) ಪ್ರಕ್ರಿಯೆ ಮಾತ್ರ ಸಡಗರದಿಂದ ನಡೆಯುತ್ತದೆ. ಪ್ರವೇಶಾತಿ ಮುಗಿದ ಮರುದಿನದಿಂದಲೇ ಕಾಲೇಜುಗಳು ನಿರ್ಜನವಾಗತೊಡಗುತ್ತವೆ. ಹಲವು ಖಾಸಗಿ ಸಂಸ್ಥೆಗಳಿಗೆ ವಿದ್ಯಾರ್ಥಿಗಳ ಸಂಖ್ಯೆಯೇ ಬಂಡವಾಳವಾಗಿದ್ದು, ದಾಖಲಾತಿ ಸಂಖ್ಯೆಯನ್ನು ತೋರಿಸಿ ಸರ್ಕಾರದಿಂದ ಸೌಲಭ್ಯ ಪಡೆಯುವುದು ಅಥವಾ ಮಾನ್ಯತೆ ಉಳಿಸಿಕೊಳ್ಳುವುದಷ್ಟೇ ಅವರ ಉದ್ದೇಶ ಎನ್ನುವಂತಾಗಿದೆ. ಹೀಗಾಗಿ ತರಗತಿಗಳು ನಡೆಯದಿದ್ದರೂ ಆಡಳಿತ ಮಂಡಳಿ ತಲೆಕೆಡಿಸಿಕೊಳ್ಳದ ಪರಿಸ್ಥಿತಿ ನಿರ್ಮಾಣವಾಗಿದೆ. ಕೆಲವು ಸರ್ಕಾರಿ ಕಾಲೇಜುಗಳೂ ಇದಕ್ಕೆ ಹೊರತಾಗಿಲ್ಲ; ಮೂಲಸೌಕರ್ಯಗಳ ಕೊರತೆ ಮತ್ತು ವಿದ್ಯಾರ್ಥಿಗಳ ನಿರಂತರ ಗೈರುಹಾಜರಿಯಿಂದಾಗಿ ಉಪನ್ಯಾಸಕರು ಖಾಲಿ ತರಗತಿಗಳಿಗೆ ಪಾಠ ಮಾಡಬೇಕಾದ ಅನಿವಾರ್ಯತೆ ಎದುರಾಗಿದೆ. ಇನ್ನೊಂದೆಡೆ, ವಿದ್ಯಾರ್ಥಿಗಳು ಕಾಲೇಜಿಗೆ ಬಾರದೆ ಕೋಚಿಂಗ್ ಸೆಂಟರ್‌ಗಳಿಗೆ, ಸ್ಪರ್ಧಾತ್ಮಕ ಪರೀಕ್ಷೆಗಳ ಸಿದ್ಧತೆಗೆ ಅಥವಾ ಸಣ್ಣಪುಟ್ಟ ದುಡಿಮೆಗೆ ಆದ್ಯತೆ ನೀಡುತ್ತಾ, ಪದವಿಯನ್ನು ಕೇವಲ ಒಂದು 'ಸರ್ಟಿಫಿಕೇಟ್' ಆಗಿ ನೋಡುವ ಮಾನಸಿಕತೆ ಹೆಚ್ಚಾಗುತ್ತಿದೆ.

ಇಂದಿನ ವ್ಯವಸ್ಥೆಯಲ್ಲಿ ಅತ್ಯಂತ ಆಘಾತಕಾರಿ ವಿಷಯವೆಂದರೆ, ಇಡೀ ವರ್ಷ ಕಾಲೇಜಿನ ಮುಖವನ್ನೇ ನೋಡದ ವಿದ್ಯಾರ್ಥಿಗಳನ್ನು ಪರೀಕ್ಷಾ ಹಾಲ್‌ಗೆ ಕರೆತರುವ ಜವಾಬ್ದಾರಿಯೂ ಉಪನ್ಯಾಸಕರು ಮತ್ತು ಪ್ರಾಂಶುಪಾಲರ ಹೆಗಲಿಗೇ ಬಿದ್ದಿದೆ ಎಂದರೆ ತಪ್ಪಾಗಲಾರದು. ಪರೀಕ್ಷೆಯ ದಿನಾಂಕ ಹತ್ತಿರ ಬಂದಾಗ ಉಪನ್ಯಾಸಕರೇ ವಿದ್ಯಾರ್ಥಿಗಳಿಗೆ ವೈಯಕ್ತಿಕವಾಗಿ ಫೋನ್ ಮಾಡಿ, "ಇನ್ನಂತಹ ದಿನ, ಇಂತಹ ವಿಷಯದ ಪರೀಕ್ಷೆ ಇದೆ, ದಯವಿಟ್ಟು ಬಂದು ಪರೀಕ್ಷೆ ಬರೆಯಿರಿ" ಎಂದು ಬರೆಸಬೇಕಾದ ವಿಪರ್ಯಾಸವಿದೆ. ಪ್ರಸ್ತುತ ಶಿಕ್ಷಣ ವ್ಯವಸ್ಥೆಯು ಕೇವಲ ಒಂದು 'ಫೋನ್ ಕಾಲ್ ಶಿಕ್ಷಣ ಪದ್ಧತಿ'ಯಾಗಿ ಮಾರ್ಪಟ್ಟಿರುವುದು ದುರದೃಷ್ಟಕರ.

ಒಂದೆಡೆ ತರಗತಿಗಳಿಗೆ ಬಾರದೆ ಶಿಕ್ಷಣದಿಂದ ವಿಮುಖರಾಗುತ್ತಿರುವ ವಿದ್ಯಾರ್ಥಿಗಳು, ಮತ್ತೊಂದೆಡೆ ತಮ್ಮ ಅಮೂಲ್ಯವಾದ ಸಮಯವನ್ನು ಮೊಬೈಲ್ ಸ್ಕ್ರೀನ್‌ಗಳ ಮುಂದೆ, ಮುಖ್ಯವಾಗಿ ಸೋಷಿಯಲ್ ಮೀಡಿಯಾ 'ರೀಲ್ಸ್' ವೀಕ್ಷಿಸುತ್ತಾ ಕಳೆಯುತ್ತಿದ್ದಾರೆ. ಈ ರೀಲ್ಸ್ ಮತ್ತು ಶಾರ್ಟ್ ವೀಡಿಯೋಗಳು ತರುವ ಕ್ಷಣಿಕ ಆಕರ್ಷಣೆ ಹಾಗೂ ವ್ಯಸನವು ಯುವ ಸಮೂಹದ ಆಲೋಚನಾ ಸಾಮರ್ಥ್ಯ, ಏಕಾಗ್ರತೆ ಮತ್ತು ಸೃಜನಶೀಲತೆಯನ್ನು ಸಂಪೂರ್ಣವಾಗಿ ನಾಶಮಾಡುತ್ತಿದೆ.

ಕಾಲೇಜಿನ ಫಲಿತಾಂಶ ಶೂನ್ಯ ಬಂದರೆ ಇಲಾಖೆಯಿಂದ ಬರುವ ನೋಟಿಸ್‌ಗೆ ಹೆದರಿ, ಉಪನ್ಯಾಸಕರು ತಾವೇ ಕಾಳಜಿ ವಹಿಸಿ, ಬಲವಂತವಾಗಿ ವಿದ್ಯಾರ್ಥಿಗಳಿಂದ ಪರೀಕ್ಷೆ ಬರೆಸಿ ಪ್ರಮಾಣಪತ್ರವನ್ನು ಕೈಗಿಡುವಂತಾಗಿದೆ. ಇದು ವಿದ್ಯಾರ್ಥಿಯ ಜ್ಞಾನಾರ್ಜನೆಗಿಂತ ವ್ಯವಸ್ಥೆಯ "ಉಳಿವಿನ" ಪ್ರಶ್ನೆಯಾಗಿದೆ. ಇಡೀ ವರ್ಷ ಓದದೆ, ಕೇವಲ ಪರೀಕ್ಷೆಯ ಹಿಂದಿನ ದಿನ ಏನೋ ಸ್ವಲ್ಪ ಓದಿ ಅಥವಾ ಕಾಪಿ ಮಾಡಿ ಪರೀಕ್ಷೆ ಬರೆದು ಪಡೆಯುವ ಆ ಅಂಕಪಟ್ಟಿಯಿಂದ ಸಿಗುವ ಜ್ಞಾನವಾದರೂ ಏನು? ಇಂತಹ ಜ್ಞಾನಶೂನ್ಯ ಪದವೀಧರರು ನಾಳೆ ಸಮಾಜಕ್ಕೆ ನೀಡುವ ಕೊಡುಗೆಯಾದರೂ ಏನು ಎಂಬುದು ಪ್ರಜ್ಞಾವಂತರಿಗೆ ಕಾಡುವ ಇಂದಿನ ಯಕ್ಷಪ್ರಶ್ನೆಯಾಗಿದೆ.

ಪ್ರಸ್ತುತ ಪದವಿ ಶಿಕ್ಷಣ ವ್ಯವಸ್ಥೆಯು ವಿದ್ಯಾರ್ಥಿಗಳ ಬೌದ್ಧಿಕ ವಿಕಾಸ, ನೈತಿಕ ಮೌಲ್ಯಗಳು ಅಥವಾ ನೈಜ ಕೌಶಲ್ಯಗಳನ್ನು ವೃದ್ಧಿಸುವಲ್ಲಿ ಸಂಪೂರ್ಣವಾಗಿ ವಿಫಲವಾಗಿ, ಕೇವಲ ಅಂಕ ಕೇಂದ್ರಿತ ಮೌಲ್ಯಮಾಪನಕ್ಕೆ ಸೀಮಿತವಾಗಿದೆ ಎನಿಸುತ್ತಿದೆ. ಇದರ ಪರಿಣಾಮವಾಗಿ, ಪದವಿ ಮುಗಿದರೂ ಕನಿಷ್ಠ ಸಂವಹನ ಕೌಶಲ್ಯವಾಗಲಿ ಅಥವಾ ಒಂದು ಅರ್ಜಿಯನ್ನು ಬರೆಯುವ ಕನಿಷ್ಠ ಸಾಮರ್ಥ್ಯವಾಗಲಿ ಇಲ್ಲದ ಲಕ್ಷಾಂತರ ನಿರುದ್ಯೋಗಿ ಯುವಕರನ್ನು ಸೃಷ್ಟಿಸುವ ಕೇಂದ್ರಗಳಾಗಿ ಕಾಲೇಜುಗಳು ಬದಲಾಗುತ್ತಿವೆಯೇ?. ವಿದ್ಯಾರ್ಥಿಗಳಲ್ಲಿ ಕಲಿಯಬೇಕೆಂಬ ಹಸಿವಿಲ್ಲದಿರುವುದು ಒಂದು ಕಡೆಯಾದರೆ, ಪೋಷಕರು ತಮ್ಮ ಮಕ್ಕಳ ದಿನನಿತ್ಯದ ಚಟುವಟಿಕೆಗಳು ಹಾಗೂ ಮೊಬೈಲ್ ಬಳಕೆಯ ಮೇಲೆ ನಿಗಾ ಇಡದೆ ಜವಾಬ್ದಾರಿಯಿಂದ ನುಣುಚಿಕೊಳ್ಳುತ್ತಿರುವುದು ಈ ದುಃಸ್ಥಿತಿಗೆ ಪ್ರಮುಖ ಕಾರಣವಾಗಿದೆ ಎಂದರೆ ತಪ್ಪಾಗಲಾರದು.

ಈ ಶೈಕ್ಷಣಿಕ ಮುಗ್ಗಟ್ಟಿನಿಂದ ಹೊರಬರಬೇಕಾದರೆ ಕಾಗದದ ಮೇಲಿನ ಸುಧಾರಣೆಗಳನ್ನು ಬದಿಗಿಟ್ಟು, ತಳಮಟ್ಟದಲ್ಲಿ ಕಠಿಣ ನಿಯಮಗಳನ್ನು ಜಾರಿಗೆ ತರಬೇಕಿದೆ. ಕಾಲೇಜುಗಳಲ್ಲಿ ಬಯೋಮೆಟ್ರಿಕ್ ವ್ಯವಸ್ಥೆಯ ಮೂಲಕ ಹಾಜರಾತಿಯನ್ನು ಕಡ್ಡಾಯಗೊಳಿಸಿ, ನಿಗದಿತ ಹಾಜರಾತಿ ಇಲ್ಲದವರನ್ನು ಪರೀಕ್ಷೆಯಿಂದ ವಂಚಿತಗೊಳಿಸುವ ಮೂಲಕ ಶಿಸ್ತು ಮೂಡಿಸಬೇಕಿದೆ; ಜೊತೆಗೆ ಪೋಷಕರು ತಮ್ಮ ಮಕ್ಕಳ ಕಾಲೇಜು ಹಾಜರಾತಿಯ ಬಗ್ಗೆ ಜಾಗೃತರಾಗಬೇಕಿದೆ. ಎಲ್ಲಕ್ಕಿಂತ ಮುಖ್ಯವಾಗಿ, ಕೇವಲ ಥಿಯರಿ ಪರೀಕ್ಷೆಗಳ ಬದಲಾಗಿ ಪ್ರಾಯೋಗಿಕ, ನೈತಿಕ ಮತ್ತು ಉದ್ಯೋಗ ಆಧಾರಿತ, ಕೌಶಲ್ಯಾಧಾರಿತ ಶಿಕ್ಷಣಕ್ಕೆ ಹೆಚ್ಚಿನ ಆದ್ಯತೆ ನೀಡಬೇಕಾಗಿದೆ.

ಶಿಕ್ಷಣ ವ್ಯವಸ್ಥೆಯು ಕೇವಲ ಸರ್ಟಿಫಿಕೇಟ್ ನೀಡುವ ವ್ಯಾಪಾರಿ ಅಂಗಡಿಯಾಗುವ ಮುನ್ನ, ಅದು ಬದುಕನ್ನು ಎದುರಿಸುವ ಜ್ಞಾನ ಮತ್ತು ವಿವೇಕವನ್ನು ನೀಡುವಂತಾಗಲು ಸರ್ಕಾರ, ಶಿಕ್ಷಣ ತಜ್ಞರು ಹಾಗೂ ಇಡೀ ಸಮಾಜ ಎಚ್ಚೆತ್ತುಕೊಳ್ಳುವುದು ಇಂದಿನ ತುರ್ತು ಅಗತ್ಯವಾಗಿದೆ ಅಲ್ಲವೆ?

**ನೆಪಗಳ ನಡುವೆ ಕಳೆದುಹೋಗದಿರಲಿ ಕಾಲೇಜು ಜೀವನ**

ತರಗತಿ ಚರ್ಚೆ, ಉಪನ್ಯಾಸ, ಗ್ರಂಥಾಲಯದ ಓದು, ಸಾಂಸ್ಕೃತಿಕ ಚಟುವಟಿಕೆಗಳು, ಎನ್ ಎಸ್ ಎಸ್ ಹಾಗೂ ಕ್ರೀಡೆಗಳಿಂದ ದೂರ ಉಳಿಯುವ ಮೂಲಕ ವಿದ್ಯಾರ್ಥಿಗಳು ತಮ್ಮ ಬದುಕಿಗೆ ಅಗತ್ಯವಾದ ವ್ಯಕ್ತಿತ್ವ ವಿಕಸನದ ಅವಕಾಶಗಳನ್ನು ಕಳೆದುಕೊಳ್ಳುತ್ತಿದ್ದಾರೆ. ದಾಖಲಾತಿ ಪಡೆದರೂ ವಿದ್ಯಾರ್ಥಿಗಳು ಕಾಲೇಜಿಗೆ ಬಾರದಿರುವುದು ತರಗತಿಗಳ ವಾತಾವರಣವನ್ನು ಹಾಳುಮಾಡುತ್ತಿದೆ. ಹಾಜರಾತಿ ಕೊರತೆಯು ಶಿಕ್ಷಣದ ಗುಣಮಟ್ಟದ ಮೇಲೆ ನೇರ ಪರಿಣಾಮ ಬೀರುತ್ತಿದ್ದು, ಸಂಸ್ಥೆಗಳು ಅನಿವಾರ್ಯ ಪರಿಸ್ಥಿತಿಯಲ್ಲಿ ಕಾರ್ಯನಿರ್ವಹಿಸುವಂತಾಗಿದೆ. ಹಾಗಾಗಿ ಸ್ಪರ್ಧಾತ್ಮಕ ಪರೀಕ್ಷೆಗಳ ಸಿದ್ಧತೆ ಮತ್ತು ಉದ್ಯೋಗದ ಹುಡುಕಾಟದ ನೆಪದಲ್ಲಿ ಕಾಲೇಜು ಶಿಕ್ಷಣವನ್ನು ಪೂರ್ಣವಾಗಿ ನಿರ್ಲಕ್ಷಿಸುವುದು ಸರಿಯಲ್ಲ. ವಿದ್ಯಾರ್ಥಿಗಳು ಇವೆರಡರ ನಡುವೆ ಸಮತೋಲನ ಕಾಯ್ದುಕೊಳ್ಳಬೇಕಾಗಿದೆ.

Printed, Published and Owned by: Ramesh Reddy and Printed at Metropolitan Media Company Ltd., Plot No.224, in Sy.No.41/2, 41/B & 42, Kapnoor 2nd stage, Industrial Area, Kalburagi-585104. Published at Sy.No. 466, TMC No. 22-405, First Floor, Gada Complex, Opp. Inspection Bungalow, Humnabad-585330.Editor: Ramesh Reddy, Office Ph. No: +91 9449732000, Telephone Number:08483200222

PRGI NO. (RNINO:KARKAN/2011/48371)